# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ಎಂ.ಎಸ್. ವಿಕಾಸ್

ದಾವಣಗೆರೆ
ಭಾನುವಾರ, ಡಿಸೆಂಬರ್ 29, 2024

ಸಂಪುಟ : 51 ಸಂಚಿಕೆ : 226 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com



Narayana Health

ಸೂಪರ್ ಸ್ಪೆಷಾಲಿಟಿ ಸೇವೆಗಳಿಗಾಗಿ ನಿಮ್ಮ ವಿಶ್ವಾಸಾರ್ಹ ಆಸ್ಪತ್ರೆ

ಎಸ್ ಎಸ್ ನಾರಾಯಣ ಹೆಲ್ತ್, ದಾವಣಗೆರೆ



ಹೃದಯ ಆರೈಕೆ | ನರರೋಗ ಆರೈಕೆ | ಕಿಡ್ನಿ ಆರೈಕೆ | ಮೂತ್ರಕೋಶ ಆರೈಕೆ | ಗ್ಯಾಸ್ಟ್ರೋ ಸೈನ್ಸಸ್

ಎನ್ ಎಚ್-4, ಬೈಪಾಸ್ ರಸ್ತೆ, ದಾವಣಗೆರೆ | Take Care | 1800 309 0309 | www.narayanahealth.org


# ಹೂವೇ ಚಂದ, ಹೂವಿನ ಕಲಾಕೃತಿ ಬಲು ಅಂದ

## ಗಾಜಿನ ಮನೆಯಲ್ಲಿ ಕಣ್ಮನ ಸೆಳೆಯುತ್ತಿದೆ ಫಲಪುಷ್ಪ ಪ್ರದರ್ಶನ

ದಾವಣಗೆರೆ, ಡಿ. 28- ಗಾಜಿನ ಮನೆಯ ಒಳ ಪ್ರವೇಶಿಸುತ್ತಲೇ ಸಿರಿಧಾನ್ಯದ ರಂಗೋಲಿ, ಚಿಕ್ಕ ಮನೆಯೊಂದರ ಮುಂದೆ ಎತ್ತಿನ ಸಹಿತ ರೈತ ದಂಪತಿಯ ಕಲಾಕೃತಿ, ಕಣ್ಣೆತ್ತಿ ನೋಡಿದರೆ ಬಣ್ಣ ಬಣ್ಣದ ಹೂವಿನ ಸಂಸತ್ ಭವನ, ಎಡಕ್ಕೆ ಹೊರಳಿದರೆ ಸಂವಿಧಾನ ಶಿಲ್ಪಿಯ ಜೀವನ ಚರಿತ್ರೆ, ಬಲಕ್ಕೆ ಬೆಲ್ಲದ ಪುಷ್ಕರಣಿ...

ಹೌದು, ನಗರದ ಗಾಜಿನ ಮನೆಯಲ್ಲಿ ತೋಟಗಾರಿಕೆ ಇಲಾಖೆಯಿಂದ ಆಯೋಜಿಸಲಾಗಿರುವ ಫಲ ಪುಷ್ಪ ಪ್ರದರ್ಶನ ನೋಡುಗರ ಕಣ್ಮನ ಸೆಳೆಯುತ್ತಿದೆ.

8 ಲಕ್ಷಕ್ಕೂ ಅಧಿಕ ಸಂಖ್ಯೆಯ ಬಿಳಿ, ಹಳದಿ, ನೇರಳೆ ಬಣ್ಣದ ಸೇವಂತಿಗೆ ಹೂಗಳಿಂದ ಕೂಡಿದ ಸಂಸತ್ ಭವನ ಮಾದರಿಯೇ ಈ ಬಾರಿಯ ಪ್ರಮುಖ ಆಕರ್ಷಣೆಯಾಗಿದೆ. 16ಅಡಿ ಎತ್ತರ ಹಾಗೂ 32ಅಡಿ ಅಗಲ ಮತ್ತು 32ಅಡಿ ಎತ್ತರವಿದ್ದು ನಾಲ್ಕು ಸಿಂಹಗಳ ಅಶೋಕಸ್ತಂಭವನ್ನೂ ಮಾಡಲಾಗಿದೆ.

12 ಅಡಿ ಎತ್ತರ, 8 ಅಡಿ ಉದ್ದ ಹಾಗೂ 8 ಅಡಿ ಅಗಲದ ಬಸವ ಮಂಟಪದ ಕಲಾಕೃತಿ, 6 ಅಡಿ ಎತ್ತರದ ಗೌತಮ ಬುದ್ಧನ ಕಲಾಕೃತಿಯನ್ನು ಲಕ್ಷಕ್ಕೂ ಹೆಚ್ಚು ಸೇವಂತಿಗೆ ಹೂಗಳಿಂದ ರಚಿಸಲಾಗಿದೆ.

ಇನ್ನೂ ಹೂವಿನ ಸಂಸತ್ ಮುಂಭಾಗ ಡಾ. ಅಂಬೇಡ್ಕರ್ ಅವರ ಎರಡು ಆಯಾಮದ (2ಡಿ) ವರ್ಣ ಚಿತ್ರದ ಕಲಾಕೃತಿ ಸ್ಥಾಪಿಸಲಾಗಿದೆ. ಎರಡೂ ಬದಿ ದೊಡ್ಡ ಗಾತ್ರದ ಸಂವಿಧಾನ ಪುಸ್ತಕದ ಮಾದರಿಗಳನ್ನು ಇಡಲಾಗಿದೆ. ಅಂಬೇಡ್ಕರ್ ಅವರ ವಂಶವೃಕ್ಷದ ಅನಾವರಣವೂ ಇಲ್ಲಿ ಮಾಡಲಾಗಿದ್ದು ಪೂರ್ವಜರ ಪುತ್ಥಳಿ, (2ನೇ ಪುಟಕ್ಕೆ)

### ಜನವರಿ 1ರವರೆಗೆ ಅವಕಾಶ

ಫಲ ಪುಷ್ಪ ಪ್ರದರ್ಶನ ವೀಕ್ಷಣೆಗೆ ಜನವರಿ 1ವರೆಗೆ ಅವಕಾಶವಿದೆ. ಬೆಳಿಗ್ಗೆ 10ಗಂಟೆಯಿಂದ ರಾತ್ರಿ 9ಗಂಟೆವರೆಗೆ ವೀಕ್ಷಿಸಬಹುದಾಗಿದೆ. ಪ್ರವೇಶ ಶುಲ್ಕ ವಯಸ್ಕರಿಗೆ 30ರೂ. ಮತ್ತು ಮಕ್ಕಳಿಗೆ 10ರೂ. ಶಾಲೆಗಳಿಂದ ಸಾಮೂಹಿಕವಾಗಿ ಬರುವ ವಿದ್ಯಾರ್ಥಿಗಳಿಗೆ ಉಚಿತ ಪ್ರದರ್ಶನಕ್ಕೆ ಅವಕಾಶ ಮಾಡಿಕೊಡಲಾಗಿದೆ ಎಂದು ತೋಟಗಾರಿಕೆ ಇಲಾಖೆ ಉಪ ನಿರ್ದೇಶಕ ರಾಘವೇಂದ್ರ ತಿಳಿಸಿದ್ದಾರೆ.

### ಹೂವಿನ ಲೋಕ

ಈ ಬಾರಿ ಆಯೋಜಿಸಲಾಗಿರುವ ಫಲಪುಷ್ಪ ಪ್ರದರ್ಶನದಲ್ಲಿ 46ಬಗೆಯ 15ಸಾವಿರಕ್ಕೂ ಹೆಚ್ಚು ವಿವಿಧ ಅಲಂಕಾರಿಕ ಗಿಡಗಳು ಮತ್ತು ಹೂವಿನ ಗಿಡಗಳ ವಿವಿಧ ಕಲಾತ್ಮಕ ವಿನ್ಯಾಸಗಳ ಜೋಡಣೆ ಮಾಡಲಾಗಿದೆ. ಸಾಲ್ವಿಯಾ, ಪೆಟುನಿಯಾ, ಬೆಗೋನಿಯಾ, ಟೋರೆನಿಯಾ, ಜಿನಿಯಾ, ಸೇವಂತಿಗೆ, ಚೆಂಡು, ಪೆಂಟಾಸ್, ಸೆಲೋಸಿಯಾ, ಡೇರೆ ಹೂವು, ಡಯಾಂಥಸ್, ಬಾಲ್ಸಮ್, ಸ್ಕೋಬಿಲಾಂಥಸ್ ಪ್ರಮುಖವಾಗಿವೆ.











### ಮಾರಾಟವೂ ಇದೆ, ಮಕ್ಕಳಿಗೆ ಆಟವೂ ಇದೆ

ಗಾಜಿನ ಮನೆಯ ಹೊರ ಆವರಣದಲ್ಲಿ ಸಿರಿಧಾನ್ಯ ಉತ್ಪನ್ನ, ಸಾವಯವ ವಸ್ತುಗಳ ಪ್ರದರ್ಶನ ಹಾಗೂ ಮಾರಾಟ ವ್ಯವಸ್ಥೆಯೂ ಮಾಡಲಾಗಿದೆ. ತಿಂಡಿ ತಿನಿಸು ಸೇರಿದಂತೆ ವಿವಿಧ ಉತ್ಪನ್ನಗಳ ವಾಣಿಜ್ಯ ಮಳಿಗೆಗಳು, ಮಕ್ಕಳಿಗಾಗಿ ಉಯ್ಯಾಲೆ ಸೇರಿದಂತೆ ವಿವಿಧ ಆಟಿಕೆ ಯಂತ್ರಗಳನ್ನೂ ಅಳವಡಿಸಿ ಸರ್ವರನ್ನು ಆಕರ್ಷಿಸುವ ವ್ಯವಸ್ಥೆ ಮಾಡಲಾಗಿದೆ.

# ಕೆಎಸ್ಸಾರ್ಟಿಸಿ ಪ್ರಯಾಣ ದರ ಏರಿಕೆಗೆ ಶಿಫಾರಸ್ಸು



- ಸರ್ಕಾರದ ಶಕ್ತಿ ಯೋಜನೆಯಿಂದ ಪ್ರಯಾಣಿಕರ ಸಂಖ್ಯೆ ಹೆಚ್ಚಳ
- ಎಲ್ಲರಿಗೂ ಮೂಲ ಸೌಕರ್ಯ ನೀಡಲು ಕಷ್ಟ ಎಂದ ನಿಗಮ
- ಬಸ್ ಪ್ರಯಾಣ ದರ ಹೆಚ್ಚಳಕ್ಕೆ ಬಿಜೆಪಿ ತೀವ್ರ ಆಕ್ಷೇಪ
- ನಿಗಮದ ಆಸ್ತಿ ಮಾರಾಟಕ್ಕೆ ಹೊರಟ ಸರ್ಕಾರ ಎಂದು ಕಿಡಿ

ಬೆಂಗಳೂರು, ಡಿ. 28- ರಾಜ್ಯ ರಸ್ತೆ ಸಾರಿಗೆ ಬಸ್ ಪ್ರಯಾಣ ದರವನ್ನು ಶೇಕಡ 15ರಷ್ಟು ಹೆಚ್ಚಳ ಮಾಡುವಂತೆ ಮುಖ್ಯಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ನೇತೃತ್ವದ ಉನ್ನತ ಮಟ್ಟದ ಸಮಿತಿ ಶಿಫಾರಸು ಮಾಡಿದೆ.

ನಿಗಮ ಕಳೆದ 2020ರಿಂದ ಪ್ರಯಾಣ ದರ ಪರಿಷ್ಕರಣೆ ಮಾಡದೆ, ಭಾರೀ ನಷ್ಟಕ್ಕೆ ಗುರಿಯಾಗಿದೆ.

ವಾರ್ಷಿಕ 3,650 ಕೋಟಿ ರೂ. ನಿಗಮಕ್ಕೆ ಹೊರೆಯಾಗುತ್ತಿದ್ದು, ಪ್ರಯಾಣ ದರ ಪರಿಷ್ಕರಣೆ ನಂತರ ನಷ್ಟದ ಪ್ರಮಾಣ 1,800 ಕೋಟಿ ರೂ.ಗಳಿಗೆ ಇಳಿಯುತ್ತದೆ.

ನಿಗಮಕ್ಕೆ ಆಗುತ್ತಿರುವ ನಷ್ಟವನ್ನು ಪ್ರತಿ ಬಾರಿಯೂ ಭರಿಸಲಾಗದು, ಸಂಪನ್ಮೂಲ ಕ್ರೋಢೀಕರಣಕ್ಕೆ ದರ ಹೆಚ್ಚಳ ಜೊತೆಗೆ ಪಾರ್ಸೆಲ್ ಸೇವೆಯನ್ನೂ ಅನುಷ್ಠಾನಗೊಳಿಸಿ, ನಿಗಮದ ಸೇವೆಗಳನ್ನು ಸಾರ್ವಜನಿಕರಿಗೆ ಪರಿಣಾಮಕಾರಿಯಾಗಿ ತಿಳಿಸಿ, ಸಂಸ್ಥೆಯಲ್ಲಿರುವ 200 ಎಕರೆ ಭೂಮಿಯನ್ನು ಆದಾಯ ಕ್ರೋಢೀಕರಣಕ್ಕಾಗಿ ಕರ್ನಾಟಕ ಗೃಹ ಮಂಡಳಿ, ಕರ್ನಾಟಕ ಕೈಗಾರಿಕಾ ಮೂಲಸೌಕರ್ಯ ಅಭಿವೃದ್ಧಿ ನಿಗಮದ ಸಹಭಾಗಿತ್ವದಲ್ಲಿ ಯೋಜನೆಗಳನ್ನು ರೂಪಿಸಬೇಕು ಎಂದಿದ್ದಾರೆ.

ಶಕ್ತಿ ಯೋಜನೆ ಜಾರಿ ನಂತರ ಪ್ರತಿನಿತ್ಯ ಪ್ರಯಾಣಿಕರ ಸಂಖ್ಯೆ 80 ಲಕ್ಷದಿಂದ 1.05 ಕೋಟಿಗೆ ಏರಿಕೆಯಾಗಿದೆ. ಅದರಲ್ಲಿ 26 ಲಕ್ಷ ಮಹಿಳೆಯರು ಸೇರಿದ್ದಾರೆ, ಸರ್ಕಾರ ನೀಡುವ ಸಬ್ಸಿಡಿ ಜೊತೆಗೆ ನಿಗಮಗಳು ಸಂಪನ್ಮೂಲ ಕ್ರೋಢೀಕರಣಕ್ಕೆ ಹೆಚ್ಚು ಒತ್ತು ನೀಡದಿದ್ದರೆ ಪ್ರಯಾಣಿಕರಿಗೆ (2ನೇ ಪುಟಕ್ಕೆ)

# ಬಸವ ತತ್ವ ಪಾಲಕರೆಂದು ಕರೆಸಿಕೊಂಡ ಕೆಲವರು ಪ್ರಚಾರ, ಪಲ್ಲಂಗದಲ್ಲಿ ತಲ್ಲೀನ

**ವಿಜಯಪುರದ ಶರಣ ಚಿಂತಕ ಡಾ.ಜೆ.ಎಸ್.ಪಾಟೀಲ್**

ಹರಿಹರ, ಡಿ. 28- ರಾಮ ಮತ್ತು ರಾವಣನ ನಡುವಿನ ಯುದ್ಧ ವಾಸ್ತವವಾಗಿ ಆರ್ಯ ಮತ್ತು ದ್ರಾವಿಡರ ನಡುವಿನ ಯುದ್ಧವಾಗಿದೆ ಎಂದು ವಿಜಯಪುರದ ಶರಣ ಚಿಂತಕ ಡಾ. ಜೆ.ಎಸ್.ಪಾಟೀಲ್ ಹೇಳಿದರು.

ಹೊರವಲಯದ ಮೈತ್ರಿವನದಲ್ಲಿ ಶನಿವಾರ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ದಾವಣಗೆರೆ ತಾಲ್ಲೂಕು ಘಟಕ ಹಾಗೂ ಮಾನವ ಬಂಧುತ್ವ ವೇದಿಕೆ ಆಶ್ರಯದಲ್ಲಿ ಲಿಂಗಾಯತ ಧರ್ಮದ ಇತಿಹಾಸ, ಸಿದ್ಧಾಂತ ಹಾಗೂ ಸಂಘಟನೆ ಕುರಿತು ಅಧ್ಯಯನ ಶಿಬಿರದ ಉದ್ಘಾಟನೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ವಿದೇಶದಿಂದ ದನಗಳನ್ನು ಮೇಯಿಸುತ್ತಾ ಆರ್ಯರು ಭಾರತಕ್ಕೆ ಬಂದು ನೆಲೆಸಿದರು. ಅವರು ಭಾರತದ ಮೂಲ ನಿವಾಸಿಗಳಾದ ದ್ರಾವಿಡರನ್ನು ಯುದ್ಧ ಮಾಡುವ ಮೂಲಕ ದಕ್ಷಿಣಕ್ಕೆ ಹಿಮ್ಮೆಟ್ಟಿಸಿದರು. ವಾಸ್ತವವಾಗಿ ರಾಮ ಮತ್ತು ರಾವಣನ ಮಧ್ಯೆ ನಡೆದ ಯುದ್ಧವು ದೇವರು ಮತ್ತು ರಾಕ್ಷಸನ ಮಧ್ಯೆ ನಡೆದ ಯುದ್ಧವಲ್ಲ, ಅದು ಆರ್ಯ ಮತ್ತು ದ್ರಾವಿಡರ ನಡುವೆ ನಡೆದ ಯುದ್ಧವಾಗಿದೆ ಎಂದರು.

ಬಸವಣ್ಣನ ತತ್ವ ಪಾಲಕರೆಂದು ಗುರುತಿಸಿಕೊಂಡಿರುವ ನಾಡಿನ ಕೆಲವು ಮಠಗಳು ಹಾಗೂ ಅನುಯಾಯಿಗಳು ಪೂಜೆ, ಪ್ರಚಾರ ಮತ್ತು ಪಲ್ಲಂಗದ ವಿಷಯಗಳಲ್ಲಿ ಕಳೆದು ಹೋಗಿದ್ದಾರೆ ಎಂದು ಆರೋಪಿಸಿದರು.

ಪಂಚಪೀಠಗಳ ಸಾರಥ್ಯ ವಹಿಸಿದವರು ಲಿಂಗಾಯತ ಪರಂಪರೆಯನ್ನು ತಿರುಚಿ ವೀರಶೈವ ಎಂದು ಮಿಶ್ರಣಗೊಂಡ ಪರಂಪರೆ ಸೃಷ್ಟಿಸುತ್ತಿದ್ದಾರೆ. ಬಸವಣ್ಣನವರು ಹಾಗೂ ಶರಣರು ವೈದಿಕತೆಯ ವಿರುದ್ಧವಾಗಿ ಲಿಂಗಾಯತ ಪರಂಪರೆಯನ್ನು ಬೆಳೆಸಿದರು, ಆದರೆ ಆ (2ನೇ ಪುಟಕ್ಕೆ)



## ಉಜ್ಜಯಿನಿ ಜಗದ್ಗುರುಗಳ ಸಂಭ್ರಮದ ಅಡ್ಡ ಪಲ್ಲಕ್ಕಿ

ಉಜ್ಜಯಿನಿ ಸಮೀಪದ ಮಂಗಾಪುರ ಗ್ರಾಮದಲ್ಲಿ ಮಹೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಶ್ರೀ ಉಜ್ಜಯಿನಿ ಜಗದ್ಗುರು ಮಹಾ ಸನ್ನಿಧಿಯವರ ಅಡ್ಡ ಪಲ್ಲಕ್ಕಿ ಮಹೋತ್ಸವವು ಶನಿವಾರ ವಿಜೃಂಭಣೆಯಿಂದ ನಡೆಯಿತು.

# ಮಹಿಳಾ ಸಮ್ಮಾನ್ ಯೋಜನೆ ಹೆಸರಿನಲ್ಲಿ ಮಾಹಿತಿ ಸಂಗ್ರಹ : ತನಿಖೆಗೆ ಸಕ್ಸೇನಾ ಆದೇಶ

ನವದೆಹಲಿ, ಡಿ. 28- ಮಹಿಳಾ ಸಮ್ಮಾನ್ ಯೋಜನೆಯ ಹೆಸರಿನಲ್ಲಿ ಮಹಿಳೆಯರ ವೈಯಕ್ತಿಕ ದಾಖಲೆಗಳನ್ನು ಸಂಗ್ರಹಿಸುತ್ತಿರುವ ಆರೋಪದ ಬಗ್ಗೆ ತನಿಖೆ ನಡೆಸುವಂತೆ ದೆಹಲಿಯ ಲೆಫ್ಟಿನೆಂಟ್ ಗೌರ್ನರ್ ವಿ.ಕೆ. ಸಕ್ಸೇನಾ ಆದೇಶಿಸಿದ್ದಾರೆ.

ಚುನಾವಣೆಗೆ ಮುಂಚೆ ಈ ರೀತಿಯ ಅಭಿಯಾನ ನಡೆಯುತ್ತಿರುವ ಬಗ್ಗೆ ಚುನಾವಣಾ ಆಯುಕ್ತರಿಗೆ ಮುಖ್ಯ ಚುನಾವಣಾ ಅಧಿಕಾರಿಯ ಮೂಲಕ ಮಾಹಿತಿ ನೀಡಬೇಕು ಎಂದೂ ಲೆಫ್ಟಿನೆಂಟ್ ಗೌರ್ನರ್ ತಿಳಿಸಿದ್ದಾರೆ.

ಕಾಂಗ್ರೆಸ್ ನಾಯಕ (4ನೇ ಪುಟಕ್ಕೆ)


# ಪಿಎಂ ಕೇರ್ಸ್ ದೇಣಿಗೆ 912 ಕೋಟಿ ರೂ. ಗಳಿಗೆ ಇಳಿಕೆ

ನವದೆಹಲಿ, ಡಿ. 28- ಪಿ.ಎಂ. ಕೇರ್ಸ್ ನಿಧಿಗೆ 2022-23 ರ ಸಾಲಿನಲ್ಲಿ 912 ಕೋಟಿ ರೂ.ಗಳ ದೇಣಿಗೆ ದೊರೆತಿದೆ. 2020ರ ಮಾರ್ಚ್‌ನಲ್ಲಿ ಕೊರೊನಾ ಸೋಂಕು ಹರಡಿದ ನಂತರ ಈ ನಿಧಿ ಸ್ಥಾಪಿಸಲಾಗಿತ್ತು. 2022-23ರ ಸಾಲಿನಲ್ಲಿ ಅತಿ ಕಡಿಮೆ ದೇಣಿಗೆ ದೊರೆತಿದೆ.

ಪಿಎಂ ಕೇರ್ಸ್ ಮಾಹಿತಿಯ ಪ್ರಕಾರ 2020-21ರಲ್ಲಿ ಅತಿ ಹೆಚ್ಚಿನ 7,184 ಕೋಟಿ ರೂ. ದೇಣಿಗೆ ದೊರೆತಿತ್ತು. 2021-22ರಲ್ಲಿ 1,938 ಕೋಟಿ ರೂ.ಗಳಿಗೆ ಇಳಿಕೆಯಾಗಿತ್ತು.

ಈ ನಿಧಿಗೆ ವಿದೇಶಿ ದೇಣಿಗೆ ಸಹ ಕಡಿಮೆಯಾಗಿದೆ. 2020-21ರಲ್ಲಿ 495 ಕೋಟಿ ರೂ.ಗಳ ವಿದೇಶಿ ದೇಣಿಗೆ ದೊರೆತಿತ್ತು. ಮುಂದಿನ ಎರಡು ವರ್ಷಗಳಲ್ಲಿ ಇದು ಕ್ರಮವಾಗಿ 40 ಕೋಟಿ ರೂ. ಹಾಗೂ 2.57 ಕೋಟಿ ರೂ.ಗಳಿಗೆ ಇಳಿಕೆಯಾಗಿದೆ. 2022-23ರಲ್ಲಿ ಈ ನಿಧಿಯ 439 ಕೋಟಿ ರೂ. (3ನೇ ಪುಟಕ್ಕೆ)


ದ್ವಿತೀಯ ವರ್ಷದ ಪುಣ್ಯಸ್ಮರಣೆ



ದಿ॥ ಶ್ರೀಮತಿ ಅಲಗೂರು ಶಾಂತಮ್ಮನವರು
(ದಿ॥ ಶ್ರೀ ವೀರಭದ್ರಪ್ಪ ಅಲಗೂರು ಇವರ ಧರ್ಮಪತ್ನಿ)
ನಿಧನ : 29.12.2022

ನೀವು ಶಿವೈಕ್ಯರಾಗಿ ಇಂದಿಗೆ ಎರಡು ವರ್ಷಗಳಾದವು. ನಿಮ್ಮ ಪ್ರೀತಿ, ವಾತ್ಸಲ್ಯ, ಆದರ್ಶ, ಶಿಸ್ತು, ಪ್ರಾಮಾಣಿಕತೆ ನಮಗೆಲ್ಲಾ ದಾರಿದೀಪವಾಗಿದೆ. ಪರಮಾತ್ಮನು ನಿಮ್ಮ ಪವಿತ್ರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತಾ, ಸದಾ ನಿಮ್ಮ ಸ್ಮರಣೆಯಲ್ಲಿರುವ...

ಪ್ರಕಾಶ್ ವಿ. ಅಲಗೂರು, ಶ್ರೀ ಸಂತೋಷ್ .ಎಸ್.ವಿ ಮತ್ತು ಸಹೋದರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಮತ್ತು ಅಲಗೂರು ವಂಶಸ್ಥರು

✦ ಅಲಗೂರು ಪೇಂಟ್ಸ್ ✦ ಎಸ್.ವಿ ಟೂರ್ಸ್ ಅಂಡ್ ಟ್ರಾವೆಲ್ಸ್, ✦ ಎಸ್.ವಿ.ಟಿ ಟ್ರೇಡರ್ಸ್ ✦ ಗುಡ್ಡಿ ಬೀಡಾ ಸ್ಟಾಲ್,
ಹದಡಿ ರಸ್ತೆ, ದಾವಣಗೆರೆ.
ಮೊ : 94481 14919, 98441 58970, 74119 13202



REQUIRED

* Sales Man -10 (10th fail/Pass)
* Programming & Website Management
* BCA - 06 * MCA - 04

Contact :
Optical Paradise
MMK Complex, AVK College Road,Davangere-2.
Contact : 88614 29090

# ದರ ಏರಿಕೆಗೆ ಶಿಫಾರಸ್ಸು

**(1ನೇ ಪುಟದಿಂದ)** ಮೂಲಸೌಕರ್ಯ ನೀಡಲು ಕಷ್ಟಕರವಾಗುತ್ತದೆ. ಪರಿಸರ ಸಂರಕ್ಷಣೆ ದೃಷ್ಟಿಯಿಂದ ಕೇಂದ್ರ ಸರ್ಕಾರ ರಿಯಾಯಿತಿ ದರದಲ್ಲಿ ನೀಡುವ ವಿದ್ಯುತ್ ಚಾಲಿತ ಬಸ್‌ಗಳನ್ನು ಪಡೆಯಲು ಹೆಚ್ಚು ಆದ್ಯತೆ ಕೊಡಿ. ವಾಹನಗಳಿಗೆ ಜಿಪಿಎಸ್ ಸಾಧನ ಅಳವಡಿಕೆ ಮತ್ತು ಇ-ಆಡಳಿತಕ್ಕೆ ಹೆಚ್ಚು ಒತ್ತು ಕೊಡುವಂತೆ ತಿಳಿಸಿರುವುದಲ್ಲದೆ, ನಿಗದಿತ ದಿನಗಳೊಳಗೆ ಕಾರ್ಯಕ್ರಮ ರೂಪಿಸಲು ಆದೇಶ ಮಾಡಿದೆ.

ಸಭೆಯಲ್ಲಿ ಮುಖ್ಯಕಾರ್ಯದರ್ಶಿ ಅವರಲ್ಲದೆ, ಸಾರಿಗೆ ಇಲಾಖೆ ಕಾರ್ಯದರ್ಶಿ ಎನ್.ವಿ.ಪ್ರಸಾದ್, ವಿವಿಧ ಸಾರಿಗೆ ನಿಗಮಗಳ ವ್ಯವಸ್ಥಾಪಕರಾದ ವಿ.ಅನ್ಬುಕುಮಾರ್, ಆರ್.ರಾಮಚಂದ್ರನ್ ಸೇರಿದಂತೆ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

ಈ ಮಧ್ಯೆ, ಬಸ್ ಪ್ರಯಾಣ ದರ ಹೆಚ್ಚಳಕ್ಕೆ ಸಂಬಂಧಿಸಿದಂತೆ ರಾಜ್ಯ ಬಿಜೆಪಿ ಆಕ್ಷೇಪ ವ್ಯಕ್ತಪಡಿಸಿ, ಸಾರಿಗೆ ಇಲಾಖೆಯನ್ನು ಸಮಾದಿ ಮಾಡುವ ಮಟ್ಟಕ್ಕೆ ಈ ಸರ್ಕಾರ ತಂದು ನಿಲ್ಲಿಸಿದೆ ಎಂದಿದೆ.

ಸಾರಿಗೆ ಇಲಾಖೆ ನೌಕರರು ಡಿಸೆಂಬರ್ 31 ರಿಂದ ಪ್ರತಿಭಟನೆ ನಡೆಸಲು ಸಿದ್ಧರಾಗಿದ್ದು, ಅವರ ಬೆಂಬಲಕ್ಕೆ ಬಿಜೆಪಿ ನಿಲ್ಲಲಿದೆ.

ಪ್ರಾಮಾಣಿಕ ಅಧಿಕಾರಿಗಳು ಶೇಖರಿಸಿಟ್ಟ ನಿಗಮದ ಆಸ್ತಿಯನ್ನು ಮಾರಾಟ ಮಾಡಲು ಈ ಸರ್ಕಾರ ಹೊರಟಿದೆ ಎಂದು ಕಿಡಿಕಾರಿದೆ.

ಅಧಿಕಾರಿ, ಸಿಬ್ಬಂದಿಗೆ ವೇತನ ನೀಡಲು ಆಸ್ತಿ ಮಾರಾಟಕ್ಕೆ ಮುಂದಾಗಿದೆ, ಶಕ್ತಿ ಯೋಜನೆ ಜಾರಿ ನಂತರ ಸರ್ಕಾರ ಇದುವರೆಗೆ 7,401 ಕೋಟಿ ರೂ. ಕೊಡಬೇಕಿದೆ, ನಿಗಮದ ಮೇಲೆ 5,614 ಕೋಟಿ ರೂ. ಸಾಲದ ಹೊರೆ ಇದೆ. ಇಂತಹ ಸಂದಿಗ್ಧಸ್ಥಿತಿಯಲ್ಲಿ ಸರ್ಕಾರ ಮಧ್ಯೆ ಪ್ರವೇಶ ಮಾಡಿ ನಿಗಮ ಮತ್ತು ನೌಕರರನ್ನು ಉಳಿಸುವ ಬದಲು ದಿನನಿತ್ಯ ಬಡಾಯಿ ಕೊಚ್ಚಿಕೊಂಡು ತಿರುಗುತ್ತಿದೆ ಎಂದು ಬಿಜೆಪಿ ಲೇವಡಿ ಮಾಡಿದೆ.

## ಎಸ್‌ಎಸ್‌ಎಮ್ ರೆಸಿಡೆನ್ಶಿಯಲ್ ಪಬ್ಲಿಕ್ ಶಾಲೆಯಲ್ಲಿ ಜ್ಞಾನ ಮೇಳ



ದಾವಣಗೆರೆ, ಡಿ. 29 - ಎಸ್‌ಎಸ್‌ಎಮ್ ರೆಸಿಡೆನ್ಶಿಯಲ್ ಪಬ್ಲಿಕ್ ಶಾಲೆಯ ವಾರ್ಷಿಕ ವಿಜ್ಞಾನ ಪ್ರದರ್ಶನವು ಕಿರಿಯ ವಿಜ್ಞಾನಿಗಳ ಪ್ರತಿಭೆಯನ್ನು ಮೆರೆದ ಮಹಾ ಹಬ್ಬವಾಯಿತು. ಈ ವರ್ಷದ ವಿಷಯ 'ಉತ್ತಮ ಭವಿಷ್ಯಕ್ಕಾಗಿ ನಾವೀನ್ಯತೆ' ಆಗಿತ್ತು ಮತ್ತು ವಿದ್ಯಾರ್ಥಿಗಳ ನಿರೂಪಣೆಯು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

ಪ್ರದರ್ಶನದಲ್ಲಿ ಪುನಃಶ್ಚೇತನ ಶಕ್ತಿ, ರೋಬೋಟಿಕ್ಸ್, ಪರಿಸರ ಸಂರಕ್ಷಣೆ, ಆರೋಗ್ಯ ಮತ್ತು ಸುರಕ್ಷತೆ ಹೀಗೆ ನಾನಾ ವಿಭಾಗಗಳ ಮಾದರಿಗಳು ಎಲ್ಲರ ಗಮನ ಸೆಳೆದವು. ಜಲಸಿಂಚನೆಗಾಗಿ ಸ್ವಯಂಚಾಲಿತ ವ್ಯವಸ್ಥೆ, ವ್ಯರ್ಥ ವಸ್ತುಗಳ ಆಯ್ಕೆಗೆ ರೋಬೋಟ್, ಮತ್ತು ತುರ್ತು ಅಗತ್ಯ ಸಲಹೆಗಳಿಗಾಗಿ ಉಡುಪುಗಳಲ್ಲಿ ವಿಶೇಷ ಆಕರ್ಷಣೆ ಇತ್ತು.

ಪ್ರಶಸ್ತಿಗಳ ವಿಜ್ಞಾನಜ್ಞರ ಸಮಿತಿಯು ಶ್ರೇಷ್ಠ ಆವಿಷ್ಕಾರಗಳಿಗೆ ಗೌರವ ಸಲ್ಲಿಸಿತು. ಪೋಷಕರ ಬೆಂಬಲ ಮತ್ತು ವಿದ್ಯಾರ್ಥಿಗಳ ಶ್ರಮ ಈ ಕಾರ್ಯಕ್ರಮವನ್ನು ಯಶಸ್ವಿ ಮಾಡಿತು. ಪ್ರದರ್ಶನವು ಕೇವಲ ವೈಜ್ಞಾನಿಕ ಚಿಂತನೆಗೆ ವೇದಿಕೆಯಾದಷ್ಟೇ ಅಲ್ಲ, ಮಕ್ಕಳ ಭವಿಷ್ಯಕ್ಕಾಗಿ ಬೆಳಕು ಚೆಲ್ಲಿತು.

# ಹೂವೇ ಚಂದ, ಹೂವಿನ ಕಲಾಕೃತಿ ಬಲು ಅಂದ











### ಐ ಲವ್ ಡಿವಿಜಿ ಸೆಲ್ಫಿ ಪಾಯಿಂಟ್

5x6ಅಡಿಯ ಐ ಲವ್ ಡಿವಿಜಿ ಹೂವಿನ ಕಲಾಕೃತಿಯನ್ನು 25 ಸಾವಿರಕ್ಕೂ ಹೆಚ್ಚು ವಿವಿಧ ಬಗೆಯ ಕೆಂಪು ಗುಲಾಬಿ, ಬಣ್ಣದ ಡೇಸಿ ಹೂವುಗಳು ಮತ್ತು 2 ಸಾವಿರ ಗುಲಾಬಿ ಹೂವುಗಳಿಂದ ನಿರ್ಮಾಣ ಮಾಡಲಾಗಿದ್ದು ಸೆಲ್ಫಿ ಪ್ರಿಯರನ್ನು ಸೆಳೆಯುತ್ತಿದೆ. ಮಕ್ಕಳು, ವೃದ್ದರಾದಿಯಾಗಿ ಎಲ್ಲರೂ ಇಲ್ಲಿ ಫೋಟೋ, ಸೆಲ್ಫಿ ತೆಗೆದುಕೊಳ್ಳಲು ಮುಗಿ ಬೀಳುತ್ತಿರುವುದು ಸಾಮಾನ್ಯವಾಗಿತ್ತು.

**(1ನೇ ಪುಟದಿಂದ)** ಅಂಬೇಡ್ಕರ್ ಜೀವನದ ಪ್ರಮುಖ ಘಟನಾವಳಿಗೆ ಸಾಕ್ಷಿಯಾದ ಕೋರಗಾಂವ ಜಯಸ್ತಂಭ, ಪ್ರವೇಶ ಪ್ರತಿಭಟನೆ ಮಾಡಿದ ಕಾಲಾರಾಮ್ ಮಂದಿರ ಮಾದರಿಗಳನ್ನೂ ಇಲ್ಲಿ ನಿರ್ಮಿಸಲಾಗಿದೆ.

ಹಾಗಲಕಾಯಿಯಲ್ಲಿ ರಚಿಸಿದ ಬೃಹತ್ ಗಾತ್ರದ ಡೈನೋಸಾರ್, ವಿವಿಧ ತರಕಾರಿಗಳಲ್ಲಿ ರಚಿಸಿದ ನವಿಲು, ತಬಲಾ,ತಂಬೂರಿ, ಪೆಂಗ್ವಿನ್ ಪಕ್ಷಿ, ನುಗ್ಗೆಕಾಯಿಯ ಮನೆ, ಕಲ್ಲಂಗಡಿ ಹಾಗೂ ಸಿಹಿಕುಂಬಳದಲ್ಲಿ ಮಾಡಿದ ಶಿವಲಿಂಗ ನೋಡುಗರನ್ನು ಆಕರ್ಷಿಸುತ್ತಿದೆ. ವಿವಿಧ ಹಣ್ಣು-ತರಕಾರಿಗಳಲ್ಲಿ ರಚಿಸಿದ ಚಿತ್ರಗಳು ಕಣ್ಮನ ಸೆಳೆಯುತ್ತಿವೆ. ಗಾಜಿನ ಮನೆಯ ಸೌಂದರ್ಯ ಹೆಚ್ಚಿಸಲು ಹೂಗಳಿರುವ 16 ಸಾವಿರ ಪಾಟ್‌ಗಳನ್ನು ಜೋಡಿಸಲಾಗಿದೆ. ಗ್ರಾಮೀಣ ಭಾಗದ ಹಳ್ಳಿ ಸೊಗಡಿನ ಹುಲ್ಲಿನ ಛಾವಣಿಯ ಮನೆ ಹಾಗೂ ಅದರ ಮುಂಭಾಗದಲ್ಲಿ ನಿಲ್ಲಿಸಿರುವ ರೈತ ಮಹಿಳೆ ಮತ್ತು ಹಸುವಿನ ಕಲಾಕೃತಿಗಳು ಮನಮಹೋಹಕವಾಗಿವೆ.

ಜ್ಞಾನಪೀಠ ಪ್ರಶಸ್ತಿ ಪಡೆದ ಸಾಹಿತಿಗಳು, ವಿವಿಧ ಮಠಾಧೀಶರು, ಇತ್ತೀಚೆಗೆ ಅಗಲಿದ ಮಾಜಿ ಪ್ರಧಾನಿ ಡಾ. ಮನಮೋಹನ ಸಿಂಗ್ ಸೇರಿದಂತೆ ಇತರ ಗಣ್ಯರು ಕಲಾಕೃತಿಗಳು ಇಲ್ಲಿವೆ. ಅಂದ ಹಾಗೆ ಈ ಕಲಾಕೃತಿಗಳನ್ನು ಉಡುಪಿಯ ವಿದ್ಯಾಧರ ನೇತೃತ್ವದಲ್ಲಿ ಕಲಾವಿದರ ತಂಡ ರಚಿಸಿದೆ.

**ಬೆಲ್ಲದ ಪರಿಷೆ:** ಮಂಡ್ಯದ ರೈತ ಉತ್ಪಾದಕ ಸಂಘ ಬೆಲ್ಲದಲ್ಲಿಯೇ ರಚಿಸಿರುವ ಚನ್ನಗಿರಿಯ ಪುಷ್ಕರಣಿ ಸೇರಿದಂತೆ ಹಲವು ಕಲಾಕೃತಿಗಳು ಗಮನ ಸೆಳೆಯುತ್ತಿವೆ.

ರಾಸಾಯನಿಕ ಮುಕ್ತ ಬೆಲ್ಲದ ಕುರಿತು ಅರಿವು ಮೂಡಿಸಲು ಹಾಗೂ ಉತ್ಪಾದಕರಿಗೆ ಮಾರುಕಟ್ಟೆ ಒದಗಿಸುವ ದೃಷ್ಟಿಯಿಂದ ಬೆಲ್ಲದ ಪರಿಷೆ ಪರಿಕಲ್ಪನೆಯಡಿ ಪ್ರದರ್ಶನ ಹಾಗೂ ಮಾರಾಟ ನಡೆಯಲಿದೆ ಎಂದು ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ್ ಚಿಂತಾಲ್ ತಿಳಿಸಿದರು.

ಮಾಜಿ ಪ್ರಧಾನಿ ಡಾ. ಮನಮೋಹನ ಸಿಂಗ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರೊಂದಿಗೆ ಪಲ ಪುಷ್ಪ ಪ್ರದರ್ಶನಕ್ಕೆ ಶನಿವಾರ ಸಂಜೆ ಅಧಿಕೃತವಾಗಿ ಚಾಲನೆ ನೀಡಲಾಯಿತು.

## ದೀಟೂರಿನಲ್ಲಿ ಸಂಭ್ರಮದ ಪಲ್ಲಕ್ಕಿ ಉತ್ಸವ



ಮಲೇಬೆನ್ನೂರು, ಡಿ. 28 - ದೀಟೂರು ಗ್ರಾಮದಲ್ಲಿ ಶ್ರೀ ಮಹೇಶ್ವರ ಸ್ವಾಮಿಯ ಜಾತ್ರಾ ಮಹೋತ್ಸವದ ಅಂಗವಾಗಿ ಜರುಗಿದ ದೇವರ ಪಲ್ಲಕ್ಕಿ ಉತ್ಸವವು ಮಲ್ಲಿಕಾರ್ಜುನ ಸ್ವಾಮಿ ಪೀಠದ ಚನ್ನಬಸವ ದೇವರು ಶ್ರೀಗಳ ಸಾನ್ನಿಧ್ಯದಲ್ಲಿ ಮತ್ತು ಗ್ರಾಮಸ್ಥರ ಸಮ್ಮುಖದಲ್ಲಿ ಸಂಭ್ರಮದಿಂದ ಜರುಗಿತು.

## ಕವಿಗೋಷ್ಠಿ, ವೇಷಭೂಷಣ ಸ್ಪರ್ಧೆಗೆ ಆಹ್ವಾನ

ದಾವಣಗೆರೆ, ಡಿ. 28- ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಹಾಗೂ ಸ್ಫೂರ್ತಿ ಪ್ರಕಾಶನ ವತಿಯಿಂದ 'ಕವಿಗೋಷ್ಠಿ ಹಾಗೂ ಹಳ್ಳಿ ಸೊಗಡಿನ ವೇಷ ಭೂಷಣ ಸ್ಪರ್ಧೆ' ಆಯೋಜಿಸಲಾಗಿದೆ. ವಿವರಕ್ಕೆ ಸಂಪರ್ಕಿಸಿ. 9844718412, 7019353970 ಹಾಗೂ 9611969690


॥ ಶ್ರೀ ನಾರದಮುನಿ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ**



ದಾವಣಗೆರೆ ತಾ॥ ಜಿ॥
ಹೆಚ್. ಕಲಪನಹಳ್ಳಿ ಗ್ರಾಮದ ವಾಸಿ
**ಶ್ರೀಮತಿ ಆನಗೋಡರ ಹೂವಮ್ಮ ಮತ್ತು ಮಕ್ಕಳು**
ಇವರುಗಳು ಮಾಡುವ ವಿಜ್ಞಾಪನೆಗಳು ದಿನಾಂಕ : 25.12.2024ರ ಬುಧವಾರ ಬೆಳಗಿನ ಜಾವ 6.50ಕ್ಕೆ ನನ್ನ ಪೂಜ್ಯಪತಿಯವರಾದ
**ಆನಗೋಡರ ನಾರಪ್ಪ**
ಇವರು ಶಿವೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಶಿವಗಣಾರಾಧನೆಯನ್ನು**
ದಿನಾಂಕ : 29.12.2024ನೇ ಭಾನುವಾರ ಬೆಳಿಗ್ಗೆ 10.30ಕ್ಕೆ ಸ್ಥಳ : ಮೃತರ ಸ್ವಗೃಹ ಹೆಚ್. ಕಲಪನಹಳ್ಳಿ, ದಾವಣಗೆರೆ ತಾ॥ ಜಿ॥ ಇಲ್ಲಿ ನೆರವೇರಿಸಲು ಗುರು ಹಿರಿಯರು ನಿಶ್ಚಯಿಸಿರುವುದರಿಂದ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
**ಇಂತಿ ದುಃಖ ತಪ್ತರು : ಮೃತರ ಮಕ್ಕಳಾದ ಶ್ರೀ ಎ.ಎನ್. ಶಿವಕುಮಾರ್ ಮತ್ತು ಸಹೋದರರು ಮತ್ತು ಮಕ್ಕಳು, ಆನಗೋಡರ ವಂಶಸ್ಥರು ಹೆಚ್.ಕಲಪನಹಳ್ಳಿ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು.**
ವಿ.ಸೂ : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೆ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.


## ಶಾಮನೂರಿನ ಶ್ರೀ ಚಂದ್ರಪ್ಪ ಎಂ. ನಿಧನ



ದಾವಣಗೆರೆ ತಾಲ್ಲೂಕು ಶಾಮನೂರಿನ ವಾಸಿ
ಶ್ರೀ ಮಡಿವಾಳರ ಹನುಮಂತಪ್ಪನವರ ಪುತ್ರ
**ಶ್ರೀ ಚಂದ್ರಪ್ಪ ಎಂ.**
ಇವರು ದಿನಾಂಕ : 28.12.2024ರ ಶನಿವಾರ ಮಧ್ಯಾಹ್ನ 3.30ಕ್ಕೆ ನಿಧನರಾದರು. ಮೃತರಿಗೆ 47 ವರ್ಷ ವಯಸ್ಸಾಗಿತ್ತು. ತಂದೆ-ತಾಯಿ, ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಸಹೋದರ, ಸಹೋದರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ : 29.12.2024ರ ಭಾನುವಾರ ಬೆಳಿಗ್ಗೆ 11.30ಕ್ಕೆ ಶಾಮನೂರಿನ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.
ದುಃಖತಪ್ತ ಕುಟುಂಬ ವರ್ಗ : 99011 24914, 97430 55533

## ಇಂದು ಬಿ. ಅರುಣ್‌ಕುಮಾರ್ ಅವರಿಗೆ ಪ್ರಶಸ್ತಿ ಪ್ರದಾನ



ಮಲೇಬೆನ್ನೂರು, ಡಿ 28- ಹಿಂಡಸಘಟ್ಟ ಕ್ಯಾಂಪ್ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಬಿ. ಅರುಣ್ ಕುಮಾರ್ ಅವರು ಅಕ್ಷಯ ಪ್ರಾರ್ಥನ ಫೌಂಡೇಷನ್ (ಹೈದ್ರಾಬಾದ್) ಇವರ ವತಿಯಿಂದ ಕೊಡಮಾಡುವ ರಾಷ್ಟ್ರ ಮಟ್ಟದ ಭಾರತ ಸೇವಾ ರತ್ನ - 2024 ಪ್ರಶಸ್ತಿಗೆ ಆಯ್ಕೆಯಾಗಿ ದ್ದಾರೆ. ದಿನಾಂಕ 29ರ ಭಾನುವಾರ ಬೆಳಿಗ್ಗೆ 10.30ಕ್ಕೆ ಬೆಂಗಳೂರಿನ ಗಾಂಧಿ ಭವನದಲ್ಲಿ ಜರುಗಲಿರುವ ಸಮಾರಂಭ ದಲ್ಲಿ ಅರುಣ್‌ಕುಮಾರ್ ಅವರು ಪ್ರಶಸ್ತಿ ಸ್ವೀಕರಿಸಲಿದ್ದಾರೆ.

## ನಗರದಲ್ಲಿ ಇಂದು ವಿನೂತನ ಮಹಿಳಾ ಮಂಡಳಿ 19 ನೇ ವಾರ್ಷಿಕೋತ್ಸವ

ವಿದ್ಯಾನಗರ ವಿನಾಯಕ ಬಡಾವಣೆಯ ವಿನೂತನ ಮಹಿಳಾ ಸಮಾಜದ 19 ನೇ ವರ್ಷದ ವಾರ್ಷಿಕೋತ್ಸವ ಸಮಾರಂಭವು ಇಂದು ಸಂಜೆ 4.30 ಗಂಟೆಗೆ ನಡೆಯಲಿದೆ.

ವಿನೂತನ ಮಹಿಳಾ ಸಮಾಜದ ಅಧ್ಯಕ್ಷರಾದ ಶ್ರೀಮತಿ ರೇಖಾ ಓಂಕಾರಪ್ಪ ಅಧ್ಯಕ್ಷತೆ ವಹಿಸುವರು. ಮಹಾನಗರ ಪಾಲಿಕೆ ಸದಸ್ಯೆ ವೀಣಾ ನಂಜಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ನಿವೃತ್ತ ಪ್ರಾಚಾರ್ಯರಾದ ಕೆ. ನೀಲಮ್ಮ, ವಿನಾಯಕ ಬಡಾವಣೆ ನಾಗರಿಕರ ಹಿತರಕ್ಷಣಾ ಸಮಿತಿ ನಿರ್ದೇಶಕ ಎಸ್. ಕೆ. ದೇವೇಂದ್ರಪ್ಪ ಮತ್ತಿತರರು ಭಾಗವಹಿಸಲಿದ್ದಾರೆ.

॥ ಶ್ರೀ ಹಂಪಿ ವಿರೂಪಾಕ್ಷೇಶ್ವರ ಪ್ರಸನ್ನ ॥

**ಏಳನೇ ಪುಣ್ಯಸ್ಮರಣೆ**



ದಿ॥ ಶ್ರೀಮತಿ ಗಿರಿಜ ಎಂ. ಜವಳಿ
ನೀವು ನಮ್ಮನ್ನಗಲಿ ಇಂದಿಗೆ (29.12.2024) ಏಳು ವರ್ಷಗಳಾದವು.
ಸದಾ ನಿಮ್ಮ ನೆನಪಿನಲ್ಲಿರುವ.
**ಪತಿ : ಮಂಜುನಾಥ ಎ. ಜವಳಿ ಮತ್ತು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು, ದಾವಣಗೆರೆ. ಮೊ: 98445 73023**

## ಹದಿನಾರನೇ ವರ್ಷದ ಪುಣ್ಯಸ್ಮರಣೆ



**ದಿ॥ ಕೆ.ಎಸ್. ರೇವಣಸಿದ್ದಪ್ಪ ಬಸಾಪುರ**
ಲಿಂಗೈಕ್ಯ : 29.12.2008
ಮಾಜಿ ಅಧ್ಯಕ್ಷರು, ಶ್ರೀಮದ್ ಸಾಧು ಸದ್ಧರ್ಮ ವೀರಶೈವ ಸಂಘ, (ರಿ.) ದಾವಣಗೆರೆ ತಾ॥ ಘಟಕ.

*ನಿಮ್ಮ ಚಿಂತನೆ, ಆದರ್ಶಗಳು*
*ನಮಗೆ ದಾರಿದೀಪ*
*ಸದಾ ನಿಮ್ಮ ಸ್ಮರಣೆಯಲ್ಲಿರುವ....*

**ಬಿ. ಸಿದ್ದನಗೌಡ ಮತ್ತು ಸಹೋದರರು ಹಾಗೂ ಸಹೋದರಿ ಮಕ್ಕಳು, ಮೊಮ್ಮಕ್ಕಳು ಹಾಗೂ ಶಿಕ್ರಪ್ಪಳ ವಂಶಸ್ಥರು ಬಸಾಪುರ, ಬೇತೂರು, ಬಿ.ಕಲಪನಹಳ್ಳಿ.**

## ಸಿಂಗ್ ನಿಧನಕ್ಕೆ ಸೋಮಲಾಪುರ ಸಂತಾಪ

ದಾವಣಗೆರೆ, ಡಿ. 28 - ಆರ್ಥಿಕ ಚಿಂತಕ, ರಾಷ್ಟ್ರದ ಅಭಿವೃದ್ಧಿ ಹರಿಕಾರ, ಸರ್ವ ಜನಾಂಗದ ಹಿತ ಚಿಂತಕ, ಆರ್ಥಿಕ ತಜ್ಞ, ದೇಶ ಕಂಡ ಅಪರೂಪ ರಾಜಕಾರಣಿ, ಸರ್ವ ಜನಾಂ ಗದ ಅಭಿವೃದ್ಧಿಗಾಗಿ, ದೇಶದ ಅಭಿವೃದ್ಧಿಗಾಗಿ ಶ್ರಮಿಸಿದ ಡಾ. ಮನ ಮೋಹನ್‌ಸಿಂಗ್ ನಿಧನದಿಂದ ದೇಶಕ್ಕೆ ಹಾಗೂ ಸರ್ವ ಜನಾಂಗಕ್ಕೂ ತುಂಬಲಾರದ ನಷ್ಟವಾಗಿದೆ. ಎಂದು ಗಾಂಧೀಜಿ ಹರಿಜನ ಯುವಕ ಸಂಘದ ಪ್ರಧಾನ ಕಾರ್ಯದರ್ಶಿ ಹಾಗೂ ಕೆ.ಪಿ. ಸಿ.ಸಿ. ಎಸ್ಸಿ ವಿಭಾಗದ ಕಾರ್ಯ ದರ್ಶಿ ಸೋಮಲಾಪುರದ ಹನು ಮಂತಪ್ಪ ಸಂತಾಪ ಸೂಚಿಸಿದ್ದಾರೆ.

## ಚಿತ್ರದುರ್ಗದಲ್ಲಿಂದು ಸರ್ವಧರ್ಮೀಯರ ವಧು-ವರರ ಸಭೆ

ಬಸವೇಶ್ವರರ ವಧು-ವರರ ಮಾಹಿತಿ ಕೇಂದ್ರ, ಶ್ರೀ ಜಗದ್ಗುರು ಮುರುಘ ರಾಜೇಂದ್ರ ಬೃಹನ್ಮಠ ಇವರ ವತಿಯಿಂದ ಇಂದು ಬೆಳಿಗ್ಗೆ 11 ಗಂಟೆಗೆ ಚಿತ್ರದುರ್ಗ ಶ್ರೀ ಮುರುಘ ರಾಜೇಂದ್ರ ಮಠದ ಆವರಣದಲ್ಲಿ ಸರ್ವಧರ್ಮೀಯರ ವಧು-ವರರ ರಾಜ್ಯಮಟ್ಟದ ಸಮಾವೇಶ ಹಮ್ಮಿಕೊಳ್ಳಲಾಗಿದೆ.

# ಅಂತಾರಾಷ್ಟ್ರೀಯ ಯೋಗ ಸ್ಪರ್ಧೆಗೆ ನಗರದ 15 ಯೋಗಪಟುಗಳು ಭಾಗಿ




ದಾವಣಗೆರೆ, ಡಿ. 28- ಗೋವಾದಲ್ಲಿ ನಾಳೆ ದಿನಾಂಕ 29 ರಂದು ನಡೆಯಲಿರುವ ಅಖಿಲ ಭಾರತ ಅಂತಾರಾಷ್ಟ್ರೀಯ ಯೋಗ ಚಾಂಪಿಯನ್‌ಶಿಪ್-2024 ಸ್ಪರ್ಧೆಯಲ್ಲಿ ನಗರದ ಎಸ್‌ಎಎಸ್‌ಎಸ್ ಯೋಗ ಕೇಂದ್ರದ 15 ಯೋಗ ಪಟುಗಳು ಭಾಗವಹಿಸಲಿದ್ದಾರೆ.

ಗೋವಾದ ಡೋನಾ ಪೌಲ್‌ನ ಡಾಕ್ಟರ್ ಈಸ್ಟ್ ಬಾರ್ಗೇಸ್ ರಸ್ತೆಯ ಓಷಿನ್ ಪಾರ್ಕ್ ರೆಸಿಡೆನ್ಸಿಯಲ್ಲಿ ಪತಂಜಲಿ ಕಾಲೇಜ್ ಆಫ್ ಯೋಗ ಮತ್ತು ರಿಸರ್ಚ್ ಸೆಂಟರ್, ಅಂತಾರಾಷ್ಟ್ರೀಯ ಮೈತ್ರಿ ಯೋಗ, ಇಂಡಿಯನ್ ಓಲಂಪಿಕ್ ಫೆಡರೇಷನ್ ಸಹಯೋಗದಲ್ಲಿ ಈ ಯೋಗ ಸ್ಪರ್ಧೆ ಆಯೋಜಿಸಿದ್ದು, ಎಸ್‌ಎಎಸ್‌ಎಸ್ ಯೋಗ ಕೇಂದ್ರದ ಸಂಸ್ಥಾಪಕ, ಯೋಗಾ ಚಾರ್ಯ ಎನ್.ಪರಶುರಾಮ್ ನೇತೃತ್ವದಲ್ಲಿ 15 ಯೋಗ ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ.

ಎ ಗ್ರೂಪ್‌ನಲ್ಲಿ ಐದು ವರ್ಷದೊಳಗಿನ ಮಕ್ಕಳು, ಬಿ ಗ್ರೂಪ್‌ನಲ್ಲಿ ಎಂಟು ವರ್ಷದೊಳಗಿನ ಮಕ್ಕಳು, ಸಿ ಗ್ರೂಪ್‌ನಲ್ಲಿ ಹತ್ತು ವರ್ಷದೊಳಗಿನ ಮಕ್ಕಳು, ಡಿ ಗ್ರೂಪ್‌ನಲ್ಲಿ 12 ವರ್ಷದೊಳಗಿನ ಮಕ್ಕಳು ಇ ಗ್ರೂಪ್‌ನಲ್ಲಿ 14 ವರ್ಷದೊಳಗಿನ ಮಕ್ಕಳು, ಎಫ್ ಗ್ರೂಪ್‌ನಲ್ಲಿ 17 ವರ್ಷದೊಳಗಿನ ಮಕ್ಕಳು ಹಾಗೂ ಜಿ ಗ್ರೂಪ್‌ನಲ್ಲಿ 20 ವರ್ಷದೊಳಗಿನ ಮಕ್ಕಳು ಭಾಗವಹಿಸಲಿದ್ದಾರೆ.

# ಬಸವ ತತ್ವ ಪಾಲಕರೆಂದು ಕರೆಸಿಕೊಂಡ ಕೆಲವರು ಪ್ರಚಾರ, ಪಲ್ಲಂಗದಲ್ಲಿ ತಲ್ಲೀನ



**(1ನೇ ಪುಟದಿಂದ)** ಪರಂಪರೆಯ ಮುಂದಾಳತ್ವವಹಿಸಿದ್ದ ಕೆಲವರು ಮತ್ತೆ ವೈದಿಕತೆಯತ್ತ ಹೊರಳುತ್ತಿದ್ದಾರೆ.

ಸಾನಿಧ್ಯ ವಹಿಸಿ ಉದ್ಘಾಟಿಸಿದ ಸಾಣೆಹಳ್ಳಿಯ ತರಳಬಾಳು ಶಾಖಾ ಮಠದ ಪಟ್ಟಾಧ್ಯಕ್ಷರಾದ ಪಂಡಿತಾರಾಧ್ಯ ಶಿವಾಚಾರ್ಯ ಶ್ರೀಗಳು ಮಾತನಾಡಿ, ಬಸವಣ್ಣನ ತತ್ವ ಪಾಲಕರು ಕೆಡುವುದಿಲ್ಲ, ಕೆಟ್ಟವರು ಬಸವಣ್ಣನ ತತ್ವ ಪಾಲಕರೆನಿಸುವುದಿಲ್ಲ ಎಂದರು.

ಜ.27, 28, 29 ಮತ್ತು 30 ರಂದು ಸಾಣೆಹಳ್ಳಿಯಿಂದ ಸಂತೆಬೆನ್ನೂರುವರೆಗೆ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ. ಪರಿಸರ, ಶಿಕ್ಷಣ, ಆರೋಗ್ಯ, ಕೃಷಿ ಮತ್ತು ರಾಜಕೀಯ ಅಂಶಗಳ ಕುರಿತು ಸಮಾಜದಲ್ಲಿ ಜಾಗೃತಿ ಮೂಡಿಸಲು ಈ ಯಾತ್ರೆ ಕೈಗೊಂಡಿದ್ದು ಆಸಕ್ತರು ಕುಟುಂಬದ ಸದಸ್ಯರೊಂದಿಗೆ ಭಾಗವಹಿಸಬೇಕೆಂದು ಕೋರಿದರು.

ಮಾನವ ಬಂಧುತ್ವ ವೇದಿಕೆ ರಾಜ್ಯ ಸಂಚಾಲಕ ಡಾ.ಎ.ಬಿ.ರಾಮಚಂದ್ರಪ್ಪ ಮಾತನಾಡಿ, 12ನೇ ಶತಮಾನದ ವೈದಿಕ ಧರ್ಮಾಚರಣೆಯಲ್ಲಿದ್ದ ಮನುಷ್ಯನ ಶೋಷಣೆಯನ್ನು ಧಿಕ್ಕರಿಸಿ ಬಸವಣ್ಣ ಹಾಗೂ ಶರಣರು ಲಿಂಗಾಯತ ಪರಂಪರೆ ಪ್ರಚುರಪಡಿಸಿದರು. ಮೌಢ್ಯರಹಿತ, ಮನುಷ್ಯನ ಕೇಂದ್ರೀಕರಿಸಿದ, ಮೇಲು, ಕೀಳಿಲ್ಲದ ಧರ್ಮಾಚರಣೆಯನ್ನು ಶರಣರು ಪ್ರತಿಪಾದಿಸಿದರು ಎಂದರು.

ಬಸವಣ್ಣನನ್ನು ಸಾಂಸ್ಕೃತಿಕ ನಾಯಕನಾಗಿಸಿರುವುದು ಘೋಷಣೆಗೆ ಸೀಮಿತವಾಗಿದೆ. ಇಂದು ನಾಡು ಎದುರಿಸುತ್ತಿರುವ ಹತ್ತಾರು ತಲ್ಲಣಗಳಿಗೆ ಬಸವಣ್ಣನ ತತ್ವಗಳಲ್ಲಿ ಉತ್ತರವಿದೆ. ಕಳ್ಳತನ ಮಾಡಬೇಡ ಎಂದವರ ಮೇಲೆ ಕಳ್ಳತನದ ಆರೋಪ ಹೊರಿಸುವ ಹುನ್ನಾರ ನಡೆಯುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಶರಣ ಸಾಹಿತ್ಯ ಪರಿಷತ್ತಿನ ದಾವಣಗೆರೆ ತಾಲ್ಲೂಕು ಘಟಕದ ಅಧ್ಯಕ್ಷ ಎಸ್.ಬಿ.ರುದ್ರಗೌಡ ಗೋಪನಾಳು ಅಧ್ಯಕ್ಷತೆ ವಹಿಸಿದ್ದರು.

ಜಾಗತಿಕ ಲಿಂಗಾಯತ ಮಹಾಸಭಾದ ರಾಜ್ಯ ಕಾರ್ಯದರ್ಶಿ ಮಹಾಂತೇಶ್ ಅಗಡಿ, ಜಿಲ್ಲಾಧ್ಯಕ್ಷ ಆವರಗೆರೆ ರುದ್ರಮುನಿ, ಪ್ರೊ.ಬಿ.ಕೃಷ್ಣಪ್ಪ ಟ್ರಸ್ಟ್‌ನ ಟ್ರಸ್ಟಿ ರುದ್ರಪ್ಪ ಹನಗವಾಡಿ, ಲಕ್ಷ್ಮಣ್ ರಾಮಾವತ್, ದಾವಣಗೆರೆ ವಕೀಲ ಅನೀಸ್ ಪಾಷಾ, ಜಾಗತಿಕ ಲಿಂಗಾಯತ ಮಹಾಸಭಾದ ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಕುಸುಮಾ ಲೋಕೇಶ್, ಶರಣ ಸಾಹಿತ್ಯ ಪರಿಷತ್ತಿನ ದಾವಣಗೆರೆ ತಾಲ್ಲೂಕು ಘಟಕದ ಪ್ರಧಾನ ಕಾರ್ಯದರ್ಶಿ ಬಿ.ಎಂ.ವಿಶ್ವೇಶ್ವರಯ್ಯ, ಮರುಳಸಿದ್ದಪ್ಪ, ನಿವೃತ್ತ ಶಿಕ್ಷಕ ಎಂ.ನಾಗರಾಜ್, ಹನುಮಂತಪ್ಪ, ಶಿವಮೂರ್ತಯ್ಯ ಭಾಗವಹಿಸಿದ್ದರು.

# ಹರಪನಹಳ್ಳಿ : ಸಂಭ್ರಮದ ಕಾರ್ತಿಕ



ಹರಪನಹಳ್ಳಿ, ಡಿ.28- ಪಟ್ಟಣದ ಹರಿಹರ ರಸ್ತೆಯ ಅಶ್ರಯ ಕಾಲೋನಿ ಬಳಿ ಇರುವ ವರಕ್ಕೆ ಅಂಜನೇಯ, ತಾಯಮ್ಮ, ವಾಲ್ಮೀಕಿ ನಗರದಲ್ಲಿರುವ ಊರಮ್ಮ ದೇವಿ ಹಾಗೂ ತಾಲೂಕಿನ ಅರಸೀಕೆರೆ ಗ್ರಾಮದ ಧಾರ್ಮಿಕ ಪ್ರಸಿದ್ಧ ದಂಡಿನ ದುರ್ಗಮ್ಮದೇವಿ ಕಾರ್ತಿಕೋತ್ಸವ ಕಾರ್ಯಕ್ರಮಗಳು ರಾತ್ರಿ ಸಡಗರ ಸಂಭ್ರಮದಿಂದ ನೆರವೇರಿದವು.

ದಂಡಿನ ದುರ್ಗಮ್ಮ ಕಾರ್ತಿಕೋತ್ಸವ ಅಂಗವಾಗಿ ನಡೆಯುವ ಮೂರು ದಿನಗಳ ಜಾತ್ರೆಗೆ ಕೋಲ ಶಾಂತೇಶ್ವರ ಮಠದ ಶ್ರೀ ಶಾಂತಲಿಂಗ ದೇಶಿಕೇಂದ್ರ ಸ್ವಾಮೀಜಿ ದೀಪ ಬೆಳಗಿಸುವ ಮೂಲಕ ಚಾಲನೆ ನೀಡಿದರು.

ನಂತರ ಆಶೀರ್ವಚನ ನೀಡಿದ ಅವರು, ದೇವಸ್ಥಾನ ಪೂಜೆ ಪುನಸ್ಕಾರಗಳಿಂದ ಮಾನಸಿಕ ಒತ್ತಡ ನಿವಾರಣೆ ಯಾಗಿ ಸುಖ, ಸಂಪತ್ತು ಪ್ರಾಪ್ತಿಯಾಗಲಿದೆ. ದಂಡಿನ ದುರ್ಗಮ್ಮ ದೇವಿ ಆಶೀರ್ವಾದ ಫಲವಾಗಿ ಗ್ರಾಮ ಸುಭಿಕ್ಷವಾಗಿ ಬೆಳೆದಿದೆ. ಸಕಾಲದಲ್ಲಿ ಮಳೆಯಾಗಿ ಉತ್ತಮ ಬೆಳೆ ಬಂದಿದೆ. ಜನ-ಜಾನುವಾರುಗಳಿಗೆ ಯಾವುದೇ ರೋಗ ರುಜಿನಿಗಳು ಬರುವುದಿಲ್ಲ. ಹಾಗಾಗಿ ರೈತರು ತಮ್ಮ ಜಾನುವಾರುಗಳನ್ನು ಇಲ್ಲಿಗೆ ತಂದು ಪೂಜೆ ಸಲ್ಲಿಸುತ್ತಾರೆ ಎಂದರು.

ಪಿಎಸ್ಐ ಕೆ.ರಂಗಯ್ಯ ನೇತೃತ್ವದಲ್ಲಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು.

ಈ ಸಂದರ್ಭದಲ್ಲಿ ಮಾಜಿ ಸಂಸದ ವೈ.ದೇವೇಂದ್ರಪ್ಪ, ಪೂಜಾರಪ್ಪ ಸಂತೋಷ್, ಪೂಜಾರ್ ಮರಿಯಪ್ಪ, ಅಬಕಾರಿ ಆಯುಕ್ತ ವೈ.ಡಿ.ಮಂಜುನಾಥ್, ತಾಲ್ಲೂಕು ಕಾರ್ಯನಿರ್ವಹಣಾಧಿಕಾರಿ ವೈ. ಹೆಚ್. ಚಂದ್ರಶೇಖರ್, ಎನ್.ಕೊಟ್ರೇಶ್, ವೈ.ಡಿ.ಅಣ್ಣಪ್ಪ, ಪ್ರಶಾಂತ್ ಪಾಟೀಲ್, ಎ.ಇನಾಯತ್ ಉಲ್ಲಾ, ಲಕ್ಷ್ಮಿದೇವಿ ಅಣ್ಣಪ್ಪ, ಜೆ.ಪರಶುರಾಮ, ಸಲಾಂ ಸಾಬ್, ರಮೇಶ್ ಶೆಟ್ರು, ಪಂಪಣ್ಣ, ನಾಗರಾಜಪ್ಪ, ವೈ. ಕೊಟ್ರೇಶ್, ಆಲೂರು ಶ್ರೀನಿವಾಸ, ಕೆ.ತಿರುಮಲ, ಡಿ. ಮಂಜುನಾಥ, ಕೆ.ಇ.ಬಿ ನಿವೃತ್ತ ಇಂಜಿನಿಯರ್ ಕೆ.ಭೀಮಪ್ಪ, ರಾಘವೇಂದ್ರಶೆಟ್ಟಿ ಸೇರಿದಂತೆ ಇತರರು ಇದ್ದರು.

# ಹರಿಹರ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ



ಹರಿಹರ, ಡಿ. 28 - ನಗರದ ಡಿ.ಆರ್.ಎಂ ಶಾಲಾ ಮೈದಾನದಲ್ಲಿ ಜೆ.ಸಿ ಬಡಾವಣೆ ಪ್ರೀಮಿಯರ್ ಲೀಗ್ ವತಿಯಿಂದ ಹೊಸ ವರ್ಷದ ಪ್ರಯುಕ್ತ ಹಮ್ಮಿಕೊಳ್ಳಲಾಗಿರುವ 11ನೇ ವರ್ಷದ ಕ್ರಿಕೆಟ್ ಪಂದ್ಯಾವಳಿಯನ್ನು ಶಾಸಕ ಬಿ.ಪಿ. ಹರೀಶ್ ಟೇಪ್ ಕತ್ತರಿಸಿ, ಬ್ಯಾಟಿಂಗ್ ಮಾಡುವುದರ ಮೂಲಕ ಉದ್ಘಾಟಿಸಿದರು. ನಗರಸಭೆ ಸದಸ್ಯ ವಸಂತ್, ಬಿಜೆಪಿ ಮುಖಂಡರಾದ ಸುನಿಲ್, ಗೋಪಿ, ಪ್ರಶಾಂತ್, ನಾಗರಾಜ್, ಅನಿಲ್ ಸಾವಂತ್, ಪ್ರೇಮ್ ಇತರರು ಇದ್ದರು.

# ವಿದೇಶಿ ಉದ್ಯೋಗಿಗಳ ಬಗ್ಗೆ ಟ್ರಂಪ್ ಬಣದಲ್ಲೇ ಒಡಕು

ವಾಷಿಂಗ್ಟನ್, ಡಿ. 28- ವಲಸೆ ನೀತಿ ಹಾಗೂ ಟೆಕ್ ಉದ್ಯಮದ ಕುರಿತು ಅಮೆರಿಕಾದ ನಿಯೋಜಿತ ಅಧ್ಯಕ್ಷ ಡೋನಾಲ್ಡ್ ಟ್ರಂಪ್ ಬೆಂಬಲಿಗರಲ್ಲಿ ಒಡಕಿನ ಅಭಿಪ್ರಾಯ ಇರುವುದು ಬಯಲಾಗಿದೆ. ಟ್ರಂಪ್ ಬಣದಲ್ಲಿರುವ ಉದ್ಯಮಿಗಳಾದ ಎಲಾನ್ ಮಸ್ಕ್ ಹಾಗೂ ವಿವೇಕ್ ರಾಮಸ್ವಾಮಿ ಅವರು, ಅಮೆರಿಕಾದ ಟೆಕ್ ಉದ್ಯಮಕ್ಕೆ ಕುಶಲ ಉದ್ಯೋಗಿಗಳ ಅಗತ್ಯವಿದೆ ಎಂದು ಹೇಳಿದ್ದಾರೆ.



ಆದರೆ ಬಲಪಂಥೀಯ ಮುಖಂಡರಾದ ಲೌರಾ ಲೂಮರ್ ಅವರು ಇದಕ್ಕೆ ವಿರುದ್ಧವಾದ ನಿಲುವು ತಳೆದಿದ್ದಾರೆ. ಲೂಮರ್ ಅವರು ಜನಾಂಗೀಯ ಹೇಳಿಕೆಗಳ ಹಿನ್ನೆಲೆ ಹೊಂದಿದ್ದಾರೆ.

ಟ್ರಂಪ್ ತಮ್ಮ ಆಡಳಿತದಲ್ಲಿ ಶ್ರೀರಾಮ ಕೃಷ್ಣನ್ ಅವರನ್ನು ಕೃತಕ ಬುದ್ಧಿವಂತಿಕೆ ನೀತಿಯ ಸಲಹೆಗಾರರನ್ನಾಗಿ ನೇಮಿಸುವುದಾಗಿ ಘೋಷಿಸಲಾಗಿತ್ತು. ಕೃಷ್ಣನ್ ಅವರು ಅಮೆರಿಕಾಗೆ ಹೆಚ್ಚು ಕುಶಲ ಉದ್ಯೋಗಿಗಳನ್ನು ಆಹ್ವಾನಿಸಲು ಬಯಸಿದ್ದಾರೆ. ಕೃಷ್ಣನ್ ನೇಮಕವನ್ನು ಲೂಮರ್ ವಿರೋಧಿಸಿದ್ದರು.

ಕುಶಲ ಉದ್ಯೋಗಿಗಳಿಗೆ ಅವಕಾಶ ನೀಡುವುದು ಅಮೆರಿಕವೇ ಮೊದಲು ಎಂಬ ನೀತಿಗೆ ವಿರುದ್ಧವಾಗಿದೆ. ಟ್ರಂಪ್ ಜೊತೆ ಇರುವ ಟೆಕ್ ವಲಯದ ಮುಖ್ಯಸ್ಥರು ತಾವೇ ಶ್ರೀಮಂತರಾಗಲು ಬಯಸಿದ್ದಾರೆ ಎಂದು ಲೂಮರ್ ಆರೋಪಿಸಿದ್ದಾರೆ.

ಲೂಮರ್ ಹೇಳಿಕೆಗೆ ಟೆಕ್ ವಲಯದ ಹಲವರು ಪ್ರತಿಕ್ರಿಯೆ ನೀಡಿದ್ದಾರೆ. ಈ ಎಲ್ಲಾ ಚರ್ಚೆಗಳು ಸಾಮಾಜಿಕ ಜಾಲತಾಣದಲ್ಲಿ ನಡೆದಿದೆ. ಇದರಿಂದಾಗಿ ಡೋನಾಲ್ಡ್ ಟ್ರಂಪ್ ವಲಯದಲ್ಲಿ ಇರುವವರ ವಲಸೆ ಕುರಿತ ಒಡಕಿನ ಅಭಿಪ್ರಾಯ ಬಯಲಾಗಿದೆ. ಟೆಕ್ ವಲಯಕ್ಕೆ ವಿದೇಶಿ ಉದ್ಯೋಗಿಗಳ ಅಗತ್ಯವಿದೆ ಎಂದು ಇನ್ನೋವರ್ಜ ಉದ್ಯಮಿ ಡೇವಿಡ್ ಸ್ಯಾಕ್ಸ್ ಹೇಳಿದ್ದಾರೆ. ಸ್ಯಾಕ್ಸ್ ಸಹ ಟ್ರಂಪ್ ಆಡಳಿತದಲ್ಲಿ ಪ್ರಾಮುಖ್ಯತೆ ಪಡೆಯುವ ನಿರೀಕ್ಷೆ ಇದೆ. ಆದರೆ ಟ್ರಂಪ್ ಈ ಒಡಕಿನ ಬಗ್ಗೆ ಇನ್ನೂ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಆದರೆ ಎಲಾನ್ ಮಸ್ಕ್ ಅವರು ಚುನಾವಣಾ ಪ್ರಚಾರದ ವೇಳೆ ಪ್ರಮುಖ ಪಾತ್ರ ವಹಿಸಿದ್ದರು. ವಿದೇಶಿ ಉದ್ಯೋಗಿಗಳನ್ನು ಟೆಕ್ ವಲಯಕ್ಕೆ ಸೇರ್ಪಡೆ ಮಾಡಲು ಅವಕಾಶ ನೀಡುವಲ್ಲಿ ಮಸ್ಕ್ ಪಾತ್ರ ಪ್ರಮುಖವಾಗಲಿದೆ ಎನ್ನಲಾಗುತ್ತಿದೆ.

ಟೆಕ್ ವಲಯಕ್ಕೆ ಕುಶಲ ಉದ್ಯೋಗಿಗಳ ಅಗತ್ಯವಿದೆ, ಹೆಚ್ 1ಬಿ ವೀಸಾ ಮೂಲಕ ಇಂತಹ ನೇಮಕಗಳನ್ನು ಮಾಡಿಕೊಳ್ಳಬೇಕಾಗಿದೆ ಎಂದು ಕಂಪನಿಗಳು ಹೇಳುತ್ತಿವೆ. ಆದರೆ ಇಂತಹ ನೇಮಕಗಳಿಂದ ಅಮೆರಿಕಾದ ಜನರಿಗೆ ಅವಕಾಶಗಳು ತಪ್ಪುತ್ತಿವೆ ಎಂದು ಬಲಪಂಥೀಯರು ಹೇಳುತ್ತಿದ್ದಾರೆ. ಹೆಚ್ 1ಬಿ ವೀಸಾ ವಿಸ್ತರಿಸುವ ಬದಲು ಈ ಯೋಜನೆಯನ್ನೇ ಅಂತ್ಯಗೊಳಿಸಬೇಕು ಎಂದವರು ಒತ್ತಾಯಿಸುತ್ತಿದ್ದಾರೆ. ದಕ್ಷಿಣ ಆಫ್ರಿಕಾದಲ್ಲಿ ಜನಿಸಿದ್ದ ಮಸ್ಕ್ ಸ್ವತಃ ಹೆಚ್ 1ಬಿ ವೀಸಾ ಪಡೆದು ಅಮೆರಿಕಾಗೆ ಬಂದಿದ್ದರು. ಅಮೆರಿಕಾದಲ್ಲಿ ಅತ್ಯುತ್ತಮ ಇಂಜಿನಿಯರಿಂಗ್ ಪ್ರತಿಭೆಗಳ ಕೊರತೆ ಇದೆ. ಇದರಿಂದ ಸಿಲಿಕಾನ್ ಕಣಿವೆಯ ಬೆಳವಣಿಗೆ ಕುಂಠಿತವಾಗಿದೆ ಎಂದು ಮಸ್ಕ್ ಪ್ರತಿಪಾದಿಸುತ್ತಿದ್ದಾರೆ.

ಚುನಾವಣಾ ಪ್ರಚಾರದ ವೇಳೆ ಟ್ರಂಪ್ ಅವರು ಅಕ್ರಮ ವಲಸೆ ವಿರುದ್ಧ ಕಠಿಣ ಹೇಳಿಕೆಗಳನ್ನು ಹೇಳಿದ್ದರು. ಅಕ್ರಮ ವಲಸಿಗರನ್ನು ಅವರ ದೇಶಗಳಿಗೆ ವಾಪಾಸ್ ಕಳಿಸುವುದಾಗಿ ಹೇಳಿದ್ದರು. ಅಲ್ಲದೇ ಕುಟುಂಬ ಆಧಾರಿತ ವೀಸಾ ಸೇರಿದಂತೆ ಕಾನೂನು ಬದ್ಧವಾದ ವಲಸೆ ಮೇಲೂ ಕಡಿವಾಣ ಹಾಕುವುದಾಗಿ ತಿಳಿಸಿದ್ದರು. 2016ರಲ್ಲಿ ಟ್ರಂಪ್ ಅಧ್ಯಕ್ಷರಾಗಿದ್ದಾಗ ಹೆಚ್ 1ಬಿ ವೀಸಾ ಯೋಜನೆ ಟೀಕಿಸಿದ್ದರು. ಅಮೆರಿಕಾದವರನ್ನೇ ನೇಮಿಸಿಕೊಳ್ಳಬೇಕು ಎಂಬ ಆದೇಶವನ್ನು ಹೊರಡಿಸಿದ್ದರು. ಅತಿ ಹೆಚ್ಚಿನ ಕೌಶಲ್ಯದ ಅಗತ್ಯ ಇರುವ ಹುದ್ದೆಗಳಿಗೆ ಮಾತ್ರ ಹೆಚ್ 1ಬಿ ವೀಸಾ ನೀಡಬೇಕು ಹಾಗೂ ಅಮೆರಿಕಾದ ಉದ್ಯೋಗಿಗಳನ್ನು ರಕ್ಷಿಸಬೇಕು ಎಂದು ಆದೇಶ ಹೊರಡಿಸಲಾಗಿತ್ತು.

ಆಸಕ್ತಿಕರ ಅಂಶವೆಂದರೆ ಟ್ರಂಪ್ ತಮ್ಮ ಉದ್ಯಮಗಳಲ್ಲೇ ವಿದೇಶಿ ಕಾರ್ಮಿಕರನ್ನು ನೇಮಿಸಿಕೊಂಡಿದ್ದರು. ಟ್ರಂಪ್ ಅವರ ಟ್ರುಥ್ ಸೋಷಿಯಲ್ ಸಾಮಾಜಿಕ ಜಾಲತಾಣ ಸಹ ಹೆಚ್ 1ಬಿ ಯೋಜನೆಯ ಮೂಲಕ ನೇಮಿಸಿಕೊಂಡ ಕುಶಲ ಉದ್ಯೋಗಿಗಳನ್ನು ಹೊಂದಿದೆ.

# ಉಕ್ರೇನ್ ಸಮರದಲ್ಲಿ ಉತ್ತರ ಕೊರಿಯಾ ಪಡೆಗಳಿಗೆ ಭಾರೀ ನಷ್ಟ

ಕೀವ್, ಡಿ. 28- ಉಕ್ರೇನ್ ವಿರುದ್ಧದ ಸಮರದಲ್ಲಿ ಪಾಲ್ಗೊಂಡಿರುವ ಉತ್ತರ ಕೊರಿಯಾ ಪಡೆಗಳಿಗೆ ಭಾರೀ ನಷ್ಟವಾಗಿದೆ ಹಾಗೂ ಸರಕು ಸಾಗಣೆಯ ಸಂಕಷ್ಟ ಎದುರಾಗಿದೆ ಎಂದು ಉಕ್ರೇನ್ ಪಡೆಗಳ ಗುಪ್ತಚರ ಸಂಸ್ಥೆ ತಿಳಿಸಿದೆ.

ರಷ್ಯಾದ ಕರಸ್ಕ್ ಪ್ರಾಂತ್ಯದಲ್ಲಿ ಉತ್ತರ ಕೊರಿಯಾದ ಪಡೆಗಳು ಹೋರಾಟ ನಡೆಸುತ್ತಿವೆ. ಉಕ್ರೇನ್ ದಾಳಿಗೆ ಸಿಲುಕಿ ಭಾರೀ ಸಾವು-ನೋವುಗಳು ಸಂಭವಿಸಿವೆ. ಉತ್ತರ ಕೊರಿಯಾದ ಪಡೆಗಳು ಸರಕು ಪೂರೈಕೆ ಸಮಸ್ಯೆ ಎದುರಿಸುತ್ತಿದ್ದು, ಕುಡಿಯುವ ನೀರಿಗೂ ಸಮಸ್ಯೆಯಾಗಿದೆ ಎಂದು ಉಕ್ರೇನ್ ಗುಪ್ತಚರ ಸಂಸ್ಥೆಯಾದ ಜಿ.ಯು.ಆರ್. ತಿಳಿಸಿದೆ. ರಷ್ಯಾದ ಕುರಸ್ಕ್ ಪ್ರಾಂತ್ಯದಲ್ಲಿ ಹೋರಾಟ ನಡೆಸುತ್ತಿರುವ ಉತ್ತರ ಕೊರಿಯಾ ಪಡೆಗಳ ಮೂರು ಸಾವಿರ ಸೈನಿಕರು ಸಾವನ್ನಪ್ಪಿದ್ದಾರೆ ಎಂದು ಉಕ್ರೇನ್ ಅಧ್ಯಕ್ಷ ವ್ಲಾಡಿಮಿರ್ ಜೆಲೆನ್‌ಸ್ಕಿ ಈ ಹಿಂದೆ ತಿಳಿಸಿದ್ದರು.ಮೂರು ವರ್ಷಗಳಿಂದ ಉಕ್ರೇನ್‌ನಲ್ಲಿ ಸಮರ ನಡೆಯುತ್ತಿದೆ. ಈ ಸಮರದಲ್ಲಿ ಪಾಲ್ಗೊಳ್ಳಲು ಉತ್ತರ ಕೊರಿಯಾದಿಂದ 10-12 ಸಾವಿರ ಸೈನಿಕರನ್ನು ರಷ್ಯಾ ಕರೆಸಿದೆ ಎಂದು ಹೇಳಲಾಗಿತ್ತು.

ಅಮೆರಿಕಾದ ಅಧ್ಯಕ್ಷರಾಗಿ ಡೊನಾಲ್ಡ್ ಟ್ರಂಪ್ ಅವರು ಜನವರಿಯಲ್ಲಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಅಷ್ಟರೊಳಗೆ ಉಕ್ರೇನ್‌ಗೆ ಸಾಧ್ಯವಾದಷ್ಟು ಸೈನಿಕ ನೆರವು ಒದಗಿಸಲು ಬಿಡೆನ್ ಆಡಳಿತ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ.

ಕಳೆದ ಆಗಸ್ಟ್ ತಿಂಗಳಲ್ಲಿ ರಷ್ಯ ಕುರಸ್ಕ್ ಪ್ರದೇಶದಲ್ಲಿ ಉಕ್ರೇನ್ ಪಡೆಗಳು ನುಗ್ಗಿದ್ದವು. ನಂತರ ನಡೆದ ಹೋರಾಟದಲ್ಲಿ ರಷ್ಯಾ ಪಡೆಗಳು ಸ್ವಲ್ಪಮಟ್ಟಿಗಿನ ಮುನ್ನಡೆ ಪಡೆದಿವೆಯಾದರೂ, ಕುರಸ್ಕ್ ಪ್ರದೇಶದಿಂದ ಸಂಪೂರ್ಣ ಹಿಮ್ಮೆಟ್ಟಿಸುವಲ್ಲಿ ವಿಫಲವಾಗಿವೆ

# ಸೌಹಾರ್ದತೆ ಇಲ್ಲದೇ ನೆಮ್ಮದಿಯ ಬದುಕು ಅಸಾಧ್ಯ

## ಹರಿಹರದಲ್ಲಿ ಜರುಗಿದ ಸರ್ವಧರ್ಮಗಳ ಸೌಹಾರ್ದ ಸಮಾರಂಭದಲ್ಲಿ ಮೇಯರ್ ಕೆ.ಚಮನ್ ಸಾಬ್



ಹರಿಹರ, ಡಿ.28- ನಮ್ಮಲ್ಲಿ ಸೌಹಾರ್ದತೆಯ ಬದುಕು ಇಲ್ಲದೇ ಹೋದರೆ, ಉತ್ತಮ ಹಾಗೂ ನೆಮ್ಮದಿಯ ಬದುಕನ್ನು ಕಟ್ಟಿಕೊಳ್ಳಲು ಅಸಾಧ್ಯವಾಗುತ್ತದೆ ಎಂದು ದಾವಣಗೆರೆ ಮೇಯರ್ ಕೆ.ಚಮನ್ ಸಾಬ್ ಅಭಿಪ್ರಾಯಪಟ್ಟರು.

ನಗರದ ಕೆ.ಸಿ.ವಿ. ಐಟಿಐ ಕಾಲೇಜು ಸಭಾಂಗಣದಲ್ಲಿ ಕ್ರಿಸ್‌ಮಸ್ ಹಬ್ಬದ ಅಂಗವಾಗಿ ನಡೆದ ಸರ್ವಧರ್ಮಗಳ ಸೌಹಾರ್ದ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಅವರು ಮಾತನಾಡಿದರು.

ನಾಡಿನಾದ್ಯಂತ ಇರುವಂತ ಎಲ್ಲಾ ವರ್ಗದ ದಾರ್ಶನಿಕರು, ಚಿಂತಕರು, ವಾಗ್ಮಿಗಳು, ಪಂಡಿತರು ಶಾಂತಿಯುತ ಬದುಕನ್ನೇ ಬಯಸಿದ್ದರು. ಹಾಗಾಗಿ ಸಂವಿಧಾನದ ಅಡಿಯಲ್ಲಿ ಬದುಕನ್ನು ಕಟ್ಟಿಕೊಂಡು ಹೋಗುವುದು ಅವಶ್ಯಕತೆಯಿದೆ.

ಯಾರಲ್ಲಿ ಅಹಂಕಾರ ಹಮ್ಮು-ಬಿಮ್ಮು ಮತ್ತು ನಾನೇ ಶ್ರೇಷ್ಠ ಎಂಬ ಭಾವನೆಗಳು ಇರುತ್ತವೆಯೋ ಅವುಗಳನ್ನು ಬಿಟ್ಟು ಸಮಾಜದ ಜೊತೆಗಿದ್ದೇ, ಧರ್ಮದ ಪ್ರಕಾರ ಬಾಳುವ ಭಾವನೆಗಳನ್ನು ಎಲ್ಲರೂ ಹೊಂದಬೇಕು. ಇದನ್ನು ಅರ್ಥ ಮಾಡಿಕೊಳ್ಳದೇ ಹೋದರೆ ಬದುಕು ದುಸ್ತರವಾಗುತ್ತದೆ ಎಂದು ಹೇಳಿದರು.

ಜನರ ಮನಸ್ಸುಗಳನ್ನು ಒಂದುಗೂಡಿಸುವಂತ ಹಬ್ಬಗಳು ನಡೆದಾಗ ಸಮಾಜದಲ್ಲಿ ಸಾಮರಸ್ಯದ ವಾತಾವರಣ ಸೃಷ್ಟಿಯಾಗಿ, ಸಮಾಜ ಸುಧಾರಣೆ ತನ್ನಿಂದ ತಾನೇ ಆಗುತ್ತದೆ. ಪುರಾಣ ಹಾಗೂ ಪ್ರವಚನಗಳು ಎಂದೆಂದಿಗೂ ಅಡ್ಡದಾರಿಯಲ್ಲಿ ನಿನ್ನ ಬದುಕನ್ನು ಕಟ್ಟಿಕೊಂಡು ಹೋಗು ಎಂದು ಹೇಳಿಲ್ಲ ಮತ್ತು ದುಷ್ಟ ಕೃತ್ಯ ಮಾಡಿ ಜೀವನ ನಡೆಸು ಎಂದು ಯಾವ ಧರ್ಮದಲ್ಲಿಯೂ ಇರುವುದಿಲ್ಲ. ಸಾಮರಸ್ಯ ದಿಂದ ಮತ್ತು ಉತ್ತಮ ದಾರಿಯಲ್ಲಿ ಬದುಕಲಿಕ್ಕೆ ಸಾಕಷ್ಟು ಅವಕಾಶಗಳು ಇರುತ್ತದೆ. ಆದರೆ ಇತ್ತೀಚಿನ ದಿನಗಳಲ್ಲಿ ಅಧಿಕಾರ ಮತ್ತು ಓಟ್ ಬ್ಯಾಂಕ್‌ಗೆ ಸೀಮಿತವಾದ ಹಬ್ಬದ ಆಚರಣೆಯನ್ನು ಕಾಣುತ್ತಿದ್ದೇವೆ. ಶೇಕಡ 90ರಷ್ಟು ಹಬ್ಬದ ಆಚರಣೆಗಳು ರಾಜಕೀಯ ಪ್ರೇರಿತ ಹಬ್ಬವಾಗಿವೆ. ಆದ್ದರಿಂದ ಜನರು ಅರಿತುಕೊಂಡು ಹೋಗಬೇಕಿದೆ ಎಂದು ಚಮನ್‌ಸಾಬ್ ಹೇಳಿದರು.

ವಿಶ್ರಾಂತ ಪ್ರಾಧ್ಯಾಪಕ ದಾದಾಪೀರ್ ನವಿಲೇಹಾಳ್ ಮಾತನಾಡಿ, ಮಕ್ಕಳಿಗೆ ಉತ್ತಮ ಶಿಕ್ಷಣ, ಸಂಸ್ಕಾರ, ಜ್ಞಾನ ನೀಡ ಬೇಕು. ಧಾರ್ಮಿಕ ಮುಖಂಡರು ಸಮಾಜದ ಜನರಿಗೆ ನೈತಿಕತೆಯಿಂದ ಬದುಕನ್ನು ಕಟ್ಟಿಕೊಂಡು ಹೋಗಬೇಕು ಎಂಬುದನ್ನು ತಿಳಿಸಿ, ಸಮಾಜದ ಜನರು ಶಾಂತಿ, ಸಹನೆ, ಸಾಮರಸ್ಯದಿಂದ ಬಾಳುವಂತಾಗಲು ಮಾರ್ಗದರ್ಶನ ಮಾಡಬೇಕು ಎಂದು ತಿಳಿಸಿದರು.

ತಮಗೆ ಇಷ್ಟವಾದಂತೆ ಬದುಕುವ ಹಕ್ಕು, ಅಧಿಕಾರ ಎಲ್ಲರಿಗೂ ಇದೆ. ಸಾಮರಸ್ಯ ಅಂದರೆ, ಕೂಡಿ ಬಾಳುವುದರ ಸಂಕೇತ. ಆದರೆ, ಅದರಲ್ಲಿ ನಾವೀಗ ಕೊರತೆ ಕಾಣುತ್ತಿದ್ದೇವೆ. ಹೊಂದಿಕೊಂಡು ಬಾಳುವುದರಲ್ಲಿ ಶಕ್ತಿ ಇರುತ್ತದೆ. ಗಾಂಧಿ ಕಂಡ ಕನಸು ನನಸಾಗಬೇಕು.

ಜಗತ್ತು ಪರಿವರ್ತನೆ ಆಗಬೇಕು. ಸಹನೆಯಿಂದ ಇರುವಂತಾಗಬೇಕು. ತಪ್ಪುಗಳು ನಡೆದಾಗ ಸಾರ್ವತ್ರಿಕವಾಗಿ ನೋಡುವುದನ್ನು ಬಿಡಬೇಕು. ಕಾನೂನು ಕೈಗೆ ತೆಗೆದುಕೊಳ್ಳುವುದನ್ನು ಬಿಡಬೇಕು. ನೈತಿಕ ಪೊಲೀಸ್ ಗಿರಿ ಮತ್ತು ಗೂಂಡಾ ಪ್ರವೃತ್ತಿ ಒಳ್ಳೆಯದಲ್ಲ ಎಂಬುದನ್ನು ಅರಿಯಬೇಕು ಎಂದು ಅವರು ಹಿತನುಡಿದರು.

ಕಾರ್ಮಿಕ ಮುಖಂಡ ಹೆಚ್.ಕೆ. ಕೊಟ್ರಪ್ಪ ಮಾತನಾಡಿ, ಮೇಲು-ಕೀಳು ಎಂಬ ಭಾವನೆಗಳಿಲ್ಲದೇ ಎಲ್ಲರೂ ಸಾಮರಸ್ಯದಿಂದ ಬದುಕಬೇಕಾಗಿದೆ ಎಂದು ಹೇಳಿದರು.

ಸಮಾರಂಭದ ಸಾನಿಧ್ಯವನ್ನು ಗುತ್ತೂರು ಸಿದ್ದಾಶ್ರಮ ಮಠದ ಶ್ರೀ ಪ್ರಭುಲಿಂಗ ಸ್ವಾಮೀಜಿ ವಹಿಸಿ ಮಾತನಾಡಿದರು.

ಈ ವೇಳೆ ಮಾಜಿ ಶಾಸಕ ಎಸ್.ರಾಮಪ್ಪ, ಮೌಲಾನ ಇಬ್ರಾಹಿಂ ಸಖಾಫಿ, ಎಂ. ಇಮ್ಯಾನುವೇಲ್ ದಾವಣಗೆರೆ ಮಾತನಾಡಿದರು.

ಅಧ್ಯಕ್ಷತೆಯನ್ನು ಬಂಡಾಯ ಸಾಹಿತಿ ಜೆ. ಕಲೀಂಬಾಷಾ ವಹಿಸಿದ್ದರು. ಈ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷೆ ಕವಿತಾ ಮಾರುತಿ ಬೇಡರ್, ಉಪಾಧ್ಯಕ್ಷ ಗುತ್ತೂರು ಜಂಬಣ್ಣ, ಮಾಜಿ ಅಧ್ಯಕ್ಷ ಬಿ.ರೇವಣಸಿದ್ದಪ್ಪ ನಾಮನಿರ್ದೇಶನ ಸದಸ್ಯ ಕೆ.ಬಿ. ರಾಜಶೇಖರ, ಹಿರಿಯ ಕ್ರೀಡಾಪಟು ಹೆಚ್.ನಿಜಗುಣ, ಅನಿಸ್ ಪಾಷಾ, ಕೆ.ಸಿ.ವಿ. ಐಟಿಐ ಕಾಲೇಜು ಕಾರ್ಯದರ್ಶಿ ಪರುಶುರಾಮ್ ಕಾಟ್ವೆ, ಕೆ.ಸಿ.ವಿ ಪ್ರಾಚಾರ್ಯ ರಾಘವೇಂದ್ರ, ಜಬೀನಾ ಖಾನಂ, ಮಾಜಿ ನಗರಸಭೆ ಸದಸ್ಯ ಬಾಂಬೆ ರೆಹಮಾನ್ ಸಾಬ್ ಇತರರು ಹಾಜರಿದ್ದರು.

ಸ್ವಾಗತ, ನಿರೂಪಣೆ ಶಿಕ್ಷಕ ಎ. ರಿಯಾಜ್ ಆಹ್ಮದ್ ಮಾಡಿದರು. ಹೆಗ್ಗೆರೆ ರಂಗಪ್ಪ ಭಾವೈಕ್ಯತೆ ಗೀತೆ ಹಾಡಿದರು. ಇಮ್ಮುರಾಜ್ ವಂದನಾರ್ಪಣೆ ಮಾಡಿದರು.

# ಪಿಎಂ ಕೇರ್ಸ್ ದೇಣಿಗೆ 912 ಕೋಟಿ ರೂ.ಗಳಿಗೆ ಇಳಿಕೆ

(1ನೇ ಪುಟದಿಂದ) ಬಳಕೆಯಾಗಿದೆ. ಇದರಲ್ಲಿ 346 ಕೋಟಿ ರೂ.ಗಳನ್ನು ಪಿ.ಎಂ. ಕೇರ್ಸ್ ಫಾರ್ ಚಿಲ್ಡ್ರನ್‌ಗೆ ನೀಡಲಾಗಿದೆ. ಕೊರೊನಾ ಕಾರಣದಿಂದಾಗಿ ತಂದೆ-ತಾಯಿ, ಪೋಷಕರನ್ನು ಕಳೆದುಕೊಂಡವರಿಗೆ ಈ ಯೋಜನೆ ಮೂಲಕ ನೆರವು ನೀಡಲಾಗುತ್ತಿದೆ. ಆಕ್ಸಿಜನ್ ಕಾನ್ಸಂಟ್ರೇಟರ್‌ಗಳ ಖರೀದಿಗಾಗಿ 92 ಕೋಟಿ ರೂ. ವೆಚ್ಚ ಮಾಡಲಾಗಿದೆ ಎಂದು ಪಿ.ಎಂ. ಕೇರ್ಸ್ ವೆಬ್ ತಾಣದಲ್ಲಿ ನೀಡಲಾದ ಮಾಹಿತಿ ತಿಳಿಸಿದೆ. ಕೊರೊನಾದಿಂದ ಉಂಟಾದ ಪರಿಸ್ಥಿತಿ ಎದುರಿಸುವ ಪ್ರಮುಖ ಉದ್ದೇಶದಿಂದ ನರೇಂದ್ರ ಮೋದಿ ಸರ್ಕಾರ ಪಿಎಂ ಕೇರ್ಸ್ ನಿಧಿ ಸ್ಥಾಪಿಸಿತ್ತು.

# ದೇಶದ ದಾರಿದೀಪ ಆಗಿದ್ದ ಸಿಂಗ್

## ಹೊನ್ನಾಳಿ ಶ್ರದ್ಧಾಂಜಲಿ ಸಭೆಯಲ್ಲಿ ಎಚ್.ಎ ಉಮಾಪತಿ

ಹೊನ್ನಾಳಿ,ಡಿ.28- ಆರ್ಥಿಕ ಸುಧಾರಣೆಯ ಹರಿಕಾರ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರು ಆರ್ಥಿಕ ಚತುರತೆಗೆ ಹೆಸರಾಗಿದ್ದು, ಅರ್ಥ ವ್ಯವಸ್ಥೆಗೆ ಭದ್ರ ಬುನಾದಿ ಹಾಕಿ ದೇಶದ ದಾರಿದೀಪವಾಗಿದ್ದರು ಎಂದು ಕಾಂಗ್ರೆಸ್ ಪಕ್ಷದ ಹಿಂದುಳಿದ ವರ್ಗಗಳ ವಿಭಾಗದ ರಾಜ್ಯ ಉಪಾಧ್ಯಕ್ಷ ಹೆಚ್.ಎ ಉಮಾಪತಿ ಹೇಳಿದರು.

ಪಟ್ಟಣದ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ತಾಲ್ಲೂಕು ಕಾಂಗ್ರೆಸ್ ಪಕ್ಷದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಅವರು ಮಾತ ನಾಡಿದರು.

2004 ರಿಂದ 2014 ಅವಧಿಯಲ್ಲಿ ಎರಡು ಭಾರಿ ದೇಶದ ಪ್ರಧಾನಿಯಾಗಿ ಜನಸಾಮಾನ್ಯರ, ರೈತರ ಅಭಿವೃದ್ದಿಗೆ ಅನೇಕ ಯೋಜನೆಗಳನ್ನು ಜಾರಿಗೆ ತರುವ ಮೂಲಕ ಅವರು ಆರ್ಥಿಕ ಸುಧಾರಕರಾಗಿದ್ದರು ಎಂದರು.

ಕೆಪಿಸಿಸಿ ಸದಸ್ಯ ಈಶ್ವರ್ ನಾಯ್ಕ ಮಾತನಾಡಿ, ಭಾರತ ದೇಶ ಆರ್ಥಿಕ ಸಂಕಷ್ಟದಲ್ಲಿದ್ದಾಗ, ಅಂದಿನ ಪ್ರಧಾನಿ ಪಿ.ವಿ.ನರಸಿಂಹರಾವ್ ಅವರ ನೇತೃತ್ವದ ಸರ್ಕಾರದಲ್ಲಿ ಹಣಕಾಸು ಸಚಿವರಾಗಿ ಆರ್ಥಿಕ ಸುಧಾರಣೆಗಳನ್ನು ಜಾರಿಗೆ ತಂದಿದ್ದರು ಅಲ್ಲದೇ ದೇಶದ ರೈತರು ಸಂಕಷ್ಟದಲ್ಲಿದ್ದಾಗ ಸುಮಾರು 70 ಸಾವಿರ ಕೋಟಿ ರೂಪಾಯಿ ರೈತರ ಸಾಲ ಮನ್ನಾ ಮಾಡಿದ್ದರು ಎಂದು ಸ್ಮರಿಸಿದರು.

ತಾಲ್ಲೂಕು ಬಗರ್‌ಹುಕುಂ ಸಮಿತಿ ಸದಸ್ಯ ಸಣ್ಣಕ್ಕಿ ಬಸವನಗೌಡ ಮಾತನಾಡಿ, ಮನಮೋಹನ್ ಸಿಂಗ್ ಅವರು ಭಾರತೀಯ ರಿಸರ್ವ್‌ಬ್ಯಾಂಕಿನ ಗವರ್ನರ್ ಆಗಿ ದೇಶದ ಅರ್ಥ ವ್ಯವಸ್ಥೆಯನ್ನು ಹೊಸ ದಿಕ್ಕಿನೆಡೆಗೆ ನಡೆಸಿದ್ದರು ಎಂದರು.

ಈ ಸಂದರ್ಭದಲ್ಲಿ ಸಾಸ್ವೆಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಆರ್.ನಾಗಪ್ಪ, ಪುರಸಭೆ ಅಧ್ಯಕ್ಷ ಮೈಲಪ್ಪ, ಯುವ ಕಾಂಗ್ರೆಸ್ ಒಬಿಸಿ ರಾಜ್ಯ ಉಪಾಧ್ಯಕ್ಷ ಪ್ರಶಾಂತ ಬಣ್ಣಜ್ಜಿ, ಪುರಸಭೆ ಮಾಜಿ ಸದಸ್ಯ ವಿಜೇಂದ್ರಪ್ಪ, ಹೆಚ್. ಬಿ.ಅಣ್ಣಪ್ಪ, ಮೂಲಿ ರೇವಣಸಿದ್ದಪ್ಪ, ಟಿಎಪಿಸಿಎಂಎಸ್ ಅಧ್ಯಕ್ಷ ಕಾಯಿ ಬಸಣ್ಣ, ಮುಖಂಡ ರಾದ ಸರಳಿಮನೆರಾಜಪ್ಪ, ಬೇಲಿಮಲ್ಲೂರು ಶಿವಾನಂದ, ಮನೋಜ ವಾಲಜ್ಜಿ, ಬೆನಕನಹಳ್ಳಿವೀರಣ್ಣ, ಭಾಷಾ, ನಜೀರ್ ಸಾಬ್ ಇನ್ನಿತರರಿದ್ದರು.



## ಸಮೂಹ ಹತ್ಯೆಗಳ ನಂತರ ವೈಯಕ್ತಿಕ ವಿವಾದಗಳ ತನಿಖೆ:

# ಚೀನಾದಲ್ಲಿ ಸ್ವಾತಂತ್ರ್ಯದ ಇನ್ನಷ್ಟು ಉಲ್ಲಂಘನೆಯ ಭೀತಿ


ಬ್ಯಾಂಕಾಕ್, ಡಿ. 28 - ಚೀನಾದಲ್ಲಿ ಇತ್ತೀಚೆಗೆ ಸಾಮೂಹಿಕ ಹಲ್ಲೆ ಹಾಗೂ ಹತ್ಯೆಗಳ ಘಟನೆಗಳು ನಡೆದಿದ್ದವು. ಇಂತಹ ತೀವ್ರ ಪ್ರಕರಣಗಳನ್ನು ತಡೆಯುವಂತೆ ಚೀನಾದ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರು ಸ್ಥಳೀಯ ಸರ್ಕಾರಗಳಿಗೆ ತಿಳಿಸಿದ್ದಾರೆ.

ವಾಹನ ಚಾಲಕರು ಪಾದಚಾರಿಗಳ ಮೇಲೆ ವಾಹನ ಹರಿಸಿ ಹತ್ಯೆ ಮಾಡುವುದು ಇಲ್ಲವೇ ಚಾಕು ಹಿಡಿದು ಹಲವರನ್ನು ಇರಿಯುವುದು ಚೀನಾದಲ್ಲಿ ಹೊಸದೇನೂ ಅಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಇಂತಹ ಘಟನೆಗಳು ಗಣನೀಯವಾಗಿ ಹೆಚ್ಚಾಗುತ್ತಿವೆ.

ಇಂತಹ ಘಟನೆಗಳನ್ನು ತಡೆಯಬೇಕೆಂದು ಅಧ್ಯಕ್ಷ ಜಿನ್‌ಪಿಂಗ್ ಆದೇಶಿಸಿದ ನಂತರ ಸ್ಥಳೀಯ ಅಧಿಕಾರಿಗಳು ಎಲ್ಲಾ ರೀತಿಯ ವೈಯಕ್ತಿಕ ವ್ಯಾಜ್ಯಗಳ ಬಗ್ಗೆ ಪರಿಶೀಲನೆಗೆ ಮುಂದಾಗಿದ್ದಾರೆ. ವೈವಾಹಿಕ ಬಿಕ್ಕಟ್ಟುಗಳಿಂದ ಹಿಡಿದು ಆಸ್ತಿ ಉತ್ತರಾಧಿಕಾರದವರೆಗೆ ವೈಯಕ್ತಿಕ ವಿವಾದಗಳನ್ನು ಅಧಿಕಾರಿಗಳು ಪರಿಶೀಲಿಸುತ್ತಿದ್ದಾರೆ. ಇವುಗಳಲ್ಲಿ ಯಾವುವು ತೀವ್ರ ಹಿಂಸೆಗೆ ಕಾರಣವಾಗಬಹುದು ಎಂಬ ಶೋಧನೆ ನಡೆಸಿದ್ದಾರೆ.

ಚೀನಾದ ಎಲ್ಲಾ ಸಾಮಾಜಿಕ ಹಾಗೂ ರಾಜಕೀಯ ವಿಷಯಗಳ ಮೇಲೆ ಸರ್ಕಾರ ಈಗಾಗಲೇ ಬಿಗಿ ಹಿಡಿತ ಹೊಂದಿದೆ. ಇದನ್ನು ಮೀರಿಯೂ ವೈಯಕ್ತಿಕ ಜೀವನದಲ್ಲಿ ಅಧಿಕಾರಿಗಳು ತಲೆ ಹಾಕುತ್ತಿರುವುದು ಸಮಸ್ಯೆಗೆ ಕಾರಣವಾಗಿದೆ.

ಚೀನಾದಲ್ಲಿ ನಡೆಯುತ್ತಿರುವ ಸಮೂಹದ ಮೇಲಿನ ದಾಳಿಯನ್ನು ಅಲ್ಲಿನ ಜನರು ಸಾಮಾಜಿಕ ಅಪರಾಧಗಳಿಗೆ ಪ್ರತೀಕಾರ ಎಂದು ಬಣ್ಣಿಸುತ್ತಿದ್ದಾರೆ. ನವೆಂಬರ್ ತಿಂಗಳು ಒಂದರಲ್ಲೇ ಈ ರೀತಿಯ ಮೂರು ಘಟನೆಗಳು ನಡೆದಿದ್ದವು. ಹುಣಾನ್ ಪ್ರಾಂತ್ಯದ ಪ್ರಾಥಮಿಕ ಶಾಲೆಯ ಮೇಲೆ ವ್ಯಕ್ತಿಯೋರ್ವ ದಾಳಿ ನಡೆಸಿದ್ದ. ಈತ ಹೂಡಿಕೆಯಲ್ಲಿ ನಷ್ಟ ಅನುಭವಿಸಿದ್ದ.



ಪರೀಕ್ಷೆಯಲ್ಲಿ ಅನುತ್ತೀರ್ಣನಾಗಿದ್ದ ವಿದ್ಯಾರ್ಥಿಯೋರ್ವ 8 ಜನರನ್ನು ಹತ್ಯೆಗೈದ ಘಟನೆ ಮಿಕ್ಸಿಂಗ್ ಎಂಬಲ್ಲಿ ನಡೆದಿತ್ತು. ಜುಹಲ್ ನಗರದಲ್ಲಿ ವ್ಯಕ್ತಿಯೋರ್ವ ಕಾರನ್ನು ಜನರ ಮೇಲೆ ಹರಿಸಿದ್ದ. ಘಟನೆಯಲ್ಲಿ 35 ಜನ ಸಾವನ್ನಪ್ಪಿದ್ದರು.

ಈ ರೀತಿಯ ಘಟನೆಗಳ ಹಿಂದಿನ ಉದ್ದೇಶ ಸ್ಪಷ್ಟವಾಗಿ ಗುರುತಿಸುವುದು ಕಷ್ಟ. ಆದರೆ ಚೀನಾದ ಸಮಾಜದ ಒಳಗಿನ ಒತ್ತಡಗಳೇ ಘಟನೆಗಳಿಗೆ ಕಾರಣ ಎಂದು ಪರಿಣಿತರು ಹೇಳುತ್ತಿದ್ದಾರೆ.

2015ರ ನಂತರ ಮಾನವ ಹಕ್ಕುಗಳ ವಕೀಲರು ಹಾಗೂ ಸರ್ಕಾರೇತರ ಸಂಘಟನೆಗಳ ಮೇಲೆ ಪೊಲೀಸರು ಬಿಗಿ ಹಿಡಿತ ಹೊಂದಿದ್ದಾರೆ. ಹಲವರನ್ನು ಜೈಲಿಗೆ ಹಾಕಿದರೆ, ಇನ್ನೂ ಹಲವರ ಮೇಲೆ ತೀವ್ರ ನಿಗಾ ಇರಿಸಲಾಗಿದೆ.

ದಶಕದ ಹಿಂದೆ ಜನಸಮೂಹದ ಮೇಲಿನ ದಾಳಿ ಘಟನೆಗಳ ಬಗ್ಗೆ ಮಾಧ್ಯಮಗಳು ವರದಿ ಮಾಡಬಹುದಿತ್ತು. ಹಾಗೂ ಶಂಕಿತರ ಹೆಸರು ಪ್ರಕಟಿಸಬಹುದಿತ್ತು. ಆದರೆ ಈಗ ಅಂತಹುದಕ್ಕೆ ಅವಕಾಶ ತೀರಾ ಕಡಿಮೆಯಾಗಿದೆ.

ಜುಹೈ ಹತ್ಯಾಕಾಂಡದ ಘಟನೆಯ ಮಾಹಿತಿಗಳನ್ನು ಚೀನಾ ಸರ್ಕಾರ ತೀವ್ರವಾಗಿ ಹತ್ತಿಕ್ಕಿತ್ತು. ಸಾಮಾಜಿಕ ಜಾಲತಾಣಗಳಿಂದ ಘಟನೆಯ ವೀಡಿಯೋಗಳನ್ನು ತೆಗೆದುಹಾಕಲಾಗಿತ್ತು. ಹಾಗೂ ಪ್ರತ್ಯಕ್ಷದರ್ಶಿಗಳ ಹೇಳಿಕೆ ಹಂಚಿಕೊಳ್ಳುವುದನ್ನು ತಡೆಯಲಾಗಿತ್ತು. ಹುಣಾನ್ ಶಾಲೆಯ ಮೇಲೆ ನಡೆದ ಘಟನೆಯಲ್ಲಿ ಗಾಯಗೊಂಡವರ ಸಂಖ್ಯೆಯ ಬಗ್ಗೆ ಒಂದು ತಿಂಗಳ ನಂತರ ವಿವರ ಬಹಿರಂಗ ಪಡಿಸಲಾಗಿತ್ತು.

ಸರ್ಕಾರ ಹೇರಿರುವ ಈ ರೀತಿಯ ನಿರ್ಬಂಧಗಳ ಕಾರಣದಿಂದಾಗಿ, ಜನ ಸಮೂಹದ ಮೇಲೆ ಎಷ್ಟು ದಾಳಿ ನಡೆದಿವೆ ಎಂಬುದನ್ನು ಸ್ಪಷ್ಟವಾಗಿ ಹೇಳಲು ಸಾಧ್ಯವಾಗುತ್ತಿಲ್ಲ. ಜನ ಸಮೂಹದ ಮೇಲೆ ಹಲ್ಲೆ ನಡೆಸಲು ಕಾರಣವಾಗುವ ಪ್ರಕರಣಗಳನ್ನು ತಡೆಯಬೇಕು ಹಾಗೂ ಮೂಲದಲ್ಲೇ ಅಪಾಯವನ್ನು ಹತ್ತಿಕ್ಕಬೇಕು ಎಂದು ಚೀನಾ ಅಧ್ಯಕ್ಷ ಜಿನ್‌ಪಿಂಗ್ ತಿಳಿಸಿದ್ದಾರೆ. ಇದರ ಬೆನ್ನಲ್ಲೇ ಹಲವಾರು ಸ್ಥಳೀಯ ಸರ್ಕಾರಗಳು ಶಾಲೆಗಳಿಂದ ಹಿಡಿದು ಗೋದಾಮುಗಳವರೆಗೆ ಎಲ್ಲೆಡೆ ತಪಾಸಣೆ ನಡೆಸಿದ್ದಾರೆ. ಸಂಘರ್ಷ ಹಾಗೂ ವಿವಾದಗಳನ್ನು ಸಮಗ್ರವಾಗಿ ತನಿಖೆ ನಡೆಸಿ ಇತ್ಯರ್ಥ ನಡೆಸಲು ಮುಂದಾಗಿದ್ದಾರೆ. ಕೌಟುಂಬಿಕ, ವೈವಾಹಿಕ ಹಾಗೂ ನೆರೆ-ಹೊರೆಯ ಸಮಸ್ಯೆಗಳೂ ಸಹ ಇದೇ ರೀತಿಯ ತನಿಖೆ ಹಾಗೂ ಪರಿಶೀಲನೆಗೆ ಒಳಗಾಗುತ್ತಿವೆ.

ಆಸ್ತಿ ಉತ್ತರಾಧಿಕಾರಿ, ವಸತಿ, ಜಮೀನು ಹಾಗು ಕೂಲಿ ಬಾಕಿಯಂತಹ ಬಿಕ್ಕಟ್ಟುಗಳನ್ನೂ ಸಹ ಪರಿಶೀಲಿಸಿ ಹತ್ತಿಕ್ಕುವುದಾಗಿ ಚೀನಾದ ನ್ಯಾಯ ಸಚಿವಾಲಯ ಭರವಸೆ ನೀಡಿದೆ. ಆದರೆ ಇಂತಹ ವಿವಾದಗಳನ್ನು ಯಾವ ರೀತಿ ಪತ್ತೆ ಮಾಡಲು ಸಾಧ್ಯ ಎಂಬ ಬಗ್ಗೆ ಪ್ರಶ್ನೆಗಳು ಹುಟ್ಟಿವೆ. ಇವೆಲ್ಲವೂ ವಿಷವರ್ತುಲ ಆರಂಭಕ್ಕೆ ಕಾರಣವಾಗಬಹುದು ಎಂದು ಟೊರಾಂಟೋ ವಿಶ್ವವಿದ್ಯಾಲಯದ ಉಪನ್ಯಾಸಕ ಲೈನೆಟ್ ಆಂಗೋ ಹೇಳಿದ್ದಾರೆ.

## ನಗರದಲ್ಲಿ ಇಂದು ಅಂಗನವಾಡಿ ಸಭೆ

ಎಐಟಿಯುಸಿ ಸಂಯೋಜಿತ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಫೆಡರೇಶನ್‌ನ ರಾಜ್ಯ ಸಮಿತಿ ಸದಸ್ಯರ ಸಭೆಯು ಕಾಂ. ಪಂಪಾಪತಿ ಭವನದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ನಡೆಯುವುದು ಎಂದು ರಾಜ್ಯ ಸಂಚಾಲಕ ಕಾಂ. ಆವರಗೆರೆ ಚಂದ್ರು ತಿಳಿಸಿದ್ದಾರೆ. ಈ ರಾಜ್ಯ ಸಮಿತಿ ಸಭೆಯಲ್ಲಿ ಫೆಡರೇಶನ್ ನ ರಾಜ್ಯ ಅಧ್ಯಕ್ಷ ಬಿ. ಅಮ್ಜದ್ ಮತ್ತು ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ. ಜಯಮ್ಮ ಸೇರಿದಂತೆ ರಾಜ್ಯದ ಹಲವು ಜಿಲ್ಲೆಗಳ ರಾಜ್ಯ ಸಮಿತಿ ಸದಸ್ಯರು ಭಾಗವಹಿಸುವರು.

## ಮಾಜಿ ದೇವದಾಸಿ ಮಹಿಳೆಯರಿಂದ ಅರ್ಜಿ

ದಾವಣಗೆರೆ, ಡಿ.17- ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ದಿ ನಿಗಮದ ದೇವದಾಸಿ ಪುನರ್ ವಸತಿ ಯೋಜನೆಯಡಿ ನಿವೇಶನ ಹೊಂದಿದ ಅರ್ಹ ಮಾಜಿ ದೇವದಾಸಿ ಮಹಿಳೆಯರಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಹರು ಉಪನಿರ್ದೇಶಕರ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ, 14ನೇ ಮುಖ್ಯ ರಸ್ತೆ, ಕುವೆಂಪು ನಗರ, ದಾವಣಗೆರೆ ಇಲ್ಲಿ ಅರ್ಜಿಗಳನ್ನು ಪಡೆದು 1 ಜನವರಿ 2025 ರೊಳಗೆ ಕಚೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 08192-222117 ಗೆ ಸಂಪರ್ಕಿಸಲು ಉಪನಿರ್ದೇಶಕ ರಾಜಾನಾಯ್ಕ ತಿಳಿಸಿದ್ದಾರೆ.

WANTED/ಕೆಲಸಕ್ಕೆ ಬೇಕಾಗಿದ್ದಾರೆ

Wholesale ಔಷಧಿ ಅಂಗಡಿಗೆ ಪುರುಷರು ಕೆಲಸಕ್ಕೆ ಬೇಕಾಗಿದ್ದಾರೆ.

Qualification : (SSSLC, PUC) English ಓದಲು ಬರಬೇಕು

Address : ಎ.ಕೆ. ಫಾರ್ಮ, ಹದಡಿ ರೋಡ್, ತರಳಬಾಳು ಸ್ಕೂಲ್ ಎದುರು, ಶ್ರೀನಿವಾಸ ನಗರ, ದಾವಣಗೆರೆ.

ಫೋ : 88678 56784, 99643 75596

AVAILABLE FOR RENT



Nursing Home, approximately 6000 sqft three storied building Situated in Hasabavi circle, Chamarajpet, Davangere.
available for rent interested Docters may Contact :

Dr. Raju C., 98808 51871
Dr. Ganesh C R., 82174 28193

# ಜ್ಞಾನ ಭಂಡಾರ ಡಾ. ಹೆಚ್.ವಿ.ವಾಮದೇವಪ್ಪ



ಬೆಂಗಳೂರಿನ ರವೀಂದ್ರ ಕಲಾ ಕ್ಷೇತ್ರದಲ್ಲಿ ಕನ್ನಡ ಫಿಲಂಚೇಂಬರ್ ಸಂಸ್ಥೆ ವತಿಯಿಂದ ಕಳೆದ ವಾರ ಆಯೋಜಿಸಿದ್ದ ಕನ್ನಡರಾಜ್ಯೋತ್ಸವ ಹಾಗೂ ಸ್ಯಾಂಡಲ್‌ವುಡ್ ಅವಾರ್ಡ್ 2024 ಕಾರ್ಯಕ್ರಮದಲ್ಲಿ ಡಾ. ಹೆಚ್.ವಿ. ವಾಮದೇವಪ್ಪ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಲಾಯಿತು.

18, ಮೇ 1957ರಲ್ಲಿ ಚನ್ನಗಿರಿ ತಾಲ್ಲೂಕಿನ ಹಿರೇಕೋಗಲೂರು ಗ್ರಾಮದಲ್ಲಿ ಜನಿಸಿದ ಇವರು 1 ರಿಂದ 10ನೇ ತರಗತಿಯ ವಿದ್ಯಾಭ್ಯಾಸವನ್ನೂ ಹುಟ್ಟೂರಿನ ಪ್ರೌಢಶಾಲೆ ಈಗಿನ ಶ್ರೀ ತರಳಬಾಳು ಜಗದ್ಗುರು ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಮುಗಿಸಿದರು. ನಂತರ ಶಿವಮೊಗ್ಗದ ಸ್ವತಂತ್ರ ಪದವಿ ಪೂರ್ವ ಕಾಲೇಜಿನಲ್ಲಿ ಪಿಯು ವಿದ್ಯಾಭ್ಯಾಸ ಹಾಗೂ ಸಹ್ಯಾದ್ರಿ ಕಾಲೇಜಿನಲ್ಲಿ ಸಿಬಿಝೆಡ್, ಐಚ್ಛಿಕ ವಿಷಯದಲ್ಲಿ ಬಿ.ಎಸ್ಸಿ ಪದವಿ ಮುಗಿಸಿದರು.

ರಾಸಾಯನಶಾಸ್ತ್ರ, ಸಸ್ಯಶಾಸ್ತ್ರ ಮತ್ತು ಪ್ರಾಣಿಶಾಸ್ತ್ರಗಳಲ್ಲಿ ಬಿಎಸ್ಸಿ ಪದವಿ, ಸಸ್ಯಶಾಸ್ತ್ರದಲ್ಲಿ ಎಂಎಸ್ಸಿ ಪದವಿ, ಜೀವಶಾಸ್ತ್ರ ಮತ್ತು ಇಂಗ್ಲೀಷ್‌ನಲ್ಲಿ ಬಿಇಡಿ, ಶೈಕ್ಷಣಿಕ ತಂತ್ರಜ್ಞಾನದಲ್ಲಿ ಎಂ.ಇಡಿ ಪದವಿಗಳನ್ನು ಪಡೆದಿರುತ್ತಾರೆ.

ಡಾ. ಎಂ.ಎಂ. ಪಟ್ಟಣಶೆಟ್ಟಿ ಗುರುಗಳ ಮಾರ್ಗ ದರ್ಶನದಲ್ಲಿ ಇಂಗ್ಲಿಷ್ ಮತ್ತು ಶಿಕ್ಷಣ ಶಾಸ್ತ್ರದಲ್ಲಿ ಪಿ.ಹೆಚ್.ಡಿ. ಪಡೆದಿರುತ್ತಾರೆ. ಉಪನ್ಯಾಸಕರಾಗಿ ಎಂ.ಎಲ್.ಎಂ.ಎನ್ ಶಿಕ್ಷಣ ಕಾಲೇಜು, ಪ್ರವಾಚಕ ರಾಗಿ, ಸಹ ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ,, ಎಂ.ಎಂ. ಶಿಕ್ಷಣ ಮಹಾವಿದ್ಯಾಲಯ ದಾವಣಗೆರೆಯಲ್ಲಿ ಸೇವೆ ಸಲ್ಲಿಸಿರುತ್ತಾರೆ.

ಬಿಇಡಿ ಕಾಲೇಜು ಅಧ್ಯಾಪಕರಾಗಿ 33 ವರ್ಷಗಳು ಹಾಗೂ ಸ್ನಾತಕೋತ್ತರ ಶಿಕ್ಷಣ ವಿಭಾಗದ ಸಂದರ್ಶಕ ಪ್ರಾಧ್ಯಾಪಕರಾಗಿ 12 ವರ್ಷಗಳು ಸೇವೆ ಸಲ್ಲಿಸಿರುವ ಇವರ ಬೋಧನೆಯ ಪ್ರಭಾವದಿಂದ ಅನೇಕ ಶಿಷ್ಯರು ಇಂದು ಉನ್ನತ ಹುದ್ದೆಗಳನ್ನು ಅಲಂಕರಿಸಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಶೈಕ್ಷಣಿಕ ಮನೋವಿಜ್ಞಾನ, ಜೀವಶಾಸ್ತ್ರ ಬೋಧನಾ ವಿಧಾನ, ಇಂಗ್ಲಿಷ್ ಬೋಧನಾ ವಿಧಾನ, ಪರಿಸರ ಶಿಕ್ಷಣ ಮತ್ತು ವಿಶಿಷ್ಟ ಮಕ್ಕಳ ಶಿಕ್ಷಣ ಇವರ ಬೋಧನಾ ವಿಷಯಗಳಾಗಿದ್ದು, ಇಪ್ಪತ್ತಕ್ಕೂ ಹೆಚ್ಚು ಪಿ.ಹೆಚ್.ಡಿ. ವಿದ್ಯಾರ್ಥಿಗಳಿಗೆ ಸಂಶೋಧನಾ ಮಾರ್ಗದರ್ಶಕರಾಗಿದ್ದಾರೆ.


ಶ್ರೇಯಸ್ ಪಬ್ಲಿಕೇಷನ್ಸ್ ಮೂಲಕ ಶೈಕ್ಷಣಿಕ ಮನೋವಿಜ್ಞಾನಕ್ಕೆ ಸಂಬಂಧಿಸಿದಂತೆ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗೆ ಪೂರಕವಾದ 16 ಪುಸ್ತಕಗಳು ಪ್ರಕಟಗೊಂಡಿದ್ದು, ಶೈಕ್ಷಣಿಕ ಸಂಶೋಧನೆಗೆ ಸಂಬಂಧಿಸಿದ 40ಕ್ಕಿಂತ ಹೆಚ್ಚು ಲೇಖನಗಳು, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ.

ರಾಜ್ಯ ಶಿಕ್ಷಣ ಇಲಾಖೆ ಮತ್ತು ಇತರೆ ಸಂಘಟನೆಗಳ ವೃತ್ತಿಪರ ಚಟುವಟಿಕೆಗಳಲ್ಲಿ ಪಾಲ್ಗೊಂಡಿರುವ ವಾಮದೇವಪ್ಪ ಅವರ ವಿಶಿಷ್ಟ ಸೇವೆಗಾಗಿ ಶಿಕ್ಷಣ ಭೂಷಣ ಪ್ರಶಸ್ತಿ, ದಾವಣಗೆರೆ ಜಿಲ್ಲಾಡಳಿತದಿಂದ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ಅನುಪಮಾ ಗುರು ಚೇತನ ಪ್ರಶಸ್ತಿ, ಸೋಮೇಶ್ವರ ಶಿಕ್ಷಣ ಸಿರಿ, ಸಾಹಿತ್ಯ ಶಿಕ್ಷಣ ಸೇವಾ ರತ್ನ ಪ್ರಶಸ್ತಿ, ದಾವಣಗೆರೆ ಮಹಾನಗರ ಪಾಲಿಕೆಯಿಂದ 66ನೇ ಕನ್ನಡ ರಾಜ್ಯೋತ್ಸವ ಪುರಸ್ಕಾರ, ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತಿನಿಂದ ರಾಜ್ಯಮಟ್ಟದ ಹೆಚ್.ಎನ್. ಪ್ರಶಸ್ತಿ ಹೀಗೆ ಜಿಲ್ಲಾ ಹಾಗೂ ರಾಜ್ಯಮಟ್ಟದ ಅನೇಕ ಪ್ರಶಸ್ತಿಗಳು ಇವರನ್ನರಸಿ ಬಂದಿವೆ.

ಇದೀಗ ಇವರ ಅಮೋಘ ಸೇವೆಗೆ ಮತ್ತೊಂದು ಕೀರ್ತಿಯ ಗರಿ ಮುಡಿಗೇರಿದಂತಾಗಿದೆ. ಅದುವೇ ಕನ್ನಡ ಫಿಲಂ ಚೇಂಬರ್ ಸಂಸ್ಥೆಯು ನೀಡಿರುವ ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ಇವರ ನಿಸ್ವಾರ್ಥ ಸೇವೆಯ ಫಲವಾಗಿ ಇವರು ಪ್ರಸ್ತುತ ಪ್ರತಿಷ್ಠಿತ ಸಂಸ್ಥೆಯಾದ ಶ್ರೀ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆ ಸಿರಿಗೆರೆಯ ಆಡಳಿತಾಧಿಕಾರಿಗಳಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

**- ಶಿವದೀಪ ಬಾತಿ**
ಶಿಕ್ಷಕರು, ಅನುಭವ ಮಂಟಪ, ದಾವಣಗೆರೆ.

# ಸಂಭ್ರಮದ ದೊಡ್ಡ ಎಡೆ ಜಾತ್ರೆ





**ಭಾನುವಳ್ಳಿ**

ಮಲೇಬೆನ್ನೂರು, ಡಿ. 28 - ಭಾನುವಳ್ಳಿ ಗ್ರಾಮದ ಶ್ರೀ ಬೀರಲಿಂಗೇಶ್ವರ ಸ್ವಾಮಿಯ ಮರಿಬನ್ನಿ ಅಂಗವಾಗಿ ಶುಕ್ರವಾರ ದೊಡ್ಡ ಎಡೆ ಪೂಜೆ ಹಾಗೂ ಜಾತ್ರೆ ಅಪಾರ ಭಕ್ತರ ಸಮ್ಮುಖದಲ್ಲಿ ಸಂಭ್ರಮದಿಂದ ಜರುಗಿತು.


ಸಾಮೂಹಿಕ ವಿವಾಹ ಮಹೋತ್ಸವದಲ್ಲಿ ಐದು ಜೋಡಿಗಳು ದಾಂಪತ್ಯ ಜೀವನಕ್ಕೆ ಕಾಲಿಟ್ಟರು. ಇವರಿಗೆ ದೇವಸ್ಥಾನದ ವತಿಯಿಂದ ಬಟ್ಟೆ ಹಾಗೂ ಹೂವಿನ ಹಾರಗಳನ್ನು ನೀಡಲಾಯಿತು. ನಂತರ ನಡೆದ ಧರ್ಮಸಭೆಯಲ್ಲಿ ರಟ್ಟೆಹಳ್ಳಿಯ ಕಬ್ಬಿಣಕಂಥಿ ಮಠದ ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮೀಜಿ ಆಶೀರ್ವಚನ ನೀಡಿ ಹರಿಹರ ತಾಲ್ಲೂಕಿನ ಎಲ್ಲಾ ಹಳ್ಳಿಗಳಲ್ಲಿ ನಡೆಯುವ ಬೀರದೇವರ ದೊಡ್ಡ ಎಡೆ ಪೂಜಾ ಕಾರ್ಯಕ್ರಮಗಳು ಧಾರ್ಮಿಕ ಪರಂಪರೆಯನ್ನು ಎತ್ತಿ ಹಿಡಿದಿವೆ ಎಂದರು.

ಮಠದ ನಾಗಯ್ಯ ಒಡೆಯರ್, ಜಿ. ಪಂ. ಮಾಜಿ ಸದಸ್ಯ ಎಂ. ನಾಗೇಂದ್ರಪ್ಪ, ಉದ್ಯಮಿ ಕುಂಬಳೂರು ವಿರೂಪಾಕ್ಷಪ್ಪ, ತಾಲ್ಲೂಕು ಕುರುಬ ಸಂಘದ ಅಧ್ಯಕ್ಷ ಪೂಜಾರ ಹಾಲೇಶಪ್ಪ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿ ದ್ದರು. ಗುರುವಾರ ರಾತ್ರಿ ಕಾಗಿನೆಲೆ ಕನಕ ಗುರುಪೀಠದ ಶ್ರೀ ನಿರಂಜನಾನಂದ ಪುರಿ ಸ್ವಾಮಿಜಿ ದೇವಸ್ಥಾನಕ್ಕೆ ಆಗಮಿಸಿ ಬೀರಪ್ಪನಿಗೆ ಪೂಜೆ ಸಲ್ಲಿಸಿದರು. ರಾತ್ರಿ ಜರುಗಿದ ಕಾರ್ತಿಕೋತ್ಸವದಲ್ಲಿ ಡೊಳ್ಳು, ಭಜನೆ ಮತ್ತು ಈರಗಾರರ ನೃತ್ಯಗಳು ಗಮನ ಸೆಳೆದವು.

# ನಗರದಲ್ಲಿ ಇಂದು ವಿಶ್ವ ಮಾನವ ದಿನಾಚರಣೆ

ದಾವಣಗೆರೆ : ಜಿಲ್ಲಾಡಳಿತ ವತಿಯಿಂದ ಬೂದಾಳ್ ರಸ್ತೆಯ ಎಸ್‌ಪಿಎಸ್ ನಗರದಲ್ಲಿನ ಸಮಾಜ ಕಲ್ಯಾಣ ಇಲಾಖೆ, ಡಾ.ಬಿ.ಆರ್.ಅಂಬೇಡ್ಕರ್ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ವಿಶ್ವ ಮಾನವ ದಿನಾಚರಣೆ ಕಾರ್ಯಕ್ರಮ ನಡೆಯಲಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರವಿಚಂದ್ರ ತಿಳಿಸಿದ್ದಾರೆ.

# ಕನ್ನಡ ಸಾಹಿತ್ಯದ ಬೆಳಕು



ಸೀತಮ್ಮನವರ ಒಡಲಿನಲಿ ಜನಿಸಿದ ಕೂಸು ಕುಪ್ಪಳ್ಳಿಯಲಿ ಬೆಳಗಿದ ಪ್ರಕಾಶಮಾನವಾದ ಬೆಳಕು, ರಾಮಕೃಷ್ಣ ಪರಮಹಂಸ ರಿಂದ ಪ್ರಭಾವಿತರಾದ ರಸಋಷಿ ಬೇಂದ್ರೆಯವರಿಂದ ಯುಗದಕವಿ ಜಗದಕವಿ ಎನಿಸಿಕೊಂಡರು.

ರವಿ ಕಾಣದ್ದನ್ನು ಕವಿ ಕಂಡ ಎಂಬುದನ್ನು ಸಾಬೀತು ಮಾಡಿದ ಮಹನೀಯರು ಕೋಗಿಲೆ ಮತ್ತು ಸೋವಿಯತ್ ರಷ್ಯಾ ಕವನದಲ್ಲಿ ಮೂಡಿ ಬಂದಿದೆ ವೈಚಾರಿಕ ನಿಲುವು , ವಿಶ್ವಕವಿ ಕುವೆಂಪು ಹೊತ್ತ ಚೇತನ, ಕಡಲಿಗಿಂತ ಆಳ ಸಾಹಿತ್ಯದ ಶ್ರುತಿಗಾನ, ಮಲೆಯ ಹಸಿರಿನಂತೆ ಅವರ ಕಾದಂಬರಿಗಳು ಕನ್ನಡನಾಡಿಗೆ ದಾರಿ ತೋರಿದ ದೀಪಗಳು.

ಸೃಷ್ಟಿಯ ಸೌಂದರ್ಯ ವರ್ಣಿಸಿದ ಕವಿ, ಮಾನವತೆಯ ಸಂದೇಶ ಸಾರಿದ ಪ್ರಭಾವಿ, ಮೌಢ್ಯತೆ ಎಂಬ ಮಾರಿಯನ್ನು ಹೊರದೂಡಬೇಕೆಂದು ಕರೆ ನೀಡಿದ ಕವಿ ಪುಂಗವರು.

ಜಯ ಭಾರತ ಜನನಿಯ ತನುಜಾತೆ ಎಂಬ ನಾಡಗೀತೆ ರಚಿಸಿದ ರಾಷ್ಟ್ರಕವಿ, ಶ್ರೀ ರಾಮಾಯಣ ದರ್ಶನಂ ಕೃತಿಗೆ ಜ್ಞಾನಪೀಠ ಪ್ರಶಸ್ತಿ ಪಡೆದ ಮೊದಲಿಗರು.

**- ಶ್ವೇತಾ ಸಂದೀಪ್**, ಶಿವಮೊಗ್ಗ, 9900930162

# ನಗರದಲ್ಲಿಂದು ಕಲೆಯ ಶಿಬಿರ

ರಂಗಕಲಾ ಆಕಾಡೆಮಿಯಿಂದ ಇಂದು ರಂಗ ಮಹಲ್‌ನ ಸಭಾಂಗಣದಲ್ಲಿ ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆ ಮತ್ತು ಮಧ್ಯಾಹ್ನ 2ರಿಂದ ಸಂಜೆ 4 ರವರೆಗೆ ಕಲೆಯ ವೃತ್ತಿಪರ ಮತ್ತು ಸೃಜನಶೀಲದ ಪಠ್ಯಕ್ರಮದ ಕಲೆಯ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ. ವಿವರಕ್ಕೆ ಯುವ ಕಲಾವಿದೆ ಕು. ನೇಹಾ ಚನ್ನಗಿರಿ (9980868443, 9844467207) ಅವರನ್ನು ಸಂಪರ್ಕಿಸಬಹುದು.

# ಮಹಿಳಾ ಸಮ್ಮಾನ್ ಯೋಜನೆ ಹೆಸರಿನಲ್ಲಿ ಮಾಹಿತಿ ಸಂಗ್ರಹ

(1ನೇ ಪುಟದಿಂದ) ಸಂದೀಪ್ ದೀಕ್ಷಿತ್ ಅವರು ಇತ್ತೀಚೆಗೆ ಸಕ್ಸೇನಾ ಅವರನ್ನು ಭೇಟಿ ಮಾಡಿ ಮಾಹಿತಿ ಸಂಗ್ರಹಿಸುತ್ತಿರುವ ಬಗ್ಗೆ ದೂರು ಸಲ್ಲಿಸಿದ್ದರು.

ಸರ್ಕಾರೇತರ ವ್ಯಕ್ತಿಗಳು ಮಹಿಳೆಯರಿಂದ ವೈಯಕ್ತಿಕ ಮಾಹಿತಿ ಸಂಗ್ರಹಿಸುತ್ತಿದ್ದಾರೆ. ಅವರ ಸರ್ಕಾರಿ ಯೋಜನೆಯ ಫಲಾನುಭವಿ ಮಾಡುವ ಹೆಸರಿನಲ್ಲಿ ಖಾಸಗಿ ಮಾಹಿತಿ ಸಂಗ್ರಹಿಸುತ್ತಿರುವವರ ವಿರುದ್ಧ ಕಾನೂನು ರೀತಿ ಕ್ರಮ ತೆಗೆದುಕೊಳ್ಳಬೇಕು ಎಂದು ದೀಕ್ಷಿತ್ ಮನವಿ ಮಾಡಿಕೊಂಡಿದ್ದರು.

ಮಹಿಳಾ ಸಮ್ಮಾನ್ ಯೋಜನೆ ಅಡಿಯಲ್ಲಿ 18 ವರ್ಷ ಮೀರಿದ ಪ್ರತಿಯೊಬ್ಬ ಮಹಿಳೆಗೆ ತಿಂಗಳಿಗೆ ಸಾವಿರ ರೂ. ನೀಡುವುದಾಗಿ ದೆಹಲಿ ಸರ್ಕಾರ ಭರವಸೆ ನೀಡಿತ್ತು.

ಮುಂದಿನ ಚುನಾವಣೆಯಲ್ಲಿ ಮರು ಆಯ್ಕೆ ಆದಲ್ಲಿ ಈ ಮೊತ್ತವನ್ನು ಸರ್ಕಾರ 2,100 ರೂ.ಗಳಿಗೆ ಹೆಚ್ಚಿಸಲಿದೆ ಎಂದು ಆಮ್ ಆದ್ಮಿ ಪಾರ್ಟಿ ಹೇಳಿತ್ತು.

ಈ ಬಗ್ಗೆ ಸಾರ್ವಜನಿಕ ಪ್ರಕಟಣೆಯೊಂದನ್ನು ಹೊರಡಿಸಿದ್ದ ದೆಹಲಿಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಈ ಯೋಜನೆಗೆ ಆದೇಶ ಹೊರಬಿದ್ದ ನಂತರ ವೆಬ್‌ಸೈಟ್ ಮೂಲಕ ಮಾಹಿತಿ ಸಂಗ್ರಹಿಸಲಾಗುವುದು. ಅನಧಿಕೃತ ವ್ಯಕ್ತಿಗಳಿಗೆ ಅರ್ಜಿಗಳನ್ನು ತುಂಬಿ ಕೊಡಬಾರದು ಎಂದು ತಿಳಿಸಿತ್ತು.

# ಯಾದವ ಹಾಸ್ಟೆಲ್‌ಗೆ ಅರ್ಜಿ ಆಹ್ವಾನ

ದಾವಣಗೆರೆ, ಡಿ.27- ನಗರದ ಎಂಸಿಸಿ 'ಬಿ' ಬ್ಲಾಕಿನ 6ನೇ ಮುಖ್ಯ ರಸ್ತೆಯ 7ನೇ ಕ್ರಾಸಿನಲ್ಲಿರುವ ಯಾದವ ವಿದ್ಯಾರ್ಥಿ ನಿಲಯದಲ್ಲಿ ವಸತಿಗಾಗಿ ಸಮಾಜದ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಪಿಯುಸಿ ಮೇಲ್ಪಟ್ಟು ವಿದ್ಯಾಭ್ಯಾಸ ಮಾಡುವ ಯಾದವ ಸಮಾಜದ ವಿದ್ಯಾರ್ಥಿಗಳು ಉಚಿತ ವಸತಿ ಸೌಲಭ್ಯಕ್ಕೆ ಅರ್ಹರಾಗಿದ್ದಾರೆ. ಮಾಹಿತಿಗಾಗಿ 98456 19207, 9880164534 ಹಾಗೂ 9880515495 ಸಂಪರ್ಕಿಸಿ.


**ಜಮೀನು ಬೇಕಾದಲ್ಲಿ ಸಂಪರ್ಕಿಸಿ**
ದಾವಣಗೆರೆ ತಾ. ಕೋಳೇನಹಳ್ಳಿಯಲ್ಲಿ ಎಕರೆ 8 ಗುಂಟೆ 23 ಜಮೀನು ಮಾರಾಟಕ್ಕೆ ಇದೆ. (ಕೆಂಪು ಮಣ್ಣು ಖಾಲಿ ಹೊಲ ನೀರಾವರಿ. ಸಂತೆಬೆನ್ನೂರಲ್ಲಿ ಎಕರೆ 8 ಗುಂಟೆ 20 ಇದರಲ್ಲಿ 4 ಎಕರೆ ಅಡಿಕೆ ಇದೆ. 2 ವರ್ಷದ್ದು, ಇನ್ನೂ 4 1/2 ಎಕರೆ ಖಾಲಿ ಇದೆ. ಈ ಜಮೀನು ಮಾರಾಟಕ್ಕೆ ಇದೆ. ಸಂಪರ್ಕಿಸಿ : ಪ್ರಾಪರ್ಟಿ ಅಡ್ವೈಸರ್ ಸುರೇಶ್ ಪಿ.ಎಸ್. ಶಾಮನೂರು.
ಮೊ : 84314 00907

**2 BHK ಮನೆ ಬಾಡಿಗೆಗಿದೆ**
ಶಾಮನೂರಿನ ಶಿವ-ಪಾರ್ವತಿ ಬಡಾವಣೆ ಶಿರಮಗೊಂಡನಹಳ್ಳಿ ರಸ್ತೆ # 213/2-3, ವಿಹನ್ಯ ನಿಲಯದಲ್ಲಿ ಸೋಲಾರ್, ಸಿಸಿ ಟಿವಿ, ಬೋರ್ ನೀರಿನ ಸೌಕರ್ಯವಿರುವ 2 ಬೆಡ್ ರೂಂ, 30x56 ಅಡಿ ಅಳತೆಯ ಸುಸಜ್ಜಿತ ಹೊಸ ಮನೆ ಬಾಡಗೆಗಿದೆ. (ಸಸ್ಯಹಾರಿಗಳಿಗೆ ಮಾತ್ರ)
ಸಂಪರ್ಕಿಸಿ : 98868-09403

**ಸೇಲ್ಸ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ**
ಶಾಪ್ ಹೆಸರು : ಸೆಲೆಬ್ರೇಷನ್ಸ್,
ವಿಳಾಸ : ಚರ್ಚ್ ರೋಡ್,
ದಾವಣಗೆರೆ. ಸಂಪರ್ಕಿಸಿ :
85535 50436, 97317 22522
ಹುಡುಗರು ಬೇಕಾಗಿದ್ದಾರೆ.

**ಸೈಟುಗಳು ಮಾರಾಟಕ್ಕಿವೆ**
ಶಕ್ತಿನಗರ 40x60 North, ಆಂಜನೇಯ ಬಡಾವಣೆ 30x50 North, 30x57 South
ಸರಸ್ವತಿ ನಗರ 30X50 North
ಬನಶಂಕರಿ ಬಡಾವಣೆ 30x50 North,
30x60East (40 ಅಡಿ ರಸ್ತೆ)
95385 65909

**ಖರೀದಿ & ಮಾರಾಟಕ್ಕಿದೆ**
ಜಗಳೂರು ಮೇನ್ ರೋಡ್
ಬೋರಗೊಂಡನಹಳ್ಳಿ
ಹತ್ತಿರ 25 ಗುಂಟೆ ಕಮರ್ಷಿಯಲ್
ಜಾಗ ಮಾರಾಟಕ್ಕಿದೆ.
ಸುರೇಶ್ : 98446 64444

**ಶ್ರೇಯಸ್ ಉದರ, ಲಿವರ್, ಕರುಳು ರೋಗಗಳ ಚಿಕಿತ್ಸಾ ಕೇಂದ್ರ**
**ಡಾ. ಇ.ಆರ್. ಸಿದ್ದೇಶಿ**
M.D. (MED), D.M. (Gastro), F.A.C.G. (USA), P.G.C.C. Diab. Care (Aust)
ಉದರ, ಲಿವರ್, ಕರುಳು, ಪ್ಯಾನ್‌ಕ್ರಿಯಾಸ್, ಎಂಡೋಸ್ಕೋಪಿ, ಸಕ್ಕರೆ ಕಾಯಿಲೆ ತಜ್ಞರು
8th Main, 8th Cross, P.J. Extension, Davangere.
ಭೇಟಿಯ ಸಮಯ : ಬೆ. 9 ರಿಂದ ಮಧ್ಯಾಹ್ನ 3
ಹಾಗೂ ಸಂಜೆ 7.30 ರಿಂದ 8.30
By Appointment only.
94837 23166

**ಬೇಕಾಗಿದ್ದಾರೆ**
ಹೋಟೇಲ್‌ಗೆ ಅಡುಗೆ ಭಟ್ಟರು,
ಸಹಾಯಕರು, ಮಹಿಳಾ
ಸಹಾಯಕರು ಬೇಕಾಗಿದ್ದಾರೆ.
ಸಂಪರ್ಕಿಸಿ
63635 43487

**ಮಳಿಗೆ ಬಾಡಿಗೆಗೆ ಇದೆ**
26 × 41 ಮಳಿಗೆ ಬಾಡಿಗೆಗೆ ಇದೆ
2ನೇ ಮಹಡಿ (ಲಿಫ್ಟ್ ಸೌಲಭ್ಯ ಇದೆ)
ಪೂಜಾ ಮಕ್ಕಳ ಆಸ್ಪತ್ರೆ
3 ನೇ ಮುಖ್ಯರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.
99725 09800
96118 89475

**ಮನೆ ಲೀಜ್‌ಗಿದೆ**
# 3100/51, ನೂತನ ಕಾಲೇಜ್ ರಸ್ತೆ, 7ನೇ ಮುಖ್ಯರಸ್ತೆ, 34ನೇ ವಾರ್ಡ್, 7ನೇ C ಶಿವಶಕ್ತಿ ಬ್ಲಾಕ್, ಅಳತೆ 30x50 ಅಡಿ, ವಿವೇಕಾನಂದ ಬಡಾವಣೆ, ದಾವಣಗೆರೆ ಉತ್ತರಾಭಿಮುಖ, 1ನೇ ಮಹಡಿ ಡಬಲ್ ಬೆಡ್ ರೂಂ, 2ನೇ ಮಹಡಿ, 3 ಬೆಡ್ ರೂಂ ಮನೆ ಮುನ್ಸಿಪಲ್/ಬೋರ್‌ವೆಲ್ ಇದೆ.
95387 32909, 98444 56243

**ಮಾರಾಟಕ್ಕಿದೆ**
ಹಳೆ ಕುಂದವಾಡದಲ್ಲಿರುವ 28.98×28.93= 868 ಅಳತೆಯ ದಕ್ಷಿಣ ಸೈಟು ಹಾಗೂ ಹರಿಹರದ ಶೇರಾಪುರದಲ್ಲಿ 40× 60 (ಉತ್ತರ) KHB ನಿವೇಶನವು (ನೌಕರ ಸಂಘದವರು ನಿರ್ಮಿಸುತ್ತಿರುವ ಲೇಔಟ್ ಹತ್ತಿರ) ಮಾರಾಟಕ್ಕಿದೆ. ಸಂಪರ್ಕಿಸಿ
99723 43286

**ಬೇಕಾಗಿದ್ದಾರೆ**
ವೀರಶೈವ ಖಾನಾವಳಿಯಲ್ಲಿ
ಕೆಲಸಕ್ಕೆ ಮಹಿಳೆಯರು ಅಥವಾ
ಪುರುಷರು ಬೇಕಾಗಿದ್ದಾರೆ.
99017 70830
99458 29046

**ಮನೆ ಬಾಡಿಗೆಗೆ/ಲೀಸ್‌ಗಿದೆ**
ಸರಸ್ವತಿ ಬಡಾವಣೆ, ಜಯನಗರ,
ಶಿವಕುಮಾರಸ್ವಾಮಿ ಬಡಾವಣೆ,
ಶಕ್ತಿ ನಗರ, ಆಂಜನೇಯ ಬಡಾವಣೆ,
ಮಾಗಾನಹಳ್ಳಿ ಮೇನ್‌ರೋಡ್‌ಗೆ
10 ಗುಂಟೆ ಜಮೀನು ಮಾರಾಟಕ್ಕಿದೆ
78997 60749, 99726 75759

**ಕಮರ್ಷಿಯಲ್ ಸೈಟುಗಳು ಮಾರಾಟಕ್ಕಿದೆ**
ಓಲ್ಡ್ ಪಿ.ಬಿ. ರಸ್ತೆ, (ಅರುಣ ಟಾಕೀಸ್ ಹತ್ತಿರ) ದಕ್ಷಿಣ 50x150,
ಜಿ.ಎಂ.ಐ.ಟಿ. ಕಾಲೇಜು ಹತ್ತಿರ, ಉತ್ತರ
85x360 ಸೈಟ್ ಮಾರಾಟಕ್ಕಿದೆ.
ಐಗೂರು ವಿಜಯಕುಮಾರ್
99457 02495

**ಸೈಟು, ಮನೆ & ಹೊಲ ಬೇಕಾದಲ್ಲಿ ಸಂಪರ್ಕಿಸಿ**
ಶಿವ-ಪಾರ್ವತಿಯಲ್ಲಿ 30x50 ಪೂರ್ವ 40x52 ಪಶ್ಚಿಮ-ಉತ್ತರ ಕಾರ್ನರ್, 40x60 ಪೂರ್ವ 40 ಅಡಿ ರಸ್ತೆಗೆ ಬನಶಂಕರಿಯಲ್ಲಿ (ಹೊಸ) 40x70 ಪಶ್ಚಿಮ 30x57 ಪೂರ್ವ ಸರ್ಕಾರಿ ನೌಕರರ ಬಡಾವಣೆಯಲ್ಲಿ 30x40 ಪೂರ್ವ 30x51 ಉತ್ತರ, 30x50 ಉತ್ತರ ಹಳೆ ಬಾತಿ & ಹೊಸ ಬಾತಿ ಮಧ್ಯ 28 ಗುಂಟೆ ಜಮೀನು ಮಾರಾಟಕ್ಕೆ, ಸೈಟುಗಳು ಸೇರಿ ಮಾರಾಟಕ್ಕಿವೆ. ಸಂಪರ್ಕಿಸಿ: (ಪ್ರಾಪರ್ಟಿ ಅಡ್ವೈಸರ್) ಸುರೇಶ್ ಪಿ.ಎಸ್. ಶಾಮನೂರು
ಮೊ: 84314 00907

**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಬಡಾವಣೆ ಪೂರ್ವ 30x50 ಅಕ್ಕ-ಪಕ್ಕ (60 ಅಡಿ ರಸ್ತೆ ಪಕ್ಕ) 30x57 ಅಕ್ಕ-ಪಕ್ಕ ಪಶ್ಚಿಮ 80x70, 30x70 (60 ಅಡಿ ರಸ್ತೆ) ಎಸ್.ಎಸ್. ಬಿ ಬ್ಲಾಕ್, ದಕ್ಷಿಣ 30x50 (ಕವಿ ಹೋಟೆಲ್ ಪಕ್ಕ) ಎಂ.ಸಿ.ಸಿ. ಬಿ ಬ್ಲಾಕ್ ಪೂರ್ವ 44x60 (ಮಾಮಾಸ್ ಜಾಯಿಂಟ್ ಹತ್ತಿರ)
ಐಗೂರು ವಿಜಯಕುಮಾರ್
99457 02495

**ಬೇಕಾಗಿದ್ದಾರೆ**
ದಾವಣಗೆರೆಯ ಪ್ರತಿಷ್ಠಿತ ಸಸ್ಯಹಾರಿ ಊಟದ ಹೋಟೆಲ್ ಗೆ ರೊಟ್ಟಿ ಮತ್ತು ಚಪಾತಿ ಮಾಡಲು ಮಹಿಳೆಯರು ಹಾಗೂ ಸರ್ವಿಸ್ ಗೆ ಪುರುಷ ಮತ್ತು ಮಹಿಳೆಯರು ಬೇಕಾಗಿದ್ದಾರೆ. ಉಚಿತ ಊಟ, ವಸತಿ ಸೌಲಭ್ಯವಿದೆ. ಕೂಡಲೇ ಸಂಪರ್ಕಿಸಿ :
9448980070, 88847 04025

**ಸೈಟುಗಳು ಇವೆ**
ಸರ್ಕಾರಿ ನೌಕರರ ಬಡಾವಣೆಯಲ್ಲಿ
30x40 KHB ಯಲ್ಲಿ 30x40
KHB ಪಕ್ಕ 30x40, ಜೆ.ಹೆಚ್.
ಪಟೇಲ್ ಬಡಾವಣೆಯಲ್ಲಿ 20x30.
99023 80646

**ಮನೆಗಳು ಮಾರಾಟಕ್ಕಿವೆ**
ಎಸ್.ಎಸ್. ಬಿ ಬ್ಲಾಕ್ ದಕ್ಷಿಣ
30x40 ಡುಪ್ಲೆಕ್ಸ್ ಉತ್ತರ 30x40
ಜೆ.ಹೆಚ್. ಪಟೇಲ್ ಬಡಾವಣೆ,
ಉತ್ತರ, 30x50, ವಿದ್ಯಾನಗರ
ದಕ್ಷಿಣ 50x80
ಐಗೂರು ವಿಜಯಕುಮಾರ್
99457 02495

**ಮನೆ ಬಾಡಿಗೆಗೆ ಇದೆ**
2BHK ಉತ್ತರಬಾಗಿಲು ಮನೆ.
ನಲ್ಲಿ ನೀರು, ಬೋರ್‌ವೆಲ್ ಇರುವ
20x30 ಶ್ರೀನಿವಾಸ ನಗರ,
10ನೇ ಕ್ರಾಸ್, 696/19, ಹದಡಿ
ರೋಡ್, ದಾವಣಗೆರೆ.
ಸಸ್ಯಹಾರಿಗಳಿಗೆ ಮಾತ್ರ. ವಿಚಾರಿಸಿರಿ.
98800 68009

**FLAT FOR SALE**
ದಾವಣಗೆರೆ ವಿದ್ಯಾನಗರ ಕೊನೆ
ಬಸ್ ಸ್ಟಾಪ್ ಬಳಿ 3BHK
semi furnished ಫ್ಲಾಟ್
ಮಾರಾಟಕ್ಕಿದೆ.
ಸಂಪರ್ಕಿಸಿ. : 88614 11687

**ಮನೆ ಬಾಡಿಗೆಗೆ ಇದೆ**
# 678/41C,4ನೇ ಕ್ರಾಸ್, ಶಿವಕುಮಾರ ಸ್ವಾಮಿ ಬಡಾವಣೆ, ಸೋಮೇಶ್ವರ ಹಾಸ್ಪಿಟಲ್, ನಮ್ಮೂರ ತಿಂಡಿ ಹೋಟೆಲ್ ಹತ್ತಿರ, ದಾವಣಗೆರೆ. 1ನೇ ಮಹಡಿ, 30x40 ಅಳತೆ, 2 BHK ಮನೆ ಬಾಡಿಗೆಗೆ ಇದೆ.
(ಶಾಖಾಹಾರಿಗಳಿಗೆ ಮಾತ್ರ)
9449291436, 9740024640

**ಮಾರಾಟಕ್ಕೆ ಇದೆ**
Jupitor 110 CC Gray
ಹೊಸಗಾಡಿ 2 ತಿಂಗಳಲ್ಲಿ 2530
ಕಿ.ಮೀ. ಓಡಿರುವ ಗಾಡಿ
ಮಾರಾಟಕ್ಕೆ ಇದೆ.
90080 92650
96639 64854

**2 BHK ಮನೆ ಬಾಡಿಗೆಗೆ ಇದೆ**
ಗ್ರೌಂಡ್ ಫ್ಲೋರ್ ಸಿದ್ದಗಂಗಾ ಶಾಲೆ
ಹತ್ತಿರ, ದಾವಣಗೆರೆ.
(ಸಸ್ಯಹಾರಿಗಳಿಗೆ ಮಾತ್ರ)
96119 04100

**ಕಮರ್ಶಿಯಲ್ ಸೈಟ್ ಮಾರಾಟಕ್ಕಿದೆ**
ಸಂತೇಬೆನ್ನೂರಿನ ಮೇನ್ ರೋಡ್‌ನಲ್ಲಿ
40x60 ಅಡಿ ಅಳತೆಯ ಸೈಟ್
ಮಾರಾಟಕ್ಕಿದೆ. ಮಧ್ಯವರ್ತಿಗಳು ಕರೆ ಮಾಡಿ
99807 66410

**ಸೈಟ್ ಮಾರಾಟಕ್ಕಿದೆ**
40x54 ದಕ್ಷಿಣ ಮುಖ. ಇಪ್ಪತ್ತು ಡೋ.ನಂ. ಇರುವ ಸೈಟ್, ಹದಡಿ ರಸ್ತೆ, ಪ್ರಗತಿ ಕಾಂಕ್ರೀಟ್ ಪಕ್ಕದ ರಸ್ತೆ, ಶ್ರೀನಿವಾಸ ನಗರ, 4ನೇ ಕ್ರಾಸ್, ದಾವಣಗೆರೆ. ಗೌಡ್ರು
83105 03746

**TO-LET**
2nd floor, 1BHK for rent
Beside winners career academy AVK College road, #303/4, PJ extension
2nd main road
Stadium road, Davangere.
96111 74878

**ಸೈಟು ಮಾರಾಟಕ್ಕಿದೆ**
30x30 ದಕ್ಷಿಣ, 30x35 ಉತ್ತರ,
ಹೊಸ ಸರ್.ಎಂ.ವಿ. ಕಾಲೇಜ್
ಹಿಂಭಾಗ. ಸಂಪರ್ಕಿಸಿ :
83106 43453
70266 11468

**WANTED**
* Marketing Executive
* Accountant
* godown Incharge
63620 23451,
97434 37003

**ಮನೆಗಳು ಮಾರಾಟಕ್ಕಿವೆ**
ಭಗೀರಥ ಸರ್ಕಲ್, ನಿಟುವಳ್ಳಿ,
ದಾವಣಗೆರೆ ಹತ್ತಿರ ಇರುವ
20x30 ಸೈಜಿನ ಮನೆಗಳು
ಮಾರಾಟಕ್ಕಿವೆ. ಸಂಪರ್ಕಿಸಿರಿ :
94484 39639

**ಬೇಕಾಗಿದ್ದಾರೆ**
ಎಂಸಿಸಿ ಬಿ ಬ್ಲಾಕ್, 11ನೇ ಮೇನ್, 5ನೇ ಕ್ರಾಸ್‌ನಲ್ಲಿರುವ ಆಯುರ್ವೇದಿಕ್ ಆಸ್ಪತ್ರೆಯಲ್ಲಿ ಆಯಾ ಕೆಲಸಕ್ಕೆ ಮತ್ತು ಟ್ರೀಟ್‌ಮೆಂಟ್ ಮಾಡಲು ಎಸ್ಸೆಸ್ಸೆಲ್ಸಿ/ ಪಿಯುಸಿ ಓದಿರುವ ಮಹಿಳೆ ಬೇಕಾಗಿದ್ದಾರೆ.
ಸಮಯ : ಬೆಳಿಗ್ಗೆ 8 ರಿಂದ ಮಧ್ಯಾಹ್ನ 3 ಗಂಟೆಯವರೆಗೆ
63634 11022, 98862 22719

**ಸೈಟುಗಳು ಮಾರಾಟಕ್ಕಿವೆ**
ಪುಟಗನಾಳು ಗ್ರಾಮದಲ್ಲಿ ಪಂಚಾಯಿತಿ ಡೋರ್ ನಂಬರ್, ಫೈನಲ್ ಅಪ್ರೂವಲ್ ಮತ್ತು ದೂಡ ಅಪ್ರೂವಲ್, ಹೊಸ ಔಟರ್ ರಿಂಗ್ ರೋಡ್‌ನಿಂದ ಕೇವಲ 1.5 km ದೂರದಲ್ಲಿರುವ ಸೈಟ್‌ಗಳು ಮಾರಾಟಕ್ಕಿವೆ.
1 ಅಡಿಗೆ 1050 ರೂ. ಗಳು ಮಾತ್ರ.
8618343463, 86187 28546

**ಸೈಟು ಮಾರಾಟಕ್ಕಿದೆ**
30x40 ಉತ್ತರ,
ಹೊಸ ಸರ್.ಎಂ.ವಿ. ಕಾಲೇಜ್
ಹಿಂಭಾಗ.
98454 62129

**ಸೈಟುಗಳು ಮಾರಾಟಕ್ಕಿದೆ**
ದೊಡ್ಡಬಾತಿ ಯಲ್ಲಿ ಅಶ್ವಿನಿ ಆಯುರ್ವೇದಿಕ್ ಕಾಲೇಜು ಹಿಂಭಾಗ, KMF opposite, ಯರಗುಂಟೆ ರೋಡ್ ನಲ್ಲಿ ಕಾಮಗಾರಿ ಪ್ರಗತಿಯಲ್ಲಿರುವ ಲೇಔಟ್ ನಲ್ಲಿ ಸೈಟುಗಳು ಮಾರಾಟಕ್ಕಿದೆ.
99025 51949

**ಮನೆ ಬಾಡಿಗೆಗೆ ಇದೆ**
DCM ಟೌನ್ ಶಿಪ್ ಎ ಬ್ಲಾಕ್, 1ನೇ ಮೇನ್, 2ನೇ ಕ್ರಾಸ್‌ನಲ್ಲಿ 1ನೇ ಮಹಡಿಯಲ್ಲಿ 3 ಬೆಡ್ ರೂಂ ಇರುವ ಹಾಗೂ ಬೋರ್/ ಕಾರ್ಪೋರೇಷನ್ ನೀರಿನ ವ್ಯವಸ್ಥೆ ಇದೆ.
88672 33324
97416 82662

**ಸಾಲಗಳಿಗಾಗಿ ಸಂಪರ್ಕಿಸಿ**
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ ಮತ್ತು ಮನೆ ಕಟ್ಟಲು ಫೈನಾನ್ಸ್ ಕಂಪನಿಯಲ್ಲಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲ ಅತೀ ಕಡಿಮೆ ಬಡ್ಡಿದರದಲ್ಲಿ ಸಾಲ ವರ್ಗಾವಣೆ ಮಾಡಿಕೊಡಲಾಗುವುದು.
73385 80345, 99455 22287

**FLAT FOR LEASE**
3 BHK, Sqft : 1888
AM Apartment
Nainika Prime Rose
Vidyanagar Last city bus stop Davangere.
89519 38228, 80502 22181

**ಸೈಟುಗಳು ಇವೆ**
ಸರ್ಕಾರಿ ನೌಕರರ ಬಡಾವಣೆಯಲ್ಲಿ
30x40 ಪೂರ್ವ KHB ಯಲ್ಲಿ, 30x40
ಪೂರ್ವ KHB ಪಕ್ಕ, 30x40 ಉತ್ತರ,
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ
20x30 ಪಶ್ಚಿಮ ಸೈಟ್ ಇವೆ.
99023 80646

**ವಾಟರ್ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಬಾಡಿಗೆಗೆ ಇದೆ**
RTO ಆಫೀಸ್ ಹತ್ತಿರ ಲತಾ ಬೇಕರಿ ಹಿಂಭಾಗ, ಕೊಂಡಜ್ಜಿ ರಸ್ತೆ, ವಿಜಯನಗರ ಬಡಾವಣೆ 5ನೇ ಕ್ರಾಸ್. (Studio) 1 ರೂಮ್ + ಕಿಚನ್, ಸೆಮಿ ಫರ್ನಿಶ್ಡ್, ಸ್ಟೂಡೆಂಟ್ಸ್ / ಬ್ಯಾಚಲರ್ ಗಳಿಗೆ ಸೂಕ್ತ. ಬಾಡಿಗೆಗೆ ಮಾತ್ರ
94492 22283

**ಮಳಿಗೆ ಬಾಡಿಗೆಗಿದೆ**
ಆಫೀಸ್ ಮಾಡಲು ಸೂಕ್ತವಾಗಿದೆ.
ಎವಿಕೆ ಕಾಲೇಜು ರಸ್ತೆ, Tennis
Court ಮುಂಭಾಗ, (ಟೆನ್ನಿಸ್
ಕೋರ್ಟ್)
99804 55055

**CCTV ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
Age : 20-25 Years
Address :
VAHIN GROUPS
3096, Bapuji high school road,
MCC `B' Block, Davanagere.
93805 83672

**ಮನೆ ಬಾಡಿಗೆಗೆ ಇದೆ**
1 ಬಿಹೆಚ್‌ಕೆ, 2ನೇ ಫ್ಲೋರ್, 4ನೇ ಮೇನ್, ನಿಟುವಳ್ಳಿ ಹೊಸ ಬಡಾವಣೆ, ಸೋಮೇಶ್ವರ ಸ್ಕೂಲ್, ಎಸ್‌ಬಿಐ ಹತ್ತಿರ ಮನೆ ಬಾಡಿಗೆಗೆ ಇದೆ. ಸಸ್ಯಹಾರಿಗಳಿಗೆ ಮಾತ್ರ.
94804 56842

**ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ**
ಟೆಲಿಕಾಲಿಂಗ್ ಮತ್ತು ಅಕೌಂಟೆಂಟ್
ಬೇಕಾಗಿದ್ದಾರೆ. ಸಂಪರ್ಕಿಸಿ :
72046 17344

**HOUSE TO LET**
3 BHK#3101/2, 9th main, 2nd cross, MCC "B" block, Davangere.
98443 52144
94810 32484

**Avoid Mosquiteos**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**ಮನೆ ಲೀಸ್‌ಗೆ ಬೇಕಾಗಿದೆ**
ದಾವಣಗೆರೆ ನಗರದಲ್ಲಿ ಸುಸಜ್ಜಿತವಾದ
1 ಅಥವಾ 2 BHK 6.5 ಲಕ್ಷ
(1 ಕುಟುಂಬ) ಇರುವ ಮನೆ ಲೀಸ್‌ಗೆ
ಬೇಕಾಗಿದೆ. (Any Area)
80504 02014

**ARTIFICIAL INTELIGENCE (AI)**
Age Group : 11 Years to 18 Yrs
BRUIT SOLUTIONS
Nijalingappa Badavane
96201 53806

**2 BHK ಮನೆ ಲೀಜ್‌ಗೆ ಇದೆ**
2ನೇ ಕ್ರಾಸ್, ರಾಷ್ಟ್ರೋತ್ಥಾನ
ಸ್ಕೂಲ್ ಹತ್ತಿರ,
ನಿಟುವಳ್ಳಿ-ದಾವಣಗೆರೆ.
99726 00306

**ಸೈಟ್ ಮಾರಾಟಕ್ಕಿದೆ**
ಕರ್ನಾಟಕ ಹೌಸಿಂಗ್ ಬೋರ್ಡ್, ತುಂಗಭದ್ರಾ ಬಡಾವಣೆ ಡಿ ಬ್ಲಾಕ್ ಪಾರ್ಕ್ ಹತ್ತಿರ (ಹೊಸ ಕೋರ್ಟ್ ಕಟ್ಟಡದ ಹತ್ತಿರ) 40' x 60' ( 12ಮೀ. x 18 ಮೀ.) ಉತ್ತರಾಭಿಮುಖ ಇರುವ ಖಾಲಿ ನಿವೇಶನ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ. ಬ್ರೋಕರ್‌ಗಳಿಗೆ ಅವಕಾಶವಿಲ್ಲ.
89710 60900

**ಶ್ರೀ ಸಿರಿ ಜ್ಯೋತಿ ಪಾರ್ಲರ್**
ಟೈಲರಿಂಗ್ & ಪಾರ್ಲರ್
ಹೇಳಿಕೊಡಲಾಗುತ್ತದೆ.
ನಿಮ್ಮ ಹಳ್ಳಿಗಳಿಗೆ ಬಂದು
ಹೇಳಿಕೊಡಲಾಗುತ್ತದೆ.
83100 24869

**KHB ಬಡಾವಣೆಯಲ್ಲಿ ಸೈಟ್‌ಗಳು ಮಾರಾಟಕ್ಕಿವೆ**
ಸೈಟ್ ನಂ. 1641-1642
ಎರಡು ಸೈಟ್‌ಗಳು ಮಾರಾಟಕ್ಕಿವೆ.
ಸಂಪರ್ಕಿಸಿ :
91485 32861, 94484 42861

**TUITIONS**
IGCSE, ICSE, CBSE and State Board from class 5th to 12th MCC 'A' blcok, Davangere.
98444 92888

**ಕುಕ್ ಬೇಕಾಗಿದ್ದಾರೆ ಬೆಂಗಳೂರಿನಲ್ಲಿ**
ವೆಜ್ & ನಾನ್ ವೆಜ್ ಗೊತ್ತಿರುವ 10 ವರ್ಷ ಅನುಭವವಿರುವವರು ಬೇಕಾಗಿದ್ದಾರೆ. ವಯಸ್ಸು 25 ರಿಂದ 35, ಸಂಬಳ 15,000 ಊಟ, ವಸತಿ ಉಚಿತ. ಸಂಪರ್ಕಿಸಿ :
97400 98047

**ಮನೆ ಮಾರಾಟಕ್ಕಿದೆ**
#1, 356/10'C' ಸವಣೂರ ಪ್ಲಾಜಾ ಹಿಂಭಾಗ, ಪಿ.ಬಿ. ರೋಡ್, ದಾವಣಗೆರೆ, 60+55/2x40=2300, ಅಡಿ ವಿಸ್ತೀರ್ಣದಲ್ಲಿ ಕಟ್ಟಿರುವ ಗ್ರೌಂಡ್ ಫ್ಲೋರ್ ಮನೆ ಮಾರಾಟಕ್ಕಿದೆ. 1 ಕೋಟಿ, 30 ಲಕ್ಷಕ್ಕೆ
9742261666, 94498 96502

**ಮನೆ ಬಾಡಿಗೆಗೆ ಇದೆ**
#3682/76 A "ಅಕ್ಷರ", 1ನೇ ಮೇನ್, 8ನೇ ಕ್ರಾಸ್, ತರಳಬಾಳು ಬಡಾವಣೆ, ವಾಣಿರೈಸ್ ಮಿಲ್ ಹಿಂಭಾಗ, 3 BHK ದಕ್ಷಿಣ ಬಾಗಿಲು, ಕಾರ್ಪೋರೇಷನ್/ ಬೋರ್‌ವೆಲ್, ಸೋಲಾರ್, ಬೈಕ್ ಪಾರ್ಕಿಂಗ್, ಕಮೋಡ್ ವ್ಯವಸ್ಥೆ ಇದೆ.
(ಸಸ್ಯಹಾರಿಗಳಿಗೆ ಮಾತ್ರ)
77608, 56699, 84317 25619

**ಅಡಿಕೆ ತೋಟ ಮಾರಾಟಕ್ಕಿದೆ**
ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕು ತೆಲಗಿ ಗ್ರಾಮ 3 ಎಕರೆ.
100% Legal Documents Upto date loan facility for purchase & Development of Agri Land.
ಮಧ್ಯವರ್ತಿಗಳಿಗೆ ಅವಕಾಶವಿಲ್ಲ
ಆರ್.ಜಿ. ರೇವಣಸಿದ್ದಪ್ಪ
97391 17958

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ**

**ಮಲ್ಲಿಕಾರ್ಜುನ ಪ್ಯಾಕೇಜ್ ಟೂರ್ಸ್**
ಬಟವಾಡಿ ವೃತ್ತ, ತುಮಕೂರು
ಫೋ : 84960 44942, 82774 09101
28-1-2025 ತಮಿಳುನಾಡು ಬಸ್ ಪ್ರವಾಸ: ರಾಮೇಶ್ವರ, ತಿರುಚೆಂದೂರ್, ಕನ್ಯಾಕುಮಾರಿ, ಶ್ರೀರಂಗಂ, ಮಧುರೈ, ತಂಜಾವೂರು, ಕುಂಭಕೋಣಂ, 6 ದಿನಗಳು
11-2-2025 ಮಧ್ಯಪ್ರದೇಶ, ಗುಜರಾತ್ ನಾಲ್ಕು ಜ್ಯೋತಿರ್ಲಿಂಗ: ಓಂಕಾರೇಶ್ವರ , ಮಹಾಕಾಳೇಶ್ವರ, ಸೋಮನಾಥ, ನಾಗೇಶ್ವರ, ಪಟೇಲ್ ಪ್ರತಿಮೆ, ನಿಷ್ಕಳಂಕ ಮಹಾದೇವ, ಪೋರ್ ಬಂದರ್, ದ್ವಾರಕಾ, ಬೇಟ್ ದ್ವಾರಕಾ, ಅಹಮದಾಬಾದ್, ಮಾತೃಗಯ, ಇತರೆ, 10 ದಿನಗಳು (ವಿಮಾನ ಪ್ರವಾಸ)
28-2-2025 ಜಾರ್ಖಂಡ್ ವೈದ್ಯನಾಥ, ಕಾಶಿ, ಅಯೋಧ್ಯೆ, ಪ್ರಯಾಗ್ ರಾಜ್, ಗಯಾ, ಬುದ್ದಗಯಾ 8 ದಿನ (ವಿಮಾನ ಪ್ರವಾಸ)
28-2-2025 ಕೇರಳ ಬಸ್ ಪ್ರವಾಸ: ವೈನಾಡು, ಅಲೆಪ್ಪಿ, ಕಾಲಾಡಿ, ಗುರುವಾಯೂರು, ತ್ರಿವೇಂಡ್ರಂ ಶ್ರೀ ಅನಂತ ಪದ್ಮನಾಭ, ಕೋವಲಂ ಬೀಚ್, ಕೊಲ್ಲಂ 5 ದಿನಗಳು
15-3-2025 ರಾಜಸ್ಥಾನ ವಿಮಾನ ಪ್ರವಾಸ: ಜೈಪುರ, ಪುಷ್ಕರ್, ಅಜ್ಮೀರ್, ಜೋದ್ ಪುರ, ಉದಯಪುರ, ನಾಥದ್ವಾರ, ಮೌಂಟ್ ಅಬು, ಜೈಸಲ್ಮೇರ್ 9 ದಿನಗಳು
ಎಲ್ಲಾ ಪ್ರವಾಸಕ್ಕೂ ಪ್ರಯಾಣ ವೆಚ್ಚ, ಏಸಿ ರೂಂ, ವಸತಿ, ಸಸ್ಯಹಾರ ತಿಂಡಿ, ಊಟ ಒಳಗೊಂಡಿದೆ.
ಮಲ್ಲಿಕಾರ್ಜುನ ಟೂರ್ಸ್, ತುಮಕೂರು
84960 44942, 82774 09101

**ಮನೆ ಬಾಡಿಗೆಗೆ ಇದೆ**
ಗ್ರೌಂಡ್ ಫ್ಲೋರ್, 2 BHK, ಪಶ್ಚಿಮ ದಿಕ್ಕು, ಬೋರ್/ಕಾರ್ಪೊರೇಷನ್ ನೀರಿನ ಸೌಲಭ್ಯವಿದೆ. #576, "ಸತ್ಯನಿವಾಸ", 1ನೇ ಕ್ರಾಸ್, 4ನೇ ಮೇನ್, ಎ ಬ್ಲಾಕ್, DCM ಟೌನ್ ಶಿಪ್ ಪ್ರಧಾನ ಮಂತ್ರಿ ಜನ ಔಷಧಾಲಯ ಹತ್ತಿರ, ದಾವಣಗೆರೆ. (ಸಸ್ಯಹಾರಿಗಳಿಗೆ ಮಾತ್ರ)
7019427951, 9341014488

**ನೇತ್ರ ದಾನ ಶ್ರೇಷ್ಠ ದಾನ**

**ಓಂ ವರಸಿದ್ದಿ ವಿನಾಯಕ**
SS ದಾವಣಗೆರೆ ಶೈಲಿಯಾ ಕ್ಲೌಡ್ ಕಿಚನ್ ಮನೆಯಿಂದಲೇ ನಾನ್‌ವೆಜ್ ಊಟ ತಯಾರಿಸಿ ಕೊಡುತ್ತೇವೆ
ಮತ್ತು ಮನೆಯಲ್ಲಿಯೇ ತಯಾರಿಸಿದ ಮಸಾಲಾ ಪೌಡರ್‌ಗಳು ಸಿಗುತ್ತವೆ.
91102 74329

**ಜಾಗ ಮಾರಾಟಕ್ಕಿದೆ**
ಅನೆಕಲ್ಲು (ತರಳಬಾಳು ನಗರ)
ಪ್ರೈಮರಿ ಸ್ಕೂಲ್ ಹಿಂಭಾಗ,
12 ಗುಂಟೆ ಜಮೀನು, 30 ಗುಂಟೆ
ಜಮೀನು ಮಾರಾಟಕ್ಕಿದೆ.
94489 23707
63622 09674

**ವಾಹ್ ಚಾಯ್ !! ರಿಚ್ ಚಾಯ್ !!**
SRK TEA
ಶ್ರೀ ರಾಮಕೃಷ್ಣ ಕಾಫಿ ಕಂಪನಿ
ಮಂಡಿಪೇಟೆ, ದಾವಣಗೆರೆ.
ಮೊಬೈಲ್ : 94487 27084

**ಸೊಳ್ಳೆ ಮೆಶ್ ಹಾಕಲಾಗುವುದು**
ನಮ್ಮಲ್ಲಿ ಎಲ್ಲಾ ತರಹದ ಸೋಫಾ, ಕುಶನ್, ಕಿಟಕಿಗೆ ಫೈಬರ್ ವೆಲ್ಕ್ರೊ ಮೆಶ್ & ಅಲುಮಿನಿಯಂ ಫ್ರೇಮ್ stainless steel ಸೊಳ್ಳೆಮೆಶ್ ಹಾಕಲಾಗುವುದು
Swapna cushion work
Maharaj pet DVG
98445 81966

**ಸೈಟು ಮಾರಾಟಕ್ಕಿದೆ**
ಭೂಮಿಕಾ ನಗರದಲ್ಲಿ
ದಕ್ಷಿಣಾಭಿಮುಖವಾಗಿರುವ
ಮತ್ತು ಉದ್ಯಾನವನ ಎದುರಿಗೆ
ಇರುವ 34 x73 ಸೈಟು
ಮಾರಾಟಕ್ಕಿದೆ. ಸಂಪರ್ಕಿಸಿ
94485 89727

**Receptionist wanted**
Qualification: Basic Degree
Fluent in Kannada, English & Hindi
Should be well versed in MS Office
Good written and verbal communication skills
88842 40410

**ಮಾರಾಟಕ್ಕಿದೆ**
ಸಿಮೆಂಟ್ ಇಟ್ಟಿಗೆ
ಮಿಷನ್ ಮಾರಾಟಕ್ಕಿದೆ.
94489 24273

**ಸೈಟ್, ಮನೆ, ಜಮೀನು ಮಾರಾಟಕ್ಕೆ & ಕೊಳ್ಳುವುದಕ್ಕೆ**
ಆಸಕ್ತರು ಸಂಪರ್ಕಿಸಿ : ಏಜೆಂಟ್
94487 13486
99866 77346

**ವೃದ್ಧಾಶ್ರಮ**
ಶ್ರೀ ಮಾತಾ ಟ್ರಸ್ಟ್, ಶಾಸ್ತ್ರಿಹಳ್ಳಿ
ತುಂಬಿಗೆರೆ ಪೋಸ್ಟ್, ದಾವಣಗೆರೆ ತಾ||, ಈ ಸಂಸ್ಥೆ ನಡೆಸುತ್ತಿರುವ ವೃದ್ಧಾಶ್ರಮವನ್ನು ಸೇರಲು ಬಯಸುವ 50 ವರ್ಷ ಮೇಲ್ಪಟ್ಟವರು ಸಂಪರ್ಕಿಸಿ :
99001 42052, 97319 93770

**ಮನೆ ಬಾಡಿಗೆಗೆ ಇದೆ**
1ನೇ ಮಹಡಿ 2 ಬೆಡ್ ರೂಂ ಮನೆ
ಚಿಕ್ಕಮ್ಮಣ್ಣಿ ದೇವರಾಜ್ ಅರಸು
ಬಡಾವಣೆ, ನಿಟ್ಟುವಳ್ಳಿ ಲಾಸ್ಟ್ ಬಸ್
ಸ್ಟಾಪ್, 3ನೇ ಮೇನ್, ದಾವಣಗೆರೆ.
94486 66687, 79754 44657

**ಮನೆ ಬಾಡಿಗೆಗೆ ಇದೆ**
ಸಸ್ಯೆಹಾರಿಗಳಿಗೆ ಮಾತ್ರ, #3682/76A 'ಅಕ್ಷರ' 1ನೇ ಮೇನ್, 8ನೇ ಕ್ರಾಸ್, ತರಳಬಾಳು ಬಡಾವಣೆ, ವಾಣಿ ರೈಸ್ ಮಿಲ್ ಹಿಂಭಾಗ, 3 BHK ದಕ್ಷಿಣ ಬಾಗಿಲು, ಕಾರ್ಪೊರೇಷನ್/ ಬೋರ್ ನೀರು, ಸೋಲಾರ್, ಬೈಕ್ ಪಾರ್ಕಿಂಗ್, ಕಮಾಡ್ ವ್ಯವಸ್ಥೆ ಇರುವ ಮನೆ ಬಾಡಿಗೆಗೆ ಇದೆ.
77608 56699, 84317 25619

**ಮನೆ ಮಾರಾಟಕ್ಕಿದೆ**
1BHK, 2nd Floor,
ಪೂರ್ವಮುಖ, ಬಾಲಾಜಿ ನಗರ,
ಕುಂದವಾಡ ರಸ್ತೆ, ಡಿ.ಸಿ. ಕಛೇರಿ ಹತ್ತಿರ,
ದಾವಣಗೆರೆ. (ಸಸ್ಯಹಾರಿಗಳಿಗೆ ಮಾತ್ರ)
94817 21551
97417 45102

**ಮಾರಾಟಕ್ಕಿವೆ**
ಹೆಚ್.ಎಫ್. ಹಸುಗಳು ಹೊತ್ತಿಗೆ
8 ರಿಂದ 10 ಲೀಟರ್ ಹಾಲು
ಕರೆಯುವ ಮತ್ತು ಗೀರ್
ಹೋರಿಗಳು ಮಾರಾಟಕ್ಕಿವೆ
98444 99944

**TUITIONS**
CBSE / ICSE Boards
Class 8th, 9th, 10th
CRASH COURSES FOR
NEET / CET / IIT - JEE
PUC I / PUC II / PCMB
NEET Long Term / Supplementary Exams
97398 65711, 94822 44114

**FOR HIRE**
Shop 20x33 and Two Rooms (with attached bathrooms) for office at prime location for hire at 1st floor, RMC Rice Market main road. Size : 10x22 and 10x33
90352 40400

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

# ದೇಗುಲಗಳ ಬದಲು ಶಿಕ್ಷಣ, ಆರೋಗ್ಯಕ್ಕೆ ಆದ್ಯತೆ ನೀಡುವಂತಾಗಬೇಕು



ಹೊನ್ನಾಳಿ, ಡಿ.28- ಗ್ರಾಮಗಳಲ್ಲಿ ದೇವಾಲಯಗಳ ನಿರ್ಮಿಸುವ ಬದಲಿಗೆ ಆಸ್ಪತ್ರೆಗಳು, ಶಾಲೆಗಳ ನಿರ್ಮಾಣ ಮಾಡಿ ಶಿಕ್ಷಣ, ಆರೋಗ್ಯಕ್ಕೆ ಹೆಚ್ಚು ಆದ್ಯತೆ ನೀಡುವ ಮೂಲಕ ಇಡೀ ಸಮಾಜದ ಅಭಿವೃದ್ಧಿಗೆ ಎಲ್ಲಾ ವರ್ಗದ ಜನ ಮುಂದಾಗಬೇಕು ಎಂದು ಹೊಸದುರ್ಗ ಕನಕ ಗುರುಪೀಠದ ಶ್ರೀ ಈಶ್ವರಾನಂದಪುರಿ ಸ್ವಾಮೀಜಿ ಹೇಳಿದರು.

ತಾಲೂಕಿನ ಕುಳಗಟ್ಟೆ ಗ್ರಾಮದಲ್ಲಿ ಶನಿವಾರ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕಂಚಿನ ಪ್ರತಿಮೆ ಅನಾವರಣ ಹಾಗೂ ಕನಕದಾಸರ 537ನೇ ಜಯಂತ್ಯೋತ್ಸವ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಕನಕದಾಸರು ಭಕ್ತಿಯ ಸಂಕೇತವಾದರೆ, ಸಂಗೊಳ್ಳಿ ರಾಯಣ್ಣ ಹೋರಾಟದ ಬದುಕಿಗೆ ಸಂಕೇತವಾಗಿ ಹೊರಹೊಮ್ಮಿದ್ದಾರೆ. ದೇಶದಲ್ಲಿ ಇತಿಹಾಸದ ಪ್ರಥಮವಾಗಿ ಬ್ರಿಟಿಷರ ವಿರುದ್ಧ ಹೋರಾಡಿ ಹುತಾತ್ಮನಾಗಿದ್ದು ಸಂಗೊಳ್ಳಿ ರಾಯಣ್ಣ. ಆದರೆ ಇವರ ಬದಲು ಮಂಗಲ ಪಾಂಡೆ ಅವರ ಹೆಸರು ಪ್ರಥಮ ಹೋರಾಟಗಾರ ಎಂದು ಇತಿಹಾಸದಲ್ಲಿ ಉಲ್ಲೇಖವಾಗಿದೆ ಎಂದು ಹೇಳಿದರು.

ಕನಕದಾಸರು ಜನರಿಗೆ ಅರ್ಥವಾಗದ ಸಂಸ್ಕೃತದಲ್ಲಿ ಸಾಹಿತ್ಯ ರಚಿಸದೇ ಜನಸಾಮಾನ್ಯರಿಗೂ ಅರ್ಥವಾಗುವ ಸರಳ ಕನ್ನಡದಲ್ಲಿ ಸಾಹಿತ್ಯ ರಚಿಸುವ ಮೂಲಕ ಸಮಾಜದ ಎಲ್ಲಾ ವರ್ಗಗಳ ಜನ ಇವರ ಸಾಹಿತ್ಯವನ್ನು ಓದಿ ಸಂಸ್ಕಾರವಂತರಾಗುವಂತೆ ಮಾಡಿದ್ದಾರೆ. ಕನಕದಾಸರು ತಮ್ಮ ಸಾಹಿತ್ಯದ ಮೂಲಕ ಜಾತಿ, ಧರ್ಮ ವ್ಯವಸ್ಥೆಗಳ ಮಧ್ಯದಲ್ಲಿನ ಮೇಲು-ಕೀಳು ತಾರತಮ್ಯಗಳ ಬಗ್ಗೆ ಅರಿವು ಮೂಡಿಸುವ ಕೆಲಸವನ್ನು ಮಾಡಿದ್ದಾರೆ.

ಜಾತಿ, ಧರ್ಮಗಳಿಂದ ಯಾರೂ ದೊಡ್ಡವರಾಗುವುದಿಲ್ಲ. ಬದಲಿಗೆ ಅವರು ಜೀವನದಲ್ಲಿ ಅಳವಡಿಸಿಕೊಳ್ಳುವ ಸಿದ್ದಾಂತಗಳ ಮೂಲಕ ಉತ್ತಮರಾಗುತ್ತಾರೆ. ಜೀವನನದಲ್ಲಿ ಭಕ್ತಿ ಮತ್ತು ಹೋರಾಟಗಳು ಮುಖ್ಯವಾಗುತ್ತವೆ. ಇವುಗಳಿಂದಲೇ ಕುರುಬ ಸಮಾಜ ದೇಶದ ಇತಿಹಾಸದಲ್ಲಿ ಆಜರಾಮರವಾಗಿದೆ ಎಂದು ಹೇಳಿದರು. ದೇಶದ ಸ್ವಾತಂತ್ರ್ಯ ಕೂಡ ಕೇವಲ ಒಂದು ಜಾತಿ ಧರ್ಮದ ಜನರಿಂದ ದೊರೆತ್ತಿದ್ದಲ್ಲ. ಬದಲಿಗೆ ಎಲ್ಲಾ ಜಾತಿ ಧರ್ಮಗಳ ಹೋರಾಟ ಗಾರರ ಒಗ್ಗಟ್ಟಿನ ಫಲವಾಗಿ ಇಂದು ದೇಶ ಸ್ವಾತಂತ್ರ್ಯ ಕಂಡಿದೆ ಎಂದು ಹೇಳಿದರು.

> **ಹಿಂದುಳಿದ ವರ್ಗದ ನಾಯಕ ಸಿದ್ದರಾಮಯ್ಯ 2 ಅವಧಿ ಸಿ.ಎಂ. ಅಗಿ ದಾಖಲೆಯಾಗುತ್ತದೆ. ಎನ್ನುವ ಕಾರಣಕ್ಕೆ ಅವರ ಮೇಲೆ ಭ್ರಷ್ಠಾಚಾರಗಳ ಆರೋಪ ಮಾಡುತ್ತಿರುವ ಮುಂದುವರೆದ ಸಮಾಜಗಳ ರಾಜಕಾರಣಿಗಳು ಸಾವಿರಾರು ಎಕರೆ ಆಸ್ತಿ ಮಾಡಿರುವ ಇವರು ಎಷ್ಟು ಎಕರೆ ಭೂಮಿಯನ್ನು ಸರ್ಕಾರಕ್ಕೆ ಹಿಂದಿರುಗಿಸಿದ್ದಾರೆ ಎಂದು ಹೇಳಲಿ.**
> **- ಕನಕ ಗುರುಪೀಠದ ಶ್ರೀ ಈಶ್ವರಾನಂದಪುರಿ ಸ್ವಾಮಿಜಿ**

ಹಿಂದುಳಿದ ಪ್ರದೇಶಗಳಲ್ಲಿ ಮತಾಂತರವಾಗುತ್ತಿದೆ. ಎನ್ನುವ ಕಾರಣದಿಂದ ತಿರುಪತಿ ದೇವಸ್ಥಾನ ಸಮಿತಿಯವರು ಹಿಂದುಳಿದ ಪ್ರದೇಶಗಳಲ್ಲಿ ದೇವಾಲಯಗಳನ್ನು ನಿರ್ಮಿಸಲು ಹಣ ನೀಡುವುದಾಗಿ ತಿಳಿಸಿದ್ದು ,ಇದನ್ನು ಅಲ್ಲಗಳೆದ ಸ್ವಾಮೀಜಿ ಅವರು, ಈ ಬಗ್ಗೆ ತಾವು ಟಿ.ಟಿ.ಡಿ.ಗೆ ಪತ್ರ ಬರೆದು ದೇವಾಸ್ಥಾನಗಳ ಬದಲಿಗೆ ಶಾಲೆ ಮತ್ತು ಆಸ್ಪತ್ರೆ ನಿರ್ಮಿಸಲು ತಿಳಿಸಿರುವುದಾಗಿ ಹೇಳಿದರು.

ರಾಂಪುರ ಮಠದ ಶಿವಕುಮಾರ ಹಾಲಸ್ವಾಮಿ ಅವರು ಮಾತನಾಡಿ, ಕುಲದ ಗಟ್ಟಿ ಎನ್ನುವ ಪದದಿಂದ ಕುಳಗಟ್ಟೆ ಎಂದು ಈ ಗ್ರಾಮಕ್ಕೆ ಹೆಸರು ಬಂದಿದೆ.

ಈ ಗ್ರಾಮದ ಜನ ಏನೆ ಮಾಡಿದರೂ ಒಗ್ಗಟ್ಟಾಗಿ, ಅಚ್ಚುಕಟ್ಟಾಗಿ ಮಾಡುವ ಸಾಮರ್ಥ್ಯ ಹೊಂದಿದವರಾಗಿದ್ದಾರೆ ಎಂದರು.

ಶಾಸಕ ಡಿ.ಜಿ.ಶಾಂತನಗೌಡ, ಭಕ್ತನ ಭಕ್ತಿ ಮೆಚ್ಚಿ ಹಿಂದಕ್ಕೆ ತಿರುಗಿ ದರ್ಶನ ನೀಡಿದ ಕನಕ ಕಿಂಡಿ ಐತಿಹಾಸಿಕ ಪ್ರಸಂಗ ಜಗತ್ತಿನ ಯಾವ ದೇಶದಲ್ಲೂ ಇಲ್ಲ, ಬಸವ, ಅಂಬೇಡ್ಕರ್, ಕನಕದಾಸರಂತಹ ಮಹಾತ್ಮರ ಕೊಡುಗೆಯಿಂದಾಗಿ ಧಾರ್ಮಿಕ, ಹಾಗೂ ಐತಿಹಾಸಿಕ ಕ್ಷೇತ್ರದಲ್ಲಿ ದೇಶ ತನ್ನದೇ ಆದ ಖ್ಯಾತಿ ಹೊಂದಿದೆ ಎಂದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಚ್.ಬಿ. ಮಂಜಪ್ಪ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಮುಖಂಡ ರಾದ ಎಚ್.ಎ. ಉಮಾಪತಿ, ಕುರುಬ ಸಮಾಜದ ಅಧ್ಯಕ್ಷ ಎಂ.ಸಿ.ಮೋಹನ, ಡಾ.ಈಶ್ವರ ನಾಯ್ಕ, ಕುಳಗಟ್ಟೆ ರಂಗಪ್ಪ, ಎ.ಆರ್. ಚಂದ್ರಶೇಖರ, ಶಿಲ್ಪಿ ನಂದಕುಮಾರ ಚಂದರಗಿ, ಎಂ.ಪಿ. ರಾಜು, ಎಚ್.ಎ. ಗದ್ದಿಗೇಶ್ ಮುಂತಾದವರು ಮಾತನಾಡಿದರು.

ನಿವೃತ್ತ ಆಧಿಕಾರಿ ಬಿ.ರಾಮಪ್ಪ ಅಧ್ಯಕ್ಷತೆ ವಹಿಸಿದ್ದರು. ಎಂ.ಆರ್. ಮಹೇಶ್, ಕೆ.ವಿ. ಚನ್ನಪ್ಪ, ಎಚ್. ಮಂಜಪ್ಪ. ಹಿರಿಯ ಮುಖಂಡ ಎಚ್.ಬಿ.ಗಿಡ್ಡಪ್ಪ, ಸ್ಥಳ ದಾನಿ, ಕರೇಕಲ್ಲಾರ ಹಾಲೇಶಪ್ಪ, ಗ್ರಾ.ಪಂ. ಅಧ್ಯಕ್ಷೆ ಗೀತಮ್ಮ ಮಲ್ಲೇಶಪ್ಪ, ಉಪಾಧ್ಯಕ್ಷರು, ಸದಸ್ಯರುಗಳು ಉತ್ಸವ ಸಮಿತಿ ಪದಾಧಿಕಾರಿಗಳಾದ ರವಿ, ನಾಗರಾಜ್, ಸಿದ್ದೇಶ್ ಮುಂತಾದವರು, ಇದ್ದರು.

## ಕೋಡಿ ಕ್ಯಾಂಪ್ ಕೊಟ್ಟೂರೇಶ್ವರ ಸ್ವಾಮಿ ಮಠದಲ್ಲಿ ನಾಳೆ ಎಳ್ಳು ಅಮವಾಸ್ಯೆ



ದಾವಣಗೆರೆ, ಡಿ. 28- ದಾವಣಗೆರೆಯ ಕೊಟ್ಟೂರು ಶ್ರೀ ಗುರುಬಸವರಾಜೇಂದ್ರ ಸ್ವಾಮಿ ಪಾದಯಾತ್ರೆ ಟ್ರಸ್ಟ್ ಇವರಿಂದ ಮಾಗಾನಹಳ್ಳಿ ಕೋಡಿ ಕ್ಯಾಂಪ್ ಬಳಿ ಇರುವ ಶ್ರೀ ಕೊಟ್ಟೂರೇಶ್ವರ ಮಹಾಸ್ವಾಮಿ ಪಾದಗಳಿಗೆ ಎಳ್ಳು ಅಮಾವಾಸ್ಯೆ ಪ್ರಯುಕ್ತ ನಾಡಿದ್ದು ದಿನಾಂಕ 30ರ ಸೋಮವಾರ ಬೆಳಿಗ್ಗೆ 6.30ಕ್ಕೆ ಅಭಿಷೇಕ - ಪೂಜೆ ನಡೆಯಲಿದೆ. ನಂತರ ಬೆಳಿಗ್ಗೆ 8 ರಿಂದ ಪ್ರಸಾದ ದಾಸೋಹ ಏರ್ಪಡಿಸಲಾಗಿದೆ. ಪಾದಯಾತ್ರೆ ಟ್ರಸ್ಟ್ ಇವರು ಸೇವಾಕರ್ತರಾಗಿದ್ದಾರೆ. ವಿವರಕ್ಕೆ ಕಣಕುಪ್ಪಿ ಮುರುಗೇಶಪ್ಪ (96118 89151), ಟಿ.ಜಿ. ಬಕ್ಕೇಶಪ್ಪ (91089 88898), ಬಿ. ಚಿದಾನಂದಪ್ಪ (98455 28449), ಮಲ್ಲಾಬಾದಿ ಗುರುಬಸವರಾಜ್ (79757 97079) ತಿಳಿಸಿದ್ದಾರೆ. ದಾಸೋಹ ಮನೆ ಮತ್ತು ಸಭಾಂಗಣ ಕಟ್ಟಡವು ಪ್ರಗತಿ ಹಂತದಲ್ಲಿದೆ. ಭಕ್ತಾದಿಗಳು ದೇಣಿಗೆ ಸಲ್ಲಿಸಬಹುದು.

## ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನಾಳೆ ಅಮಾವಾಸ್ಯೆ ಪೂಜೆ



ದಾವಣಗೆರೆ, ಡಿ. 28- ನಗರದ ಡಿ. ದೇವರಾಜ ಅರಸು ಬಡಾವಣೆಯಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನಾಡಿದ್ದು 30ರ ಸೋಮವಾರ ಎಳ್ಳ ಅಮಾವಾಸ್ಯೆ ಪೂಜಾ ಕಾರ್ಯ ಕ್ರಮಗಳು ನಡೆಯಲಿವೆ. ಬೆಳಿಗ್ಗೆ ಶ್ರೀ ನಾಗಲಿಂಗೇಶ್ವರ ಸ್ವಾಮಿಗೆ ರುದ್ರಾಭಿಷೇಕ, ಮೃತ್ಯುಂಜಯ ಹೋಮ, ಪ್ರಧಾನ ದೇವತೆ ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಂಗಳಾರತಿ, ಪ್ರಸಾದ ವಿನಿಯೋಗ ನಡೆಯುವುದು ಎಂದು ದೇವಸ್ಥಾನ ಸಮಿತಿ ಗೌರವ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ. ದೇವರಾಜ ಅರಸು ಬಡಾವಣೆ ಎ ಬ್ಲಾಕ್‌ನ ಶ್ರೀ ವಿನಾಯಕ ಸೇವಾ ಸಮಿತಿಯವರು ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಪ್ರಕಾಶ್ ಪಾಟೀಲ್ ವಿವರಿಸಿದ್ದಾರೆ.

# ನಗರದಲ್ಲಿ ಇಂದು ಎಸ್‌ಎಸ್‌ಕೆ ಸಮಾಜದ ರಾಜ್ಯಮಟ್ಟದ ಸಿಎಂಸಿ ಸಭೆ

ದಾವಣಗೆರೆ, ಡಿ. 28 - ಕರ್ನಾಟಕ ರಾಜ್ಯ ಎಸ್‌ಎಸ್‌ಕೆ ಸಮಾಜದ ವತಿಯಿಂದ ನಾಳೆ ದಿನಾಂಕ 29ರ ಭಾನುವಾರ ಬೆಳಿಗ್ಗೆ 9 ಗಂಟೆಗೆ ನಗರದ ಕುಂದುವಾಡ ರಸ್ತೆಯಲ್ಲಿನ ಬಂಟರ ಭವನದಲ್ಲಿ ರಾಜ್ಯಮಟ್ಟದ 2 ನೇ ಸಿಎಂಸಿ ಸಭೆ ಮತ್ತು ನೂತನ ರಾಜ್ಯಾಧ್ಯಕ್ಷರಾಗಿ ಆಯ್ಕೆಯಾಗಿರುವ ಡಾ. ಶಶಿಕುಮಾರ್ ಮೆಹರ್ವಾಡೆ ಹಾಗೂ ಇತರೆ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಸಹ ನಡೆಯಲಿದೆ ಎಂದು ಸಮಾಜದ ಜಿಲ್ಲಾಧ್ಯಕ್ಷ ಮಲ್ಲಾರಸಾ ಆರ್. ಕಾಟವೆ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಎಸ್‌ಎಸ್‌ಕೆ ಸಮಾಜದ ಗೌರವಾಧ್ಯಕ್ಷ ನಾರಾಯಣ ಸಾ ಭಾಂಡಗೆ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ. ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮಾಜಿ ಸಿಎಂ ಜಗದೀಶ ಶೆಟ್ಟರ್, ಎಬಿಎಸ್‌ಎಸ್‌ಕೆ ಸಮಾಜದ ಛೇರ್ಮನ್ ಸ್ವಾಮೀ ಸಾ ಖೋಡೆ ಆಗಮಿಸಲಿದ್ದಾರೆಂದರು.

ಮುಖ್ಯ ಅತಿಥಿಗಳಾಗಿ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ಶಾಸಕರಾದ ಡಾ. ಶಾಮನೂರು ಶಿವಶಂಕರಪ್ಪ, ಅರವಿಂದ ಬೆಲ್ಲದ್, ಬಿ.ಪಿ. ಹರೀಶ್, ಮಹೇಶ್ ತೆಂಗಿನಕಾಯಿ, ಸಚಿವ ಸಂತೋಷ್ ಲಾಡ್, ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ, ಮಾಜಿ ಸಚಿವ ಎಸ್.ಎ. ರವೀಂದ್ರನಾಥ್, ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್, ಪ್ರಸಾದ ಅಬ್ಬಯ್ಯ ಮತ್ತಿತರರು ಭಾಗವಹಿಸಲಿದ್ದಾರೆಂದು ಹೇಳಿದರು.

ಸೋಮವಂಶೀಯ ಸಹಸ್ರಾರ್ಜುನ ಕ್ಷತ್ರೀಯ ಸಮಾಜ ( ಎಸ್‌ಎಸ್‌ಕೆ)ರಾಜ್ಯದಲ್ಲಿ ಸುಮಾರು ಹನ್ನೆರಡು ಲಕ್ಷ ಜನಸಂಖ್ಯೆ ಇರುವ ಅಲ್ಪಸಂಖ್ಯಾತ ಸಮಾಜವಾಗಿದ್ದು, ಇದು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದ ಸಮಾಜವಾಗಿದೆ. 29 ರಂದು ನಡೆಯುವ ಸಿಎಂಸಿ ಸಭೆಯಲ್ಲಿ ಎಸ್‌ಎಸ್‌ಕೆ ಸಮಾಜದ ಸರ್ವಾಂಗೀಣ ಅಭ್ಯುದಯಕ್ಕೆ ಹಾಗೂ ನಿಗಮ ಮಂಡಳಿ ರಚನೆ ಕುರಿತು ವಿಸ್ತೃತ ಚರ್ಚೆ ನಡೆಯಲಿದೆ ಎಂದರು.



**ಎಸ್‌ಎಸ್‌ಕೆ ಸಮಾಜದ ನೂತನ ರಾಜ್ಯಾಧ್ಯಕ್ಷರಾಗಿ ಡಾ. ಶಶಿಕುಮಾರ್ ಮೆಹರ್ವಾಡೆ ಆಯ್ಕೆ**

ನಾಡಿನ ಐವತ್ತುಕ್ಕೂ ಹೆಚ್ಚು ನಗರಗಳ ಎಸ್‌ಎಸ್‌ಕೆ ಸಮಾಜ ವಿವಿದ ಸಂಘ-ಸಂಸ್ಥೆಯ ಅಧ್ಯಕ್ಷರು, ಕಾರ್ಯದರ್ಶಿಗಳು ಭಾಗವಹಿಸಿ ಸಮಾಜದ ಸಾಮಾಜಿಕ, ರಾಜಕೀಯ, ಆರ್ಥಿಕ ಮುಂದಿನ ಬೆಳವಣಿಗೆ ಬಗ್ಗೆ, ಎಸ್‌ಎಸ್‌ಕೆ ನಿಗಮ ಮಂಡಳಿ ಹಾಗೂ ಎಸ್ಟಿಗೆ ಸೇರ್ಪಡೆ ಹೋರಾಟ ಬಗ್ಗೆ,ಎಸ್‌ಎಸ್‌ಕೆ ಸಮಾಜ ಶಿಕ್ಷಣ ಕ್ಷೇತ್ರದಲ್ಲಿ ಅಭಿವೃದ್ಧಿ ಸಾಧಿಸುವ ಬಗ್ಗೆ ಹಾಗೂ ಧಾರ್ಮಿಕ, ಆಧ್ಯಾತ್ಮಿಕ ಕ್ಷೇತ್ರದಲ್ಲಿ ಕ್ಷೇತ್ರದಲ್ಲಿ ಎಸ್‌ಎಸ್‌ಕೆ ಸಮಾ ಜದ ಕೊಡುಗೆಏನು ಎಂಬುದರ ಕುರಿತು ಮೌಲ್ಯಾಧಾರಿತ ಅಭಿಪ್ರಯಾಗಳನ್ನು ಹಂಚಿಕೊಳ್ಳಲಿದ್ದಾರೆಂದರು.

ಪತ್ರಿಕಾಗೋಷ್ಠಿಯಲ್ಲಿ ಸಮಾಜದ ಮಹೇಶ್ ಸೋಳಂಕಿ, ರಾಜು ಎಲ್.ಬದ್ದಿ, ಅಶೋಕ ಬಿ. ರಾಯಭಾಗಿ, ವಿವೇಕ ಬದ್ದಿ ಇದ್ದರು.

# ಬಿಜೆಪಿ ಹಾಳುಮಾಡುವಲ್ಲಿ ಕೆಲ ಮುಖಂಡರ ಶಕ್ತಿ ಪ್ರದರ್ಶನ

ದಾವಣಗೆರೆ, ಡಿ. 28- ಕಾಂಗ್ರೆಸ್- ಬಿಜೆಪಿ ಒಳ ಒಪ್ಪಂದ ಮಾಡಿಕೊಂಡಿದ್ದಾರೆಂಬ ಆರೋಪದ ಹಿನ್ನೆಲೆಯಲ್ಲಿ ಬಹಿರಂಗಪಡಿಸು ವಂತೆ ಶಾಸಕ ಬಸವರಾಜ ಶಿವಗಂಗಾ ಅವರನ್ನು ಬಿಜೆಪಿ ನಿಕಟಪೂರ್ವ ಜಿಲ್ಲಾಧ್ಯಕ್ಷ ಯಶವಂತ ರಾವ್ ಜಾಧವ್ ಅವರು ಒತ್ತಾಯಿಸಿದ್ದರು. ಆದರೆ ಕೆಲವು ಬಿಜೆಪಿ ಮುಖಂಡರು ಕುಂಬಳ ಕಾಯಿ ಕಳ್ಳ ಅಂದ್ರೆ, ಹೆಗಲ ಮುಟ್ಟಿ ನೋಡಿ ಕೊಂಡ್ರಂತೆ ಎನ್ನುವಂತೆ ಇದ್ದು ವಿರೋಧ ಮಾಡುವುದು ಏಕೆ ಎಂಬುದು ಗೊತ್ತಾಗುತ್ತಿಲ್ಲ. ಬಿಜೆಪಿ ಮುಖಂಡರೂ, ವಕೀಲರಾದ ಮಂಜಾನಾಯ್ಕ ಪ್ರಶ್ನಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿಯ ಕೆಲವು ನಾಯಕರು ಪತ್ರಿಕಗೋಷ್ಠಿ ನಡೆಸಿ, ಯಶವಂತರಾವ್ ಜಾಧವ್ ಕಳೆದ ವಿಧಾನಸಭಾ ಚುನಾವಣೆ ಯಲ್ಲಿ ಯಾರೊಂದಿಗೆ ಒಳ ಒಪ್ಪಂದ ಮಾಡಿಕೊಂಡಿದ್ದರು ಎಂಬುದನ್ನು ಬಹಿರಂಗ ಪಡಿಸಲಿ ಎಂದು ಸವಾಲು ಹಾಕಿದ್ದಾರೆ.

ಯಶವಂತರಾವ್ ಜಾಧವ್ ಅವರ ರಾಜಕೀಯ ಜೀವನದ ಇತಿಹಾಸದಲ್ಲೇ ಕಾಂಗ್ರೆಸ್ ಪಕ್ಷದವರ ಮನೆ ಬಾಗಿಲು ಯಾವ ದಿಕ್ಕಿಗೆ ಇದೆ ಎಂದು ಇದುವರೆಗೂ ನೋಡಿಲ್ಲ. ಕಾಂಗ್ರೆಸ್ ಶಾಸಕರು, ಸಚಿವರ ಬಳಿ ಅವರು ಯಾವುದೇ ಲೇಔಟ್ ಅಪ್ರೂವಲ್ ಮಾಡಿಕೊಡಿ ಎಂದು ಅಂಗಲಾಚಿಲ್ಲ ಎಂದು ಹೇಳಿದರು.

ರೇಣುಕಾಚಾರ್ಯ ಅವರು ಬಿಜೆಪಿ ಹಾಳು ಮಾಡುವುದರಲ್ಲಿ ಸಹ ತಮ್ಮ ಶಕ್ತಿ ಪ್ರದರ್ಶನ ತೋರುತ್ತಿದ್ದಾರೆ. ಇದು ಕರ್ನಾಟಕದ ಜನತೆಗೆ ಮತ್ತು ದಾವಣಗೆರೆ ಜನತೆಗೆ ಸ್ಪಷ್ಟವಾಗಿ ಗೊತ್ತಾಗುತ್ತದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಮುಖಂಡರಾದ ಬಿ. ಪುಲಾಯ, ದುರುಗೇಶ್, ಸಂತೋಷ್ ಕುಮಾರ್, ಟಿಂಕರ್ ಮಂಜಣ್ಣ, ತರಕಾರಿ ಶಿವು ಮತ್ತಿತರರಿದ್ದರು.

# ವಿನಾಕಾರಣ ಆರೋಪ ಮಾಡುವುದನ್ನು ನಿಲ್ಲಿಸಿ

ದಾವಣಗೆರೆ, ಡಿ. 28 - ಜಿಲ್ಲಾ ಸಚಿವರು ಬಿಜೆಪಿಯವರ ಜೊತೆಗೆ ಒಳ ಒಪ್ಪಂದ ಮಾಡಿಕೊಂಡಿದ್ದರೆಂದು ಶಾಸಕ ಬಸವರಾಜ ಶಿವಗಂಗಾ ಹೇಳಿಕೆ ನೀಡಿದ್ದಾರೆ. ಇದಕ್ಕೆ ಪ್ರತಿಯಾಗಿ ಯಶವಂತರಾವ್ ಜಾಧವ್ ಯಾರೊಂದಿಗೆ ಒಳ ಒಪ್ಪಂದ ಮಾಡಿಕೊಂಡಿ ದ್ದಾರೆಂಬ ಬಗ್ಗೆ ಬಹಿರಂಗಪಡಿಸುವಂತೆ ಕೇಳಿದ್ದಾರೆ. ಕಳೆದ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಯಾರೊಂದಿಗೆ ಒಳ ಒಪ್ಪಂದ ಮಾಡಿಕೊಂಡಿದ್ದರು ಎಂಬುದನ್ನು ಬಹಿರಂಗ ಪಡಿಸಬೇಕೆಂದು ಬಿಜೆಪಿ ಯುವ ಮುಖಂಡ ರಾಜು ವೀರಣ್ಣ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಾನಗರ ಪಾಲಿಕೆ ಮೇಯರ್ ಚುನಾವಣೆ ಸಂದರ್ಭದಲ್ಲಿ ಅವರ ಪುತ್ರರನ್ನು ವಿದೇಶ ಪ್ರವಾಸಕ್ಕೆ ಯಾವ ಉದ್ದೇಶದಿಂದ ಕಳಿಸಿದ್ದರು. ಆಗ ಅವರು ಯಾರೊಟ್ಟಿಗೆ ಒಳ ಒಪ್ಪಂದ ಮಾಡಿಕೊಂಡು ಕಳುಹಿಸಿದ್ದರು ಅದನ್ನು ಬಹಿರಂಗಪಡಿಸಬೇಕೆಂದು ಆಗ್ರಹಿಸಿದರು.

ದಾವಣಗೆರ ದಕ್ಷಿಣ ವಿಧಾನಸಭಾ ಕ್ಷೇತ್ರದಿಂದ ನಾಲ್ಕು ಬಾರಿ ಚುನಾವಣೆಗೆ ಸ್ಪರ್ಧಿಸಿದ್ದು, ಬಿಜೆಪಿ ಜಿಲ್ಲಾಧ್ಯಕ್ಷರಾಗಿದ್ದೀರಿ. ದೂಡ ಅಧ್ಯಕ್ಷರಾಗಿದ್ದೀರಿ. ನಗರಸಭೆ ಅಧ್ಯಕ್ಷರಾಗಿ ಕೂಡ. ಇದಕ್ಕೆ ಬಿಜೆಪಿ ಜಿಲ್ಲೆಯ ಎಲ್ಲಾ ನಾಯಕರು ಕಾರಣ.ಇನ್ನೂ ನಿಮಗೆ ವಯಸ್ಸಾಗಿದ್ದು, ರಾಜಕೀಯ ನಿವೃತ್ತಿ ಪಡೆದು ಯುವಕರಿಗೆ ಮಾರ್ಗದರ್ಶನ ಮಾಡಿ. ಅದನ್ನು ಬಿಟ್ಟು ಇಲ್ಲಸಲ್ಲದ ಆರೋಪ ಮಾಡುವುದನ್ನು ಬಿಡಿ ಎಂದು ಹೇಳಿದರು.

ಮಾಜಿ ಸಚಿವ ರೇಣುಕಾಚಾರ್ಯ ಅವರ ಬಗ್ಗೆ ಮಾತನಾಡುವ ನಿಮಗೆ ಕಳೆದ ಕೆಲ ದಿನಗಳ ಹಿಂದೆ ದಾವಣಗೆರೆಯ ಸಾಯಿ ಇಂಟರ್ ನ್ಯಾಷನಲ್ ಹೋಟೆಲ್ ನಲ್ಲಿ ನಡೆದ ಸಭೆಯಲ್ಲಿ ಅವರ ಸಂಘಟನೆ ತಾಕತ್ತು ಏನು ಎಂದು ತೋರಿಸಿದ್ದಾರೆ ಎಂದು ಕುಟುಕಿದರು.

ಪತ್ರಿಕಾಗೋಷ್ಠಿಯಲ್ಲಿ ಪ್ರವೀಣ್ ರಾವ್ ಜಾಧವ್, ಪಂಜು ಪೈಲ್ವಾನ್, ಸುಮಂತ್, ಮಂಜುನಾಥ್, ವೆಂಕಟೇಶ್, ಧರ್ಮರಾಜ್, ಗಿರೀಶ್ ಇದ್ದರು.

## ನೆಟ್‌ಬಾಲ್ ತಂಡಕ್ಕೆ ಆಯ್ಕೆ





ದಾವಣಗೆರೆ, ಡಿ. 28- ದಾವಣಗೆರೆ ಜಿಲ್ಲಾ ನೆಟ್ ಬಾಲ್ ಸಂಸ್ಥೆ ಆಟಗಾರರು ರಾಷ್ಟ್ರಮಟ್ಟ ನೆಟ್ ಬಾಲ್ ತಂಡಕ್ಕೆ ಆಯ್ಕೆಯಾಗಿದ್ದಾರೆ. ಇಂದಿನಿಂದ 31 ರವರೆಗೆ 30ನೇ ಸಬ್ ಜೂನಿಯರ್ ನೆಟ್ ಬಾಲ್ ಚಾಂಪಿಯನ್‌ಶಿಪ್ ಚೆನ್ನೈ, ತಮಿಳು ನಾಡಿನಲ್ಲಿ ನಡೆಯಲಿದ್ದು, ದಾವಣಗೆರೆ ಜಿಲ್ಲಾ ನೆಟ್ ಬಾಲ್ ಸಂಸ್ಥೆಯಿಂದ ಬಾಲಕಿಯರ ತಂಡಕ್ಕೆ ವಿ.ಹೆಚ್. ತನ್ವಿ (ಆರ್. ವೀರೇಶ್, ಜ್ಯೋತಿ ಪುತ್ರಿ) ಮತ್ತು ಬಾಲಕರ ತಂಡಕ್ಕೆ ಎಸ್. ಗುಫ್ರಾನ್ ( ಶಫಿ ಎಂ.ಕೆ. ನಸ್ರೀನ್ ತಾಜ್ ಎಂ.ಬಿ. ಪುತ್ರ) ಆಯ್ಕೆಯಾಗಿದ್ದಾರೆ.

## ನಗರದ ಗುಡ್ಡಾಪುರದ ದಾನಮ್ಮ ದೇವಸ್ಥಾನದಲ್ಲಿ ನಾಳೆ ಎಳ್ಳ ಅಮವಾಸ್ಯೆ



ದಾವಣಗೆರೆ, ಡಿ. 28- ದೊಡ್ಡಪೇಟೆಯ ಶ್ರೀ ಬಸವೇಶ್ವರ ಮತ್ತು ಶ್ರೀ ಗುಡ್ಡಾಪುರದ ದಾನಮ್ಮ ದೇವಿ ದೇವಸ್ಥಾನದಲ್ಲಿ ಎಳ್ಳ ಅಮಾವಾಸ್ಯೆ ಪ್ರಯುಕ್ತ ನಾಡಿದ್ದು ದಿನಾಂಕ 30ರ ಬೆಳಿಗ್ಗೆ ಶ್ರೀ ದೇವಿಗೆ ವಿಶೇಷ ಪೂಜೆ, ಹೂವಿನ ಅಲಂಕಾರ, ಮಧ್ಯಾಹ್ನ ದಾಸೋಹ ಜರುಗಲಿದೆ. ಹರಿಹರ ಟಿ. ಜಯದೇವಪ್ಪ ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು, (ದಾವಣಗೆರೆ), ಡಾ. ಎಂ.ಎಂ. ಪಟ್ಟಣಶೆಟ್ಟಿ ಮಕ್ಕಳು, ಮೊಮ್ಮಕ್ಕಳು ದಾವಣಗೆರೆ ಇವರು ದಾಸೋಹ ಸೇವಾರ್ಥಿಗಳಾಗಿದ್ದಾರೆ.

## ಮನಮೋಹನ್ ಸಿಂಗ್ ಅವರಿಗೆ ಎಸ್ಸಿ, ಎಸ್ಟಿ ವಕೀಲರ ಸಹಕಾರ ಸಂಘದ ಸಂತಾಪ

ದಾವಣಗೆರೆ, ಡಿ. 28 - ದಾವಣಗೆರೆ ಎಸ್ಸಿ, ಎಸ್ಟಿ ವಕೀಲರ ಸಹಕಾರ ಸಂಘದ ವತಿಯಿಂದ ಸಂತಾಪ ಮಾಜಿ ಪ್ರಧಾನಿ ದಿ. ಡಾ. ಮನಮೋಹನ್ ಸಿಂಗ್ ನಿಧನದ ಶ್ರದ್ಧಾಂಜಲಿ ಸಭೆಯನ್ನು ಸೇಂಟ್ಸ್ ಜಾನ್ಸ್ ಶಾಲೆ ರಸ್ತೆಯಲ್ಲಿರುವ ಬಿ.ಎಂ. ಹನುಮಂತಪ್ಪ ಇವರ ಬುಟ್ಟೆ ಅಸೋಸಿಯೇಟ್ಸ್ ವಕೀಲರ ಕಛೇರಿಯಲ್ಲಿ ಹಮ್ಮಿಕೊಳ್ಳಲಾಗಿತ್ತು.

ಹಿನ್ನೆಲೆಯಲ್ಲಿ ವಕೀಲರಾದ ವೈ. ಹನುಮಂತಪ್ಪ ಅಧ್ಯಕ್ಷತೆವಹಿಸಿದ್ದರು. ಈ ಶ್ರದ್ಧಾಂಜಲಿ ಸಭೆಯಲ್ಲಿ ವಕೀಲರುಗಳಾದ ಬಿ.ಜಿ. ಚಂದ್ರಶೇಖರಪ್ಪ, ಬಿ.ಎಂ. ಹನುಮಂತಪ್ಪ, ಕೆ.ಕೆ. ರಂಗಸ್ವಾಮಿ, ಎಸ್. ರಾಜಪ್ಪ, ವಿ. ಗೋಪಾಲ್, ಕೆ.ಹೆಚ್. ಹನುಮಂತಪ್ಪ, ಸುಭಾಸ್ ಚಂದ್ರಬೋಸ್, ಎ.ಕೆ. ಹರಿಹರ, ಮಹೇಶ್ ಪಿ. ಕೃಷ್ಣನಾಯ್ಕ್, ವೈ. ಸಂತೋಷ್ ನಾಯ್ಕ್, ಕೆ.ಎಸ್. ಶ್ಯಾಮ್, ಎಲ್.ಎಸ್. ಕುಮಾರ್, ನಾಗರಾಜ್, ಚೇತನ ಆರ್. ಉಪಸ್ಥಿತರಿದ್ದರು.

# ಮಕ್ಕಳಿಗೆ ಶಿಸ್ತಿನ ಬೇಲಿ, ಓದಿಗೆ ಸೂಕ್ತ ವ್ಯವಸ್ಥೆ ಕಲ್ಪಿಸಿ

## ಸಿದ್ಧಗಂಗಾ ಸಂಸ್ಥೆಯ 55ನೇ ವಾರ್ಷಿಕ ಸಂಭ್ರಮದಲ್ಲಿ ಡಾ. ಜಯಂತ್ ಅಭಿಮತ

ದಾವಣಗೆರೆ, ಡಿ.28- ಪಾಲಕರು ಮಕ್ಕಳಿಗೆ ಶಿಸ್ತಿನ ಬೇಲಿ ಹಾಕುವ ಜತೆಗೆ ಅವರ ಓದಿಗೆ ಸೂಕ್ತ ವ್ಯವಸ್ಥೆ ಕಲ್ಪಿಸಬೇಕೆಂದು ಸಿದ್ದಗಂಗಾ ಪಿಯು ಕಾಲೇಜಿನ ನಿರ್ದೇಶಕ ಡಾ. ಜಯಂತ್ ಹೇಳಿದರು.

ಶನಿವಾರ ಸಂಜೆ ಇಲ್ಲಿನ ಸಿದ್ದಗಂಗಾ ಸಂಸ್ಥೆಯ 55ನೇ ವಾರ್ಷಿಕ ಸಂಭ್ರಮ-2024-25, ಶಿಕ್ಷಣ ಶಿಲ್ಪಿ ಡಾ.ಎಂ.ಎಸ್.ಎಸ್ ಪ್ರಶಸ್ತಿ ಪ್ರದಾನ, ಎಂಎಸ್.ಎಸ್ ಕ್ವಿಜ್ ಬಹುಮಾನ ವಿತರಣೆ, ಪ್ರತಿಭಾ ಪುರಸ್ಕಾರ ಹಾಗೂ ಸಾಂಸ್ಕೃತಿಕ ಸಂಭ್ರಮದ 3ನೇ ದಿನದ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಮಕ್ಕಳು ಓದುವಾಗ, ಪಾಲಕರು ಟಿ.ವಿ ನೋಡುವುದು ಸೇರಿದಂತೆ ಇತರೆ ಚಟುವಟಿಕೆಗಳ ಮೂಲಕ ಅವರ ಓದು ಹಾಗೂ ಏಕಾಗ್ರತೆಗೆ ಧಕ್ಕೆ ಪಡಿಸಬಾರದು ಎಂದು ಕಿವಿ ಮಾತು ಹೇಳಿದರು.

ಮಕ್ಕಳನ್ನು ದೂರದೇ ಅವರ ದೊಡ್ಡ-ದೊಡ್ಡ ಕನಸುಗಳಿಗೆ ಹುರುದುಂಬಿಸುವ ಕಾರ್ಯ ಮಾಡಬೇಕು. ಬದಲಾಗಿ ಅವರನ್ನು ದೂರಬಾರದು ಎಂದು ಹೇಳಿದರು.



> **ಸಿದ್ದಗಂಗಾ ವಿದ್ಯಾಸಂಸ್ಥೆಯು ಅನೇಕ ಏಳು-ಬೀಳುಗಳನ್ನು ಕಂಡಿದೆ. ಕಠಿಣ ಸವಾಲುಗಳನ್ನು ಎದುರಿಸಿ ಇಂದು ಸದೃಢವಾಗಿ ಬೆಳೆಯುವ ಜತೆಗೆ ಅನೇಕ ಮಕ್ಕಳ ಸಾಧನೆಗೆ ಬುನಾದಿಯಾಗಿ ನಿಂತಿದೆ.**
> **- ಡಾ. ಜಯಂತ್., ಸಿದ್ದಗಂಗಾ ಪಿಯು ಕಾಲೇಜಿನ ನಿರ್ದೇಶಕ**

ವಿದ್ಯಾರ್ಥಿಗಳು ತಮ್ಮ ನ್ಯೂನ್ಯತೆ, ಕಷ್ಟ ಮತ್ತು ಅನೇಕ ಸವಾಲುಗಳನ್ನು ಎದುರಿಸಲು ಸಜ್ಜಾದಾಗ ಮಾತ್ರ ಸಾಧನೆ ಮಾಡಬಹುದು. ಇದಕ್ಕೆ ನಮ್ಮ ಸಂಸ್ಥೆಯಲ್ಲಿ ಓದಿದ ಕೆಲವು ವಿದ್ಯಾರ್ಥಿಗಳೇ ನಿರ್ದಶನವಾಗಿದ್ದು, ಇಂದು ಅವರು ಉತ್ತಮ ದರ್ಜೆಯ ಹುದ್ದೆಯನ್ನು ಅಲಂಕರಿಸಿದ್ದಾರೆ ಎಂದು ತಿಳಿಸಿದರು.

ಸಾಧನೆಗೆ ಸತತ ಪ್ರಯತ್ನ ಹಾಗೂ ಆತ್ಮ ವಿಶ್ವಾಸ ಬಹಳ ಮುಖ್ಯ. ಈ ನಿಟ್ಟಿನಲ್ಲಿ ಮಕ್ಕಳು ಸದೃಢ ಗುರಿ ಹೊಂದಬೇಕು ಮತ್ತು ಅದಕ್ಕೆ ಪೂರಕವಾದ ಶ್ರಮ ಅವರು ಹಾಕಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಶಾಲೆಯ 134 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮಾಡಲಾಯಿತು.

ಈ ವೇಳೆ ಸಂಸ್ಥೆಯ ಮುಖ್ಯಸ್ಥೆ ಜಸ್ಟಿನ್ ಡಿಸೌಜ, ಪಿಯು ಕಾಲೇಜಿನ ಪ್ರಾಚಾರ್ಯೆ ವಾಣಿಶ್ರೀ, ಉಪನ್ಯಾಸಕರಾದ ಗಣೇಶ್ ಪ್ರಸಾದ್, ಗೋಪಿನಾಥ್, ಯು.ಪಿ ಲಕ್ಷ್ಮಿ ನಾರಾಯಣ, ರಾಮು ಇತರರು ಇದ್ದರು.

# ಗ್ರಾಮೀಣ ಕ್ರೀಡೆಗಳಿಗೆ ಉತ್ತೇಜನ ನೀಡಬೇಕು

## ತೋಳಹುಣಸೆ : ಕ್ರಿಕೆಟ್ ಪ್ರಿಮಿಯರ್ ಲೀಗ್ ಪಂದ್ಯಾವಳಿಗೆ ಶಾಸಕ ಬಸವಂತಪ್ಪ ಚಾಲನೆ



ದಾವಣಗೆರೆ, ಡಿ. 28- ಅತೀ ಹೆಚ್ಚು ಯುವ ಸೇನಾನಿಗಳನ್ನು ದೇಶದ ಗಡಿ ಕಾಯಲು ಕಳುಹಿಸಿರುವ ಗ್ರಾಮದಲ್ಲಿ ಕ್ರೀಡೆಗೆ ಹೆಚ್ಚು ಒತ್ತು ನೀಡುತ್ತಿರುವುದು ಸಂತಸದ ಸಂಗತಿ ಎಂದು ಹೇಳಿದರು.

ತಾಲೂಕಿನ ತೋಳಹುಣಸೆ ಗ್ರಾಮದಲ್ಲಿ ಶನಿವಾರ ಆಯೋಜಿಸಿದ್ದ ಕ್ರಿಕೆಟ್ ಪ್ರಿಮಿಯರ್ ಲೀಗ್ ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ದೈಹಿಕವಾಗಿ ಸದೃಢಗೊಳ್ಳಲು ಕ್ರೀಡೆಗಳು ಸಹಕಾರಿಯಾಗಿದ್ದು, ಗ್ರಾಮದ ಯುವಕರು ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ಕಿವಿಮಾತು ಹೇಳಿದರು.


ಗ್ರಾಮೀಣ ಕ್ರೀಡೆಗಳು ಬದುಕಿನ ಅವಿಭಾಜ್ಯ ಅಂಗವಾಗಿವೆ. ವಾಲಿಬಾಲ್, ಕಬಡ್ಡಿ, ಚಿನ್ನಿದಾಂಡು, ಹಗ್ಗಜಗ್ಗಾಟ ಸೇರಿದಂತೆ ಇನ್ನಿತರೆ ಗ್ರಾಮೀಣ ಕ್ರೀಡೆಗಳು ನಶಿಸುತ್ತಿವೆ. ಗ್ರಾಮದ ಯುವಕರು ಅವುಗಳಿಗೆ ಉತ್ತೇಜನ ನೀಡಬೇಕು ಎಂದು ಸಲಹೆ ನೀಡಿದರು.

ಕ್ರಿಕೆಟ್ ಆಟದೊಂದಿಗೆ ನಶಿಸುತ್ತಿರುವ ಗ್ರಾಮೀಣ ಕ್ರೀಡೆಗಳಿಗೆ ಪ್ರತಿಯೊಬ್ಬರೂ ಪ್ರೋತ್ಸಾಹ ನೀಡಬೇಕು. ಗ್ರಾಮೀಣ ಪ್ರದೇಶದಲ್ಲಿ ಕ್ರೀಡೆಗಳು ಹೆಚ್ಚಾಗಿ ನಡೆದಿರುವುದರಿಂದ ಇಂತಹ ಪ್ರತಿಭೆಗಳು ಬೆಳಕಿಗೆ ಬಾರದಂತಾಗಿದೆ. ಅದರಲ್ಲೂ ದೇಸೀಯ ಕ್ರೀಡೆಗಳಿಗೆ ಪ್ರೋತ್ಸಾಹದ ಕೊರತೆಯಿಂದ ನಶಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಗ್ರಾಮದಲ್ಲಿ ಹೆಚ್ಚು ಕ್ರೀಡಾ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಮೂಲಕ ಮಕ್ಕಳಿಗೆ ಉತ್ತೇಜನ ನೀಡಬೇಕು. ಇದರಿಂದ ಕ್ರೀಡಾಪಟುಗಳು ತಾಲೂಕು, ಜಿಲ್ಲೆ, ರಾಜ್ಯ, ದೇಶ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಳ್ಳಳು ಸಾಧ್ಯವಾಗಲಿದೆ ಎಂದರು.

ಮಾಯಕೊಂಡ ಕ್ಷೇತ್ರದ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿದ್ದು, ಅದರಂತೆ ತೋಳಹುಣಿಸೆ ಗ್ರಾಮಕ್ಕೂ ಹೆಚ್ಚಿನ ಅನುದಾನ ತಂದು ಗ್ರಾಮ ಅಭಿವೃದ್ಧಿಗೆ ಸಹಕಾರ ನೀಡುವುದಾಗಿ ಇದೇ ಸಂದರ್ಭದಲ್ಲಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಲೋಕ್ಯಾನಾಯ್ಕ್, ಪಾರ್ಥ ಮತ್ತು ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಗಾಯಕ ಮಹಮ್ಮದ್ ರಫಿ ಜನ್ಮದಿನ ನಗರದಲ್ಲಿಂದು ರಸಮಂಜರಿ



ಶಾಂತಿ ಕಂಫರ್ಟ್ ಸಭಾಂಗಣದಲ್ಲಿ ಇಂದು ಸಂಜೆ 5 ಗಂಟೆಗೆ ಖ್ಯಾತ ಹಿನ್ನೆಲೆ ಗಾಯಕ ದಿ. ಮಹಮ್ಮದ್ ರಫಿ ಅವರ ನೂರನೇ ಜನ್ಮದಿನದ ಅಂಗವಾಗಿ ಹಿಂದಿ ಚಲನ ಚಿತ್ರಗೀತೆಗಳ ಗಾಯನ ಕಾಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಎವರ್ ಗ್ರೀನ್ ಮೆಲೋಡಿ ಮೇಕರ್ಸ್ ಆಯೋಜಿಸಿರುವ ಈ ಕಾರ್ಯಕ್ರಮದಲ್ಲಿ ಹೈದ್ರಾಬಾದಿನ ಗಾಯಕಿ ಮಂದಾಕಿನಿ ಹಾಗೂ ಸ್ಥಳೀಯ ಕಲಾವಿದರಾದ ಡಾ. ಅನೀಸ್, ಕೆ.ಜಿ.ನಾಸೀರ್ ಹಾಡುಗಳನ್ನು ಹಾಡಿ ರಂಜಿಸಲಿದ್ದಾರೆ. ಮಂಡಕ್ಕಿ ಸಂಘದ ಎ.ಬಿ. ಹಬೀಬುಲ್ಲಾಸಾಬ್. ಶ್ರೀಮತಿ ಪುಷ್ಪಾ, ಪತ್ರಕರ್ತ ಬಿ. ಸಿಕಂದರ್, ಪಾಲಿಕೆ ಸದಸ್ಯ ಜಾಕೀರ್ ಅಲಿ, ಕಣಕುಪ್ಪಿ ಮಹಬೂಬ್, ಶಫೀಕ್ ಪಂಡಿತ್, ಎ.ಬಿ.ಜಬೀಉಲ್ಲಾ, ಸಕ್ಲೇನ್, ರಫೀಕ್, ಕಂಟ್ರಾಕ್ಟರ್ ಅಲಿ ಅತಿಥಿಗಳಾಗಿ ಪಾಲ್ಗೊಳ್ಳುವರು ಎಂದು ಸಿಂಗರ್ ಅಲಿ ತಿಳಿಸಿದ್ದಾರೆ.

## ನಗರದಲ್ಲಿಂದು ಶರಣ ಸಂಸ್ಕೃತಿ ಚಿಂತನೆ

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು (ಮೈಸೂರು) ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ವತಿಯಿಂದ ಮನೆ ಮನೆಗಳಲ್ಲಿ ಶರಣ ಸಂಸ್ಕೃತಿ ಚಿಂತನೆ ಕಾರ್ಯಕ್ರಮವನ್ನು ಸರಸ್ವತಿ ನಗರದ ಬಸವೇಶ್ವರ ಪಾರ್ಕ್ ನೀರಿನ ಟ್ಯಾಂಕ್ ಬಳಿ ಇರುವ 'ಹಂಸಧ್ವನಿ'ಯಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಏರ್ಪಡಿಸಲಾಗಿದೆ. ಹೆಚ್.ಕೆ. ಲಿಂಗರಾಜು ಪ್ರಾಸ್ತಾವಿಕ ನುಡಿಗಳನ್ನಾಡಲಿದ್ದು, ಸುಖ ಸಂಸಾರಕ್ಕೆ ಶರಣರ ನುಡಿಗಡಣ ವಿಷಯವಾಗಿ ಡಾ. ಜೆ.ಕೆ. ಮಲ್ಲಿಕಾರ್ಜುನ ಅವರು ಅನುಭಾವ ನೀಡಲಿದ್ದಾರೆ. ಕೆ.ಬಿ. ಪರಮೇಶ್ವರಪ್ಪ ಅವರು ಅಧ್ಯಕ್ಷತೆ ವಹಿಸಲಿದ್ದಾರೆ.

## ಎಐಟಿಯುಸಿ ಸಂಯೋಜಿತ ಅಂಗನವಾಡಿ ಸಭೆ

ಎಐಟಿಯುಸಿ ಸಂಯೋಜಿತ ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಫೆಡರೇಷನ್ ರಾಜ್ಯ ಸಮಿತಿ ಸಭೆಯು ಇಂದು ಬೆಳಿಗ್ಗೆ 11ಕ್ಕೆ ಪಂಪಾಪತಿ ಭವನದಲ್ಲಿ ಏರ್ಪಡಿಸಲಾಗಿದೆ


**SSM Residential Public School**
Pailwan Channabasappa Layout, P.B. Road near GMIT College, Davanagere-577006

**WANTED TEACHERS**

Application are invited along with CVs, one passport size Photograph, original marks card for the following vacant posts in the SSM Residential Public School. Minimum Qualification, Experience and grades offered are mentioned against each other.

**Interview Date 30.12.2024 Monday at 10.30 & 04 .01.2025**
**Vacancy will be filled on early come early fill policy**

| Sl.no | Post | Qualification |
|---|---|---|
| 1 | Assistant Teacher 2 (Female) | PUC / NTC |
| 2 | Assistant Teacher 2 (Female) | PUC / B.A. D.Ed |
| 3 | Assistant Hindi Teacher 1 | B.A / M.A. B.Ed |
| 4 | Assistant History/English 2 (English major) | B.A / M.A. B.Ed |
| 5 | Maths/Science Teacher | B.Sc / M.Sc. B.Ed, B.E |
| 6 | Assistant P.E Teacher -1 | B.A, B.Com, B.P.Ed |

**Contact : 82968 08005, 92066 63888**

# ಹೆಚ್.ಕೆ.ಆರ್ ಧ್ಯೇಯ, ಸ್ಫೂರ್ತಿಯೊಂದಿಗೆ ಹೋರಾಡಿ

## ಅಂಗನವಾಡಿ ಕಾರ್ಯಕರ್ತೆಯರ, ಸಹಾಯಕಿಯರ ಸಂಘ ಉದ್ಘಾಟಿಸಿದ ಎಂ. ಗೋಪಾಲ್



ದಾವಣಗೆರೆ, ಡಿ.28- ಸಂಘಟನೆಗೆ ಹೆಚ್.ಕೆ. ರಾಮಚಂದ್ರಪ್ಪ ಅವರೇ ಸ್ಫೂರ್ತಿ, ಅವರ ಹಾದಿಯಲ್ಲಿಯೇ ನ್ಯಾಯಕ್ಕಾಗಿ ಹೋರಾಟ ಮಾಡೋಣ ಎಂದು ರೈತ ಮತ್ತು ಕಾರ್ಮಿಕ ರಾಜ್ಯ ನಾಯಕ ಎಂ. ಗೋಪಾಲ್ ತಿಳಿಸಿದರು.

ನಗರದ ಮಹಾನಗರ ಪಾಲಿಕೆ ಆವರಣ ದಲ್ಲಿನ ಚನ್ನಗಿರಿ ರಾಧಮ್ಮ-ರಂಗಪ್ಪ ಸ್ಮಾರಕ ರಂಗಮಂದಿರದಲ್ಲಿ ಶನಿವಾರ ಆಯೋಜಿಸಿದ್ದ ಜಿಲ್ಲಾ ಅಂಗನವಾಡಿ ಕಾರ್ಯಕರ್ತೆಯರ, ಸಹಾಯಕಿಯರ ಸಂಘ (ಹೆಚ್.ಕೆ.ಆರ್ ಬಣ) ಉದ್ಘಾಟಿಸಿ ಅವರು ಮಾತನಾಡಿದರು.

ಹೆಚ್.ಕೆ.ಆರ್ ಅವರು ಉತ್ತಮ ನಾಯಕರಾಗಿದ್ದರು. ಜನರ ಒಳಿತಿಗಾಗಿ ಸದಾ ಪ್ರಾಮಾಣಿಕ ಹೋರಾಟವನ್ನು ಮಾಡುತ್ತಿದ್ದರು.ಇಂತಹ ವ್ಯಕ್ತಿಯ ಧ್ಯೇಯ ದೊಂದಿಗೆ ಸಂಘಟನೆ ಹೆಜ್ಜೆ ಹಾಕಬೇಕು ಎಂದು ಆಶಯ ವ್ಯಕ್ತಪಡಿಸಿದರು.

> **ಅಂಗನವಾಡಿಗಳಿಗೆ ಬರುವ ಕಳಪೆ ದಾಸ್ತಾನು ಪೂರೈಕೆಯಿಂದಾಗಿ ಅಲ್ಲಿನ ಕಾರ್ಯಕರ್ತೆ ಹಾಗೂ ಸಹಾಯಕಿಯರ ಮೇಲೆ ಈ ಲೋಪದ ಹೊಣೆಗಾರಿಕೆ ಬರುತ್ತಿದೆ. ಇದು ಅವರ ತಪ್ಪಲ್ಲ. ದಾಸ್ತಾನು ಸರಬರಾಜು ಮಾಡುವ ಮೂಲದಲ್ಲೇ ಲೋಪವಾಗುತ್ತಿದ್ದರಿಂದ ಅವರ ತಪ್ಪನ್ನು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದು ಅವರನ್ನು ಅಮಾನತ್ತು ಪಡಿಸುವಂತೆ ಮನವಿ ಮಾಡಲಿದ್ದೇನೆ.**
>
> **- ಕೆ.ಎಸ್. ಬಸವಂತಪ್ಪ,.** ಮಾಯಕೊಂಡ ಶಾಸಕ

1975ರಲ್ಲಿ ಆಗಿನ ಸರ್ಕಾರ ಗರ್ಭಿಣಿಯರಿಗೆ, ಬಾಣಂತಿಯರಿಗೆ ಹಾಗೂ ಶಿಶುಗಳಿಗೆ ಪೌಷ್ಠಿಕ ಆಹಾರ ಒದಗಿಸುವ ಉದ್ದೇಶದಿಂದ ಜಾರಿಗೊಳಿಸಿದ ಈ ಯೋಜನೆಯನ್ನು ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ಅರ್ಹ ಫಲಾನುಭವಿಗಳಿಗೆ ತಲುಪಿಸುತ್ತಿರುವುದು ಮಹತ್ತರವಾದ ಕೆಲಸ ಎಂದು ಶ್ಲಾಘಿಸಿದರು.

ದೇಶದಲ್ಲಿ 12 ಕೋಟಿ ಫಲಾನುಭವಿಗಳ ಸೇವೆ ಮಾಡುವ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ಸಮಸ್ಯೆಗಳನ್ನು ಸರ್ಕಾರ ಕಡೆಗಣಿಸಿ ನಡೆದರೆ, ಸಂಘಟನೆಯು ನ್ಯಾಯ ಸಿಗುವವರೆಗೂ ಹೋರಾಟ ನಡೆಸಬೇಕು ಎಂದು ಹೇಳಿದರು.

ಶಾಸಕ ಕೆ.ಎಸ್. ಬಸವಂತಪ್ಪ ಮಾತನಾಡಿ, ಜನಪರವಾಗಿರುವ ಸಂಘಟನೆಗಳು ನೊಂದವರಿಗೆ ಶಕ್ತಿ ಆಗಲಿದೆ. ಈ ದೆಸೆಯಲ್ಲೇ ಹೆಚ್.ಕೆ.ಆರ್ ಬಣವು ಧ್ವನಿ ಇಲ್ಲದವರಿಗೆ ಧ್ವನಿಯಾಗಿ ನಿಲ್ಲಲಿದೆ ಎಂದರು.

ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ವಿವಿಧ ಬೇಡಿಕೆಗಳು ಹಾಗೂ ವೇತನ ಸಂಬಂಧಿತ ಸಮಸ್ಯೆಯನ್ನು ಸರ್ಕಾರದ ಮಟ್ಟದಲ್ಲಿ ಪ್ರಸ್ತಾಪಿಸಿ ನ್ಯಾಯ ದೊರಕಿಸುವ ಕಾರ್ಯ ಮಾಡಲಿದ್ದೇನೆ ಎಂದರು.

ಹಿರಿಯ ಪತ್ರಕರ್ತ ಬಿ.ಎನ್. ಮಲ್ಲೇಶ್ ಮಾತನಾಡಿ, ಅಂಗನವಾಡಿಗಳಲ್ಲಿ ಮತ್ತು ತಮ್ಮ ಮನೆಗಳಲ್ಲೂ ಮಕ್ಕಳ ಲಾಲನೆ-ಪಾಲನೆ ಮಾಡುವ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ಸರ್ಕಾರದಿಂದ ಹೆಚ್ಚಿನ ಸೌಲಭ್ಯ ಸಿಗಬೇಕಿದೆ ಎಂದು ಹೇಳಿದರು.

ರಕ್ಷಣಾ ವೇದಿಕೆ ಹಾಗೂ ರೈತ ಸಂಘಟನೆಗಳು ಎಲ್ಲಾ ಬಣಗಳಾಗಿ ಹೋಗಿವೆ. ಈ ನಿಟ್ಟಿನಲ್ಲಿ ಕಮ್ಯೂನಿಸ್ಟ್ ಪಾರ್ಟಿಯಲ್ಲೂ ಬಣ ಆಗುತ್ತಿರುವುದು ಬೇಸರ ತಂದಿದೆ ಎಂದರು.

ಸಂಘಟನೆ ಒಡೆಯಬಾರದು. ಬಣಗಳು ನಮ್ಮಲ್ಲಿನ ಶಕ್ತಿ ಕುಂದಿಸುತ್ತದೆ. ಹಾಗಾಗಿ ಸಂಘಟನೆಯಲ್ಲಿ ಯಾವುದೇ ಅನ್ಯಾಯ, ಅಸಮಾಧಾನವಿದ್ದರೂ ಅದನ್ನು ಸರಿಪಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕಮ್ಯೂನಿಸ್ಟ್ ಪಕ್ಷದಲ್ಲಿ ನಾಯಕತ್ವದ ಕೊರತೆ ಇದೆ ಎಂಬುದು ಭಾಸವಾಗುತ್ತಿದೆ. ಒಬ್ಬರನ್ನು ಉಚ್ಚಾಟಿಸುವ ಮೊದಲು ಅವರ ಕೊಡುಗೆ ಪಕ್ಷಕ್ಕೆ ಎಷ್ಟಿದೆ ಎಂಬುದನ್ನು ಅರಿಯಬೇಕು. ಈ ನಿಟ್ಟಿನಲ್ಲಿ ಬಣಗಳು ಆಗುತ್ತಿರುವುದನ್ನು ತಡೆಯಲು ಕಮ್ಯೂನಿಸ್ಟ್‌ನ ಎಲ್ಲಾ ಮುಖಂಡರನ್ನು ಒಗ್ಗೂಡಿಸಿ ಅವರ ಅಸಮಾಧಾನ ಸರಿಪಡಿಸುವ ನಿಟ್ಟಿನಲ್ಲಿ ಸಂಘಟನೆಯ ಒಗ್ಗಟ್ಟಿಗೆ ಯೋಚಿಸಬೇಕು ಎಂದರು.

ಈ ವೇಳೆ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣ ಕುಮಾರ್, ವಕೀಲ ಎ.ವೈ. ಕೃಷ್ಣಮೂರ್ತಿ, ವಿಮಾಲಾಕ್ಷಿ, ಡಿ.ಎಂ. ರೇಣುಕಾ, ವಿಶಾಲಮ್ಮ, ಸುಶಿಲಮ್ಮ, ಭರಮಕ್ಕ, ಗೀತಾ, ಎ. ಮಂಜುಳಾ ಇತರರು ಇದ್ದರು.

# ಯುವಕರಲ್ಲಿ ಮೌಲ್ಯಗಳು ಮುಖ್ಯ

## ಅನ್‌ಮೋಲ್ ಉತ್ಸವದಲ್ಲಿ ಸಿ. ಜಿ. ದಿನೇಶ್ ಅಭಿಮತ



ದಾವಣಗೆರೆ, ಡಿ. 28 - ಹೆಚ್ಚು ಯುವಶಕ್ತಿ ಹೊಂದಿರುವ ನಮ್ಮ ದೇಶದ ಸಂಸ್ಕೃತಿಯನ್ನು ಉಳಿಸಿ, ಬೆಳೆಸುವ ಜವಾಬ್ದಾರಿ ನಮ್ಮ ಯುವಕರ ಕೈಯಲ್ಲಿದ್ದು, ಹಾಗಾಗಿ ಇಂದಿನ ಯುವಕರಲ್ಲಿ ಮೌಲ್ಯಗಳನ್ನು ತುಂಬುವುದು ಬಹಳ ಅವಶ್ಯಕವಾಗಿದೆ ಎಂದು ಅನ್‌ಮೋಲ್ ವಿದ್ಯಾಸಂಸ್ಥೆಯ ಅಧ್ಯಕ್ಷ ಸಿ. ಜಿ. ದಿನೇಶ್ ತಿಳಿಸಿದರು.

ಅನ್‌ಮೋಲ್ ವಿದ್ಯಾಸಂಸ್ಥೆ ಆವರಣದಲ್ಲಿ ಆಚರಿಸ ಲಾದ 'ಅನ್‌ಮೋಲ್ ಉತ್ಸವ 2024' ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಇಂದಿನ ಮಕ್ಕಳನ್ನು ದೇಶದ ಆಸ್ತಿಗಳನ್ನಾಗಿ ಸೃಷ್ಟಿ ಮಾಡಬೇಕಾಗಿದೆ ಈ ದಿಸೆಯಲ್ಲಿ ಶಾಲೆಗಳ ಪಾತ್ರ ಹಿರಿದಾಗಿದೆ ಎಂದರು.

ಅನ್‌ಮೋಲ್ ವಿದ್ಯಾಸಂಸ್ಥೆಯು ಚಟುವಟಿಕೆ ಆಧಾರಿತ ಶಿಕ್ಷಣದೊಂದಿಗೆ ಮಕ್ಕಳ ಬೌದ್ಧಿಕ, ಮಾನಸಿಕ, ಶಾರೀರಿಕ, ಸರ್ವತೋಮುಖ ಬೆಳವಣಿಗೆಗೆ ಸದೃಢ ಅಡಿಪಾಯ ಹಾಕುವತ್ತ ಪ್ರಾಮಾಣಿಕ ಪ್ರಯತ್ನ ಮಾಡುತ್ತಾ ಬಂದಿದೆ. ಪ್ರತಿವರ್ಷ ವಿಭಿನ್ನ ವಿಷಯಾಧಾರಿತ ವಾರ್ಷಿಕೋತ್ಸವ ಆಚರಿಸುತ್ತಾ ಬಂದಿದ್ದು, ಈ ಬಾರಿಯ ಅನ್‌ಮೋಲ್ ಉತ್ಸವವು ಸ್ನೇಹ, ಕುಟುಂಬ, ಭಕ್ತಿ, ಜಾನಪದ, ಬುಡಕಟ್ಟು, ಕಥಾನಾತ್ಮಕ ನೃತ್ಯ, ರೆಟ್ರೋ, ಹಾಸ್ಯ, ಹಬ್ಬಗಳು ಹೀಗೆ ತರಗತಿವಾರು ಭಿನ್ನ ಪರಿಕಲ್ಪನೆಗಳೊಂದಿಗೆ ರೂಪಿಸಲಾಗಿತ್ತು ಎಂದು ಅವರು ವಿವರಿಸಿದರು.

ಇದೇ ಸಂದರ್ಭದಲ್ಲಿ 2023-24 ನೇ ಸಾಲಿನಲ್ಲಿ ದ್ವಿತೀಯ ಪಿಯುಸಿಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪ್ರಥಮ ರೂ 50,000, ದ್ವಿತೀಯ ರೂ 25,000 ನಗದು ನೀಡಲಾಯಿತು. ಅಲ್ಲದೆ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರಶಸ್ತಿ ನಗದು ಬಹುಮಾನ ನೀಡಿ ಗೌರವಿಸಲಾಯಿತು.

ಸಮಾರಂಭದಲ್ಲಿ ಸಂಸ್ಥೆಯ ಉಪಾಧ್ಯಕ್ಷ ರವೀಂದ್ರ ಡಿ ವಿ, ಕಾರ್ಯದರ್ಶಿ ಉಮೇಶ್ ಬಿ.ಓ, ಜಂಟಿ ಕಾರ್ಯದರ್ಶಿ ಶ್ರೀ ಭೈರೇಶ್ ಕೆ .ಇ, ಜಂಟಿ ಖಜಾಂಚಿ ಕೆ. ಎನ್. ಸಿ ಗೌಡ, ಸದಸ್ಯರಾದ ಭೈಜುರಾಮ ಬಿ.ಸಿ, ಪ್ರಕಾಶ್ ಬಿ. ಯು, ಶಿವಲಿಂಗಪ್ಪ ಕೆ.ಎನ್, ಪ್ರಾಂಶುಪಾಲರಾದ ಯು ಕೊಟ್ರೇಶಿ ಮತ್ತು ಸುಬ್ರಹ್ಮಣಿ ಎಲ್ ಮತ್ತಿತರರು ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ರೈತ ಸಂಘಗಳ ಒಕ್ಕೂಟದ ಸಭೆ

ರಾಜ್ಯ ರೈತ ಸಂಘಗಳ ಒಕ್ಕೂಟ - ಕರ್ನಾಟಕದ ವತಿಯಿಂದ ದೇಶಕ್ಕಾಗಿ ದುಡಿದು ಮಡಿದ ಹುತಾತ್ಮರ ನೆನಪಿನ ದಿನದ ಅಂಗವಾಗಿ ಕಾರ್ಯಕ್ರಮ ರೂಪಿಸುವ ಸಲುವಾಗಿ ಇಂದು ಬೆಳಿಗ್ಗೆ 11 ಗಂಟೆಗೆ ಜಯದೇವ ವೃತ್ತ ಬಳಿ ಇರುವ ಹಳೇ ಪ್ರವಾಸಿ ಮಂದಿರದಲ್ಲಿ ಪೂರ್ವಭಾವಿ ಸಭೆ ಕರೆಯಲಾಗಿದೆ. ಪೂಜಾರ ಅಂಜಿನಪ್ಪ, ಬಲ್ಲೂರು ರವಿಕುಮಾರ್, ಹೆಬ್ಬಾಳು ರಾಜಯೋಗಿ, ಮೀಯಾಪುರದ ತಿರುಮಲೇಶ್ ಮತ್ತಿರರು ಭಾಗವಹಿಸಲಿದ್ದಾರೆ.

# ಗ್ರಾಹಕರಿಗೆ ವಂಚನೆಯಾದರೆ ಕಾನೂನು ಹೋರಾಟ ಅಗತ್ಯ

## ಆರ್ ಎಲ್ ಕಾನೂನು ಕಾಲೇಜಲ್ಲಿ ನಡೆದ ರಾಷ್ಟ್ರೀಯ ಗ್ರಾಹಕರ ದಿನಾಚರಣೆಯಲ್ಲಿ ವಿಜಯಲಕ್ಷ್ಮಿ

ದಾವಣಗೆರೆ, ಡಿ.28- ಮಾರಾಟಗಾರರು ಗ್ರಾಹಕರಿಗೆ ಸರಕು ಮತ್ತು ಸೇವೆ ಸೂಕ್ತ ರೀತಿಯಲ್ಲಿ ನೀಡದೆ ವಂಚನೆ ಮಾಡಿದರೆ ಅದರ ವಿರುದ್ಧ ಬಳಕೆದಾರರು ನ್ಯಾಯಕ್ಕಾಗಿ ಕಾನೂನಾತ್ಮಕ ಹೋರಾಟ ನಡೆಸಬೇಕು ಎಂದು ತುಮಕೂರು ಜಿಲ್ಲಾ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷರಾದ ಜಿ.ಟಿ. ವಿಜಯಲಕ್ಷ್ಮಿ ಹೇಳಿದರು.

ನಗರದ ಆರ್.ಎಲ್ ಕಾನೂನು ಕಾಲೇಜಿನ ಸಭಾಂಗಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ "ರಾಷ್ಟ್ರೀಯ ಗ್ರಾಹಕರ ದಿನಾಚರಣೆ" ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.




ಗ್ರಾಹಕರ ಹಕ್ಕುಗಳು ಮತ್ತು ಹಿತರಕ್ಷಣೆ ಎಲ್ಲರ ಹೊಣೆಯಾಗಿದೆ. ಗ್ರಾಹಕರು ತಮ್ಮ ಹಕ್ಕುಗಳು ಹಾಗೂ ಜವಾಬ್ದಾರಿಗಳ ಬಗ್ಗೆ ಹೆಚ್ಚಿನ ಜ್ಞಾನ ಬೆಳೆಸಿಕೊಳ್ಳುವ ಮೂಲಕ ಗ್ರಾಹಕರ ಹಿತರಕ್ಷಣೆ ಕಾಪಾಡಬೇಕು. ಜೀವನದಲ್ಲಿ ನಿತ್ಯ ಬಳಕೆಗಾಗಿ ಅನೇಕ ಸಾಮಗ್ರಿ ಕೊಳ್ಳುವ ನಾವೆಲ್ಲರೂ ಗ್ರಾಹಕರೇ. ಗ್ರಾಹಕರ ರಕ್ಷಣೆಗಾಗಿ ಸರ್ಕಾರ ಕಾನೂನು ರೂಪಿಸಿ ಹಕ್ಕುಗಳು ಮತ್ತು ಜವಾಬ್ದಾರಿಗಳನ್ನು ನೀಡಿದೆ. ಗ್ರಾಹಕರಿಗೆ ಸುರಕ್ಷತೆ, ವಸ್ತುವಿನ ಬಗ್ಗೆ ಮಾಹಿತಿ, ಆಯ್ಕೆ ಸ್ವಾತಂತ್ರ್ಯ ನೀಡಲಾಗಿದೆ ಎಂದರು.

ಗ್ರಾಹಕರ ರಕ್ಷಣಾ ಕಾಯ್ದೆ 1986ರಕ್ಕೆ ಮತ್ತಷ್ಟು ಬಲ ತುಂಬಿ ಗ್ರಾಹಕರ ರಕ್ಷಣಾ ಕಾಯ್ದೆ-2019 ರೂಪಿಸಲಾಗಿದೆ. ಈ ಕಾಯ್ದೆಗೆ ಆ.9ರಂದು ರಾಷ್ಟ್ರಪತಿಯ ಅಂಕಿತ ಬಿದ್ದಿದೆ. ಹೊಸ ಕಾಯ್ದೆ ಅನ್ವಯ ಜಿಲ್ಲಾ ಗ್ರಾಹಕರ ವೇದಿಕೆಗೆ ಈ ಹಿಂದೆ ನಿಗದಿಪಡಿಸಲಾಗಿದ್ದ ರೂ.20 ಲಕ್ಷ ಮೌಲ್ಯದ ವಸ್ತುಗಳ ನಷ್ಟದ ಪರಿಮಿತಿಯನ್ನು ರೂ.1 ಕೋಟಿಗೆ ಹೆಚ್ಚಿಸಲಾಗಿದೆ ಎಂದು ಮಾಹಿತಿ ನೀಡಿದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್. ಹೆಚ್ ಅರುಣ್ ಕುಮಾರ್ ಮಾತನಾಡಿ, 'ಜಾಗತಿಕವಾಗಿ ಬದಲಾದ ವ್ಯವಸ್ಥೆಯಲ್ಲಿ ಆನ್‌ಲೈನ್ ಖರೀದಿ ಹೆಚ್ಚುತ್ತಿದೆ. ಗ್ರಾಹಕರು ನೀಡುವ ಹಣಕ್ಕೆ ಸರಿಯಾದ ರೀತಿಯ ಮತ್ತು ಗುಣಮಟ್ಟದ ಸರಕು ನೀಡಬೇಕು. ಖರೀದಿಸಿದ ವಸ್ತುವಿನ ಪ್ರಮಾಣ, ಗುಣಮಟ್ಟದಲ್ಲಿ ವಂಚನೆಯಾದರೆ ಗ್ರಾಹಕರ ರಕ್ಷಣಾ ಕಾಯ್ದೆಯಡಿ ಪ್ರಶ್ನಿಸುವ ಅಧಿಕಾರ ನೀಡಲಾಗಿದೆ. ಸಾರ್ವಜನಿಕರು ಗ್ರಾಹಕರ ವೇದಿಕೆ ಮೆಟ್ಟಿಲೇರಿ ಪರಿಹಾರ ಪಡೆಯುವ ಅವಕಾಶವಿದೆ' ಎಂದು ವಿವರಿಸಿದರು.

ಮಾಧ್ಯಮಗಳಲ್ಲಿ ತೋರಿಸುವ ಕೆಲವೊಂದು ಜಾಹಿರಾತುಗಳು ಉದಾಹರಣೆಗೆ ತಂಪು ಪಾನೀಯ ಕುಡಿದು ನೀರಿಗೆ ಹಾರುವುದು, ಗುಟುಕ ತಂಬಾಕುಗಳಂತಹ ಜಾಹೀರಾತುಗಳಿಂದ ಯುವಕರು ಮತ್ತು ಮಕ್ಕಳ ಮೇಲೆ ಅನೇಕ ಪ್ರಭಾವ ಬೀರುತ್ತಿದೆ, "ಗ್ರಾಹಕರೇ ಎಚ್ಚರ ಎನ್ನುವ ಬದಲು ಮಾರಾಟಗಾರರೇ ಎಚ್ಚರ" ಎಂಬ ಸಂದೇಶ ಸಾರುವ ಅವಶ್ಯಕತೆ ಇದೆ ಎಂದರು.


ಕಾಲೇಜು ಪ್ರಾಂಶುಪಾಲ ಡಾ.ಜಿ.ಎಸ್. ಯತೀಶ್ ಅಧ್ಯಕ್ಷತೆ ವಹಿಸಿದ್ದರು. ಹೈ ಕೋರ್ಟ್ ವಕೀಲರಾದ ರಾಜಶೇಖರ್ ಉಪಸ್ಥಿತರಿದ್ದರು. ಕಾನೂನು ವಿದ್ಯಾರ್ಥಿ ಶ್ರೀನಿವಾಸ್ ಪ್ರಾರ್ಥಿಸಿದರು, ಸಹಾಯಕ ಪ್ರಾಧ್ಯಾಪಕ ವಿದ್ಯಾಧರ ವೇದಮೂರ್ತಿ ಟಿ. ಸ್ವಾಗತಿಸಿದರು, ಕಾನೂನು ವಿದ್ಯಾರ್ಥಿ ಪ್ರಶಾಂತ್ ನಿರೂಪಿಸಿದರು.

ಕಾರ್ಯಕ್ರಮದಲ್ಲಿ ಸಹಾಯಕ ಪ್ರಾಧ್ಯಾಪಕರಾದ ಬಿ.ಪಿ.ಬಸವನಗೌಡ, ದೈಹಿಕ ಶಿಕ್ಷಕ ಪವನ್ ಸೇರಿದಂತೆ, ಇತರರು ಉಪಸ್ಥಿತರಿದ್ದರು.

## ನಗರದಲ್ಲಿಂದು ಪುರಸ್ಕಾರ

ಶ್ರೀ ಸಿದ್ದೇಶ್ವರ ಪಿಯು ಕಾಲೇಜು, ಪುನೀತ್ ರಾಜ್ ಕುಮಾರ್ ಪಿಯು ಕಾಲೇಜು ಹಾಗೂ ವಿಜ್ಞಾನ ಅಕಾಡೆಮಿ ವತಿಯಿಂದ ಇಂದು ಬೆಳಿಗ್ಗೆ 10 ಗಂಟೆಗೆ ಬಾಪೂಜಿ ಸಭಾಂಗಣದಲ್ಲಿ ಶೈಕ್ಷಣಿಕ ವರ್ಷದಲ್ಲಿ ಅತ್ಯುನ್ನತ ಸಾಧನೆಗೈದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಏರ್ಪಡಿಸಲಾಗಿದೆ. ವಿಜ್ಞಾನ ಅಕಾಡೆಮಿ ಟ್ರಸ್ಟ್ ಅಧ್ಯಕ್ಷ ಜಿ.ಎಸ್. ಸಂಜಯ್ ಗೌಡರ್ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ದಾವಣಗೆರೆ ವಿವಿ ಸೂಕ್ಷ್ಮ ಜೀವಶಾಸ್ತ್ರ ವಿಭಾಗದ ಅಧ್ಯಕ್ಷ ಡಾ. ಎಸ್. ಶಿಶುಪಾಲ, ಶ್ರೀ ಸಿದ್ಧಾರ್ಥ ವಿದ್ಯಾಸಂಸ್ಥೆಯ ಅಧ್ಯಕ್ಷೆ ಎಸ್. ನೀಲಮ್ಮ, ಗಣಿತ ಉಪನ್ಯಾಸಕ ಬಿ.ಎಲ್. ಭುವನೇಶ್ವರ್, ಸಹ ಪ್ರಾಧ್ಯಾಪಕ ಜಿ.ಎಸ್. ಸತೀಶ್, ವಿಜ್ಞಾನ ಅಕಾಡೆಮಿ ಟ್ರಸ್ಟ್ ಕಾರ್ಯದರ್ಶಿ ಎಂ. ಸಂತೋಷ್ ಕುಮಾರ್ ಭಾಗವಹಿಸಲಿದ್ದಾರೆ.

## ಹರಿಹರದಲ್ಲಿ ನಾಡಿದ್ದು ವಿಶ್ವೇಶತೀರ್ಥ ಶ್ರೀಪಾದಂಗಳವರ 5 ನೇ ಆರಾಧನೆ



ಹರಿಹರ, ಡಿ. 28- ಅಖಿಲ ಭಾರತ ಮಾಧ್ವ ಮಹಾಮಂಡಲ ಹರಿಹರ ಶಾಖೆ ವತಿಯಿಂದ ಶ್ರೀ ವಿಶ್ವೇಶತೀರ್ಥ ಶ್ರೀಪಾಂದಂಗಳವರ 5 ನೇ ಆರಾಧನಾ ಮಹೋತ್ಸವವವು ಇದೇ ದಿನಾಂಕ 31 ಹಾಗೂ ಜನವರಿ 1 ರಂದು ನಗರದ ಬಿರ್ಲಾ ಕಲ್ಯಾಣ ಮಂಟಪ ದಲ್ಲಿ ನಡೆಯಲಿದೆ ಎಂದು ವಿ. ವೆಂಕಟೇಶಾಚಾರ್ ತಿಳಿಸಿದರು. ಪೇಜಾವರ ಮಠ ಉಡುಪಿ ಶ್ರೀ ವಿಶ್ವಪ್ರಸನ್ನ ಶ್ರೀಪಾದಂಗಳವರ ಅನುಗ್ರಹದಿಂದ ದಿ 31 ರಂದು ಮಂಗಳವಾರ ಸಂಜೆ 5 ಗಂಟೆಗೆ ಶ್ರೀ ಪೇಟೆ ಆಂಜನೇಯಸ್ವಾಮಿ ದೇವಸ್ಥಾನದ ಆವರಣದಿಂದ ಭಾವಚಿತ್ರದ ಬೃಹತ್ ಮೆರವಣಿಗೆ ನಡೆಯಲಿದೆ.

ಮೆರವಣಿಗೆ ನಗರದ ಎಲ್ಲಾ ಭಜನಾ ಮಂಡಳಿಯವರ ಭಜನೆ ಮೂಲಕ ರಾಜಾ ಬೀದಿಗಳಲ್ಲಿ ಸಂಚಾರಿಸಿ ಶ್ರೀ ಹರಿಹರೇಶ್ವರ ದೇವಾಲಯದ ಆವರಣಕ್ಕೆ ಅಂತ್ಯಗೊಳ್ಳಲಿದೆ. ಸಂಜೆ 7 ಗಂಟೆಗೆ ಪಂ, ವಿ, ಶ್ರೀ ಪೇಟೆ ಪ್ರಭಕರಾಚಾರ್ಯ ರವರಿಂದ ಪ್ರವಚನ, 8 ಗಂಟೆಗೆ ಶ್ರೀ ಶಂಕರ ಸಂಗೀತ ಪಾಠಶಾಲೆ ವಿದ್ಯಾರ್ಥಿನಿಯರಿಂದ ಸಂಗೀತ ಕಾರ್ಯಕ್ರಮ ನಡೆಯಲಿದೆ.

ಜನವರಿ 1ರಂದು ಬುಧವಾರ ಶ್ರೀ ವಿಶ್ವ ಮಾಧ್ವ ಮಹಾ ಪರಿಷತ್ತು ಉತ್ತಾರದಿಮಠ ಇವರಿಂದ ಬೆಳಗ್ಗೆ 8 ಗಂಟೆಗೆ ವಾಯುಸ್ತುತಿ ಪುನಶ್ಚರಣೆ ಕಾರ್ಯಕ್ರಮ. ಬೆಳಗ್ಗೆ 10 ಕ್ಕೆ ಭಾರತಿ ಭಜನಾ ಮಂಡಳಿಯ ವತಿಯಿಂದ ಭಜನೆ, 11 ಕ್ಕೆ ಪಂ, ವಿ, ಶ್ರೀ ಸುರೇಶಾಚಾರ್ಯ ರವರಿಂದ ಪ್ರವಚನ, 12 ಕ್ಕೆ ಪಂ.ವಿ. ಗುರುರಾಜಾಚಾರ್ಯ ಗುಡಿ ಅಥಣಿ ಪೂರ್ಣಪ್ರಜ್ಞಾ ಪೀಠದ ವಿದ್ವಾಂಸರಿಂದ ಉಪನ್ಯಾಸ ನಂತರ ಪ್ರಸಾದ ವಿನಿಯೋಗ ನಡೆಯಲಿದೆ.

## ನಗರದಲ್ಲಿ ಇಂದು ಕವನ ಸಂಕಲನ ಬಿಡುಗಡೆ

ಶ್ರೀ ಶಬರಿಮಲೆ ಅಯ್ಯಪ್ಪ ಸ್ವಾಮಿ ದೇವಸ್ಥಾನ ಸಾಹಿತ್ಯ ವೇದಿಕೆಯಿಂದ 69ನೇ ಕನ್ನಡ ರಾಜ್ಯೋತ್ಸವದ ಹಾಗೂ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಅರ್ಚಕರಾದ



ಸುಮತೀಂದ್ರ ಅವರ 'ಮಾತೃ ವಾತ್ಸಲ್ಯ' ಎಂಬ ಕವನ ಸಂಕಲನ ಬಿಡುಗಡೆ ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ 11.30ಕ್ಕೆ ಬಿಐಇಟಿ ಕಾಲೇಜು ರಸ್ತೆ, ಹಳೇ ಆರ್‌ಟಿಓ ಆಫೀಸ್ ಹತ್ತಿರದ ಅಯ್ಯಪ್ಪ ಸ್ವಾಮಿ ದೇವಸ್ಥಾನದಲ್ಲಿ ಹಮ್ಮಿಕೊಳ್ಳಲಾಗಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಮಂಜುನಾಥ್ ಕುರ್ಕಿ ಕಾರ್ಯಕ್ರಮ ಉದ್ಘಾಟಿಸಲಿದ್ದು, ಚುಟುಕು ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ರಾಜಶೇಖರ್ ಗುಂಡಗತ್ತಿ ಕವನ ಸಂಕಲನ ಬಿಡುಗಡೆ ಮಾಡಲಿದ್ದಾರೆ. ಸಾಹಿತಿ ಆರ್.ಆರ್. ಇನಾಂದಾರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಅತಿಥಿಗಳಾಗಿ ಶ್ರೀಮತಿ ಸಂಧ್ಯಾ ಸುರೇಶ್ ಉಪಸ್ಥಿತರಿರುವರು.

## ನಗರದಲ್ಲಿ ಇಂದು

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಇಂದು ಬೆಳಿಗ್ಗೆ 10 ಗಂಟೆಗೆ ಕುವೆಂಪು ಕನ್ನಡ ಭವನದಲ್ಲಿ ರಾಷ್ಟ್ರಕವಿ ಕುವೆಂಪು ಅವರ ಜನ್ಮದಿನದ ಅಂಗವಾಗಿ 'ವಿಶ್ವ ಮಾನವ ದಿನಾಚರಣೆ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಜಿಲ್ಲಾ ಕಸಾಪ ಅಧ್ಯಕ್ಷ ಬಿ. ವಾಮದೇವಪ್ಪ ಕಾರ್ಯಕ್ರಮ ಅಧ್ಯಕ್ಷತೆ ವಹಿಸಿಕೊಳ್ಳುವರು.








# ಹನ್ನೊಂದನೇ ವರ್ಷದ ಚಿರಸ್ಮರಣೆ



**ದಿ|| ವಾಣಿ ವಿಲಾಸ್ ಶ್ರೀ ಎಸ್.ಆರ್. ವೀರಪ್ಪ**

ಶ್ರೀ ವಾಣಿ ವಿಲಾಸ್ ರೈಸ್ ಮಿಲ್ ಮಾಲೀಕರು

ನಿಧನ : 29.12.2013

ನೀವು ನಮ್ಮನ್ನಗಲಿ ಇಂದಿಗೆ ಹನ್ನೊಂದು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿ, ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.

ಮಕ್ಕಳಾದ : ಎಸ್.ವಿ. ಉಮೇಶ್, ಎಸ್.ವಿ. ಪ್ರಭು
ಎಸ್.ವಿ. ಶೈಲೇಂದ್ರಬಾಬು
ಸೊಸೆಯಂದಿರು, ಮಗಳು, ಅಳಿಯ, ಮೊಮ್ಮಕ್ಕಳು
ವಾಣಿ ವಿಲಾಸ ಸಹೋದರರು ಮತ್ತು ಬಂಧು-ಮಿತ್ರರು.

- ಶ್ರೀ ವಾಣಿ ಟ್ರಾನ್ಸ್‌ಪೋರ್ಟ್, ಉಮೇಶ್
- ಶ್ರೀ ವಾಣಿ ಕಾರ್ಪೊರೇಷನ್, ಪ್ರಭು (ಗ್ಯಾಸ್ ಅಂಗಡಿ)
- ಶ್ರೀ ವಾಣಿ ಟ್ರೇಡಿಂಗ್ ಕಾರ್ಪೊರೇಷನ್, ಶೈಲೇಂದ್ರ ಬಾಬು

|| ಶ್ರೀ ಗುರು ಅಮರೇಶ್ವರ ಪ್ರಸನ್ನ ||

# ಕೈಲಾಸ ಸಮಾರಾಧನೆ ಆಹ್ವಾನ



ದಿನಾಂಕ : 27.12.2024ನೇ ಶುಕ್ರವಾರದಂದು

**ದಿ|| ನಾಗೂರು ಶ್ರೀ ವಿರೂಪಾಕ್ಷಪ್ಪ ರಾಮಶೆಟ್ಟಿ**

ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**'ಕೈಲಾಸ ಸಮಾರಾಧನೆ'ಯನ್ನು**

ದಿನಾಂಕ : 29.12.2024ನೇ ಭಾನುವಾರ ಮಧ್ಯಾಹ್ನ 12ಕ್ಕೆ ಶ್ರೀ ಅನ್ನದಾನೇಶ್ವರ ಶಾಖಾ ಮಠ, 13ನೇ ಕ್ರಾಸ್ ಬಿ ಬ್ಲಾಕ್, ದೇವರಾಜ್ ಅರಸು 'ಬಿ' ಬಡಾವಣೆ ದಾವಣಗೆರೆಯಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

**ಚಿರಶಾಂತಿ ಕೋರುವವರು :**

**ಶ್ರೀಮತಿ ಸಂಗಮ್ಮ ಶ್ರೀ ಅಡಿವೆಪ್ಪ ನಾಗೂರು,**
ಮಾಲೀಕರು, ಚೇತನಾ ಎಂಟರ್ ಪ್ರೈಸಸ್
**ಶ್ರೀಮತಿ ದಿವ್ಯ ಶ್ರೀ ಗುರುರಾಜ್ ಎನ್.ಎ**
**ಶ್ರೀಮತಿ ಚೇತನಾ ಶ್ರೀ ಪ್ರವೀಣ್ ಹುಲ್ಯಾಳ, ಹುಬ್ಬಳ್ಳಿ**

ವಿ.ಸೂ. : ಆತ್ಮೀಯರೇ ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.


KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas